ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 31 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 45 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕೋಟ್ಯಾಂತರ ರೂಪಾಯಿ ಅಕ್ರಮ ವರ್ಗಾವಣೆ: ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಮಾಜಿ ಡಿಸಿಎಂ ಡಾ.ಅಶ್ವಥ್ ನಾರಾಯಣ್ ಆಗ್ರಹ

- ಹಣ ವರ್ಗಾವಣೆ ಸಿಎಂ ನೇತೃತ್ವದ ಹಣಕಾಸು ಇಲಾಖೆಗೆ ತಿಳಿದಿರಲಿಲ್ಲವೆ?
- ಆರ್ಥಿಕ ಇಲಾಖೆ ಅನುಮೋದನೆ ಇಲ್ಲದೆ ಹಣ ವರ್ಗಾವಣೆ ಆಯಿತೆ?
- ಗ್ಯಾರಂಟಿ ಹೆಸರಲ್ಲಿ ಲೂಟಿ; ಸಿದ್ದರಾಮಯ್ಯ ರಾಜೀನಾಮೆಗೆ ಜೂ.6ರ ಗಡುವು



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಜಿ ಡಿಸಿಎಂ ಡಾ.ಅಶ್ವಥ್ ನಾರಾಯಣ್ ಮಾತನಾಡಿದರು. ಶಾಸಕ ಟಿ.ಎಸ್.ಶ್ರೀವತ್ಸ, ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಇನ್ನಿತರರಿದ್ದಾರೆ.

ಮೈಸೂರು, ಮೇ30(ಬಿಎಲ್‌ಯು)– ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಪ್ರಕರಣದಲ್ಲಿ ಆರ್ಥಿಕ ಇಲಾಖೆ ಅನುಮತಿ ಪಡೆದೆ ಕೋಟ್ಯಾಂತರ ರೂಪಾಯಿ ವರ್ಗಾವಣೆ ಆಗಿರುವುದರಿಂದ ಹಣಕಾಸು ಖಾತೆ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಇದರ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ್ ಆಗ್ರಹಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ಸಂಪುಟದ ಅನುಮತಿ ಇಲ್ಲದೆ, ಆರ್ಥಿಕ ಇಲಾಖೆ ಅನುಮೋದನೆ ಇಲ್ಲದೆ ಖಜಾನೆಯಿಂದ ಹಣ ವರ್ಗಾವಣೆ ಸಾಧ್ಯವೆ? ಹಾಗಾದರೆ ಆರ್ಥಿಕ ಇಲಾಖೆ ಕೆಲಸ ಮಾಡುತ್ತಿಲ್ಲವೆ ಎಂದು ಪ್ರಶ್ನಿಸಿದರು.

ಆರ್ಥಿಕ ಇಲಾಖೆ ಗಮನಕ್ಕೆ ಬಾರದೆ ಅಕೌಂಟ್ ಕ್ರಿಯೇಟ್ ಆಗಲು ಹೇಗೆ ಸಾಧ್ಯ? ಹಣಕಾಸು ಖಾತೆ ಹೊಂದಿರುವ ಸಿದ್ದರಾಮಯ್ಯ ಗಮನಕ್ಕೆ ಬಾರದೆ ಇಷ್ಟೊಂದು ಪ್ರಮಾಣದ ಹಣ ವರ್ಗಾವಣೆ ಆಗಲು ಸಾಧ್ಯವಿದೆಯೇ? ಎಂದು ಸರಣಿ ಪ್ರಶ್ನೆಗಳ ಕೇಳಿದ ಡಾ.ಅಶ್ವಥ್ ನಾರಾಯಣ್, 14 ಬಾರಿ ಬಜೆಟ್ ಮಂಡಿಸಿರುವ, ಅನುಭವಿ ಹಿರಿಯರಾಗಿರುವ ಸಿದ್ದರಾಮಯ್ಯ ಇದರ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಹಣ ವಾಪಸು ಬರುತ್ತದೆ ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವ ನಾಗೇಂದ್ರ ಹೇಳುತ್ತಾರೆ. ಹಾಗಾದರೆ ಹಣ ಅಕ್ರಮವಾಗಿ ವರ್ಗಾವಣೆ ಆಗಿರುವುದನ್ನು ನಾಗೇಂದ್ರ ಒಪ್ಪಿಕೊಂಡಂತೆ ಅಲ್ಲವೆ? ಈ ಹಿನ್ನೆಲೆಯಲ್ಲಿ ನಾಗೇಂದ್ರ ಅವರನ್ನು ಕೂಡಲೆ ಬಂಧಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ಅಮಾಯಕ ಸರ್ಕಾರಿ ಅಧಿಕಾರಿಯನ್ನು ಬಲಿ ತೆಗೆದುಕೊಂಡಿದೆ. ಬಿಜೆಪಿ ಸರ್ಕಾರದ ಬಗ್ಗೆ ಪೇಸಿಎಂ, 40 ಪರ್ಸೆಂಟ್ ಸರ್ಕಾರ ಎಂದು ಸುಳ್ಳು ಪ್ರಚಾರ ಮಾಡಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಆಡಳಿತ ಆರಂಭಿಸಿದ ಕೆಲವೇ ತಿಂಗಳಲ್ಲಿ ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿದರು.

ಸಚಿವರು ಹಣ ಮಾಡಲು ಪೈಪೋಟಿಗಿಳಿದಿದ್ದಾರೆ. ಪ್ರತಿಯೊಂದು ಇಲಾಖೆಯಲ್ಲೂ ಭ್ರಷ್ಟಾಚಾರ ನಡೆಯುತ್ತದೆ. ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಹೆಸರಲ್ಲಿ ರಾಜ್ಯವನ್ನು ಲೂಟಿ ಮಾಡುತ್ತಿದೆ. ಇಂತಹ ಭಂಡ ಸರ್ಕಾರವನ್ನು ರಾಜ್ಯದ ಜನತೆ ಎಂದೂ ಕಂಡಿಲ್ಲ ಎಂದು ಅಭಿಪ್ರಾಯಪಟ್ಟರು.

ಒಬ್ಬ ಸರ್ಕಾರಿ ಅಧಿಕಾರಿ ಸತ್ಯ ಹೇಳಿ, ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗಿದ್ದಾನೆ. ಆದರೆ ಈ ಬಗ್ಗೆ ಸ್ಪಷ್ಟನೆ ನೀಡಬೇಕಾದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಹಿರಿಯ ಸಚಿವರು ಮಾಯವಾಗಿದ್ದಾರೆ. 50 ವರ್ಷದ ರಾಜಕಾರಣ ಮಾಡಿದ್ದೇನೆ, ತಾನು ಅಹಿಂದ ಪರ ಎಂದು ತಮ್ಮನ್ನು ತಾವೇ ಹೊಗಳಿಕೊಳ್ಳುತ್ತಾರೆ. ಆದರೆ ಅಹಿಂದ ವರ್ಗಕ್ಕೆ ಸೇರಬೇಕಾದ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಇವರನ್ನು ಯಾವ ಜೈಲಿಗೆ ಕಳುಹಿಸಬೇಕು ಎಂದು ಪ್ರಶ್ನಿಸಿದರು.

ಭ್ರಷ್ಟಾಚಾರ ಮಾತ್ರವಲ್ಲದೆ ರಾಜ್ಯದಲ್ಲಿ ಪ್ರತಿ ದಿನ ಕೊಲೆ, ಸುಲಿಗೆಯಂತಹ ಪ್ರಕರಣಗಳು ನಡೆದು ಕಾನೂನು ಮತ್ತು ಸುವ್ಯವಸ್ಥೆ ತೀರಾ ಹದಗೆಟ್ಟಿದೆ. ಆಡಳಿತ ನಡೆಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುವ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು. ಇದಕ್ಕೆ ಜೂ.6ರವರೆಗೆ ಗಡುವು ನೀಡುತ್ತೇವೆ. ಅಷ್ಟರಲ್ಲಿ ರಾಜೀನಾಮೆ ನೀಡದಿದ್ದರೆ ರಾಜ್ಯಾದ್ಯಂತ ತೀವ್ರ ರೀತಿಯ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ಪಾಪದ ಕೊಡ ತುಂಬಿದ ದಿನ ಸರ್ಕಾರ ಪತನ

ಚೊಂಬು ಹಿಡಿದಿರುವ ಕಾಂಗ್ರೆಸ್‌ನವರ ಪಾಪದ ಕೊಡ ತುಂಬಿದ ಕೂಡಲೆ ಈ ಸರ್ಕಾರ ಪತನವಾಗಲಿದೆ ಎಂದು ಡಾ.ಅಶ್ವಥ್ ನಾರಾಯಣ್ ಭವಿಷ್ಯ ನುಡಿದರು. ಈ ಸರ್ಕಾರವನ್ನು ನಾವು ಬೀಳಿಸುವ ಅವಶ್ಯಕತೆ ಇಲ್ಲ. ಅವರಲ್ಲೇ ಕಿತ್ತಾಟವಾಗಲಿದೆ. ಅವರಿಂದಲೇ ಸರ್ಕಾರ ಉರುಳುತ್ತದೆ ಎಂದರು.

ಹಣ ಮಾಡಲು ಸಚಿವರು ಪೈಪೋಟಿಗಿಳಿದಿದ್ದಾರೆ. ಇಂತಹ ಲೂಟಿ ಎಲ್ಲೆ ಮೀರಿದಾಗ ಪಾಪದ ಕೊಡ ತುಂಬುತ್ತದೆ. ಆಗ ಸಹಜವಾಗಿಯೇ ಈ ಸರ್ಕಾರ ಬೀಳುತ್ತದೆ. ಅಧಿಕಾರಕ್ಕೆ ಬಂದ ಒಂದು ವರ್ಷದಲ್ಲೆ ಈ ಪರಿ ಭ್ರಷ್ಟಾಚಾರದಲ್ಲಿ ತೊಡಗಿದರೆ ಮುಂದಿನ ದಿನಗಳಲ್ಲಿ ಈ ರಾಜ್ಯದ ಪರಿಸ್ಥಿತಿ ಊಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಡಾ.ಅಶ್ವಥ್ ನಾರಾಯಣ್ ಆಂತಕ ವ್ಯಕ್ತಪಡಿಸಿದರು.

ಪ್ರಜ್ವಲ್ ದೇಶಕ್ಕೆ ಬಂದರೂ ಕಾಂಗ್ರೆಸ್‌ನಿಂದ ಆಕ್ಷೇಪವೇಕೆ?

ಎಲ್ಲಾ ವಿಚಾರ ಗೊತ್ತಿದ್ದರೂ ಸಂಸದ ಪ್ರಜ್ವಲ್ ರೇವಣ್ಣನನ್ನು ವಿದೇಶಕ್ಕೆ ಹೋಗಲು ಅವಕಾಶ ಮಾಡಿಕೊಟ್ಟ ಕಾಂಗ್ರೆಸ್‌ನವರು, ಆತ ದೇಶಕ್ಕೆ ವಾಪಸಾಗುತ್ತಿದ್ದರೂ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ ಎಂದು ಡಾ.ಅಶ್ವಥ್ ನಾರಾಯಣ್ ಹೇಳಿದರು.

ಪ್ರಜ್ವಲ್ ರೇವಣ್ಣನ ಬಗ್ಗೆ ಎಲ್ಲಾ ವಿಚಾರಗಳು ಕಾಂಗ್ರೆಸ್ ನಾಯಕರಿಗೆ ಗೊತ್ತಿತ್ತು. ಈ ವಿಚಾರವಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಡಿರುವ ಮಾತುಗಳು ವೈರಲ್ ಆಗಿವೆ. ಹೀಗಿರುವಾಗ ಪ್ರಜ್ವಲ್ ವಿದೇಶಕ್ಕೆ ಹೋಗಲು ಹೇಗೆ ಬಿಟ್ಟರು. ಇವರಿಗೆ ನಾಚಿಕೆ ಆಗಬೇಕು ಎಂದು ಡಾ.ಅಶ್ವಥ್ ನಾರಾಯಣ್ ಕಿಡಿಕಾರಿದರು.

ಮಹಿಳೆಯರ ಅಶ್ಲೀಲ ವಿಡಿಯೋ ರೆಕಾರ್ಡ್ ಮಾಡಿರುವುದು ಎಷ್ಟು ಅಪರಾಧವೋ, ಆ ವಿಡಿಯೋ ವೈರಲ್ ಮಾಡಿರುವುದು ಕೂಡ ಅಷ್ಟೆ ಅಪರಾಧ. ಈ ಹಿನ್ನೆಲೆಯಲ್ಲಿ ಆಡಿಯೋದಲ್ಲಿ ಮಾತನಾಡಿರುವ ಡಿ.ಕೆ.ಶಿವಕುಮಾರ್, ಶಿವರಾಮೇಗೌಡ ಸೇರಿದಂತೆ ಇತರರನ್ನು ಎಸ್‌ಐಟಿ ವಿಚಾರಣೆಗೊಳಪಡಿಸಬೇಕು ಎಂದು ಆಗ್ರಹಿಸಿದರು.

ಆದರೆ ಪ್ರಮುಖರನ್ನೆ ವಿಚಾರಣೆ ಮಾಡದ ಎಸ್‌ಐಟಿಯಿಂದ ಯಾವ ನ್ಯಾಯ ನಿರೀಕ್ಷಿಸಲು ಸಾಧ್ಯ ಎಂದು ಪ್ರಶ್ನಿಸಿದ ಡಾ.ಅಶ್ವಥ್ ನಾರಾಯಣ್, ರಾಜ್ಯ ಸರ್ಕಾರದ ಹಸ್ತಕ್ಷೇಪವಿಲ್ಲದೆ, ನ್ಯಾಯಾಲಯದ ಮಾರ್ಗದರ್ಶನದಲ್ಲಿ ಎಸ್‌ಐಟಿ ತನಿಖೆ ನಡೆಸಿದರೆ ಮಾತ್ರ ನ್ಯಾಯ ಸಿಗುತ್ತದೆ ಎಂದರು. ಕಾಂಗ್ರೆಸ್‌ನವರು ಯಾವುದಾದರೂ ಪ್ರಕರಣ ನಡೆದರೆ ಸಾಕು. ಅದನ್ನು ಸಿಐಡಿ ಅಥವಾ ಎಸ್‌ಐಟಿಗೆ ವಹಿಸುತ್ತಾರೆ. ಆದರೆ ಈ ತನಕ ಯಾವುದೇ ಪ್ರಕರಣದಲ್ಲಿ ಯಾರಿಗೂ ಶಿಕ್ಷೆ ಆಗಿಲ್ಲ ಎಂದು ಕಿಡಿಕಾರಿದರು. ಪ್ರಜ್ವಲ್ ತಪ್ಪಿತಸ್ಥನಾಗಿದ್ದರೆ ಶಿಕ್ಷೆ ಆಗಬೇಕೆಂದು ಬಿಜೆಪಿ ಹಾಗೂ ಜೆಡಿಎಸ್ ಸ್ಪಷ್ಟನೆ ನೀಡಿರುವ ಕಾರಣ ಈ ಬೆಳವಣಿಗೆಗಳಿಂದ ನಮಗೇಕೆ ಮುಜುಗರ ಆಗುತ್ತದೆ ಎಂದು ಪ್ರಶ್ನಿಸಿದರು.

ಡಾ.ಅಶ್ವಥ್ ನಾರಾಯಣರಿಗೆ ಕುರುಬ ಸಮುದಾಯದ ಬಿಜೆಪಿ ಕಾರ್ಯಕರ್ತರ ತರಾಟೆ



ಮೈಸೂರು, ಮೇ30(ಬಿಎಲ್‌ಯು)– ಬಿಜೆಪಿಯಲ್ಲಿ ಕುರುಬ ಸಮುದಾಯವನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿ ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ್ ಅವರನ್ನು ಅವರ ಪಕ್ಷದ ಮುಖಂಡರೇ ತರಾಟೆಗೆ ತೆಗೆದುಕೊಂಡ ಪ್ರಸಂಗ ಇಂದು ನಡೆಯಿತು.

ನಗರದ ಬಿಜೆಪಿ ಕಚೇರಿ ಬಳಿ ಮೈಸೂರಿನ ಸಾಲಿಗ್ರಾಮ ತಾಲೂಕಿನ ಕುರುಬ ಸಮುದಾಯದ ಬಿಜೆಪಿ ಕಾರ್ಯಕರ್ತರು ಜಮಾಯಿಸಿದ್ದರು. ಡಾ.ಅಶ್ವಥ್ ನಾರಾಯಣ್ ಪತ್ರಿಕಾಗೋಷ್ಠಿ ನಡೆಸಲು ಆಗಮಿಸುತ್ತಿದ್ದಂತೆ ಅವರನ್ನು ತರಾಟೆಗೆ ತೆಗೆದುಕೊಂಡರು. ನಾವೆಲ್ಲಾ ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತರಾಗಿದ್ದೇವೆ. ಆದರೆ ನಾವು ಕುರುಬ ಸಮುದಾಯದವರು ಎಂಬ ಕಾರಣಕ್ಕೆ ಪಕ್ಷದಲ್ಲಿ ನಮ್ಮನ್ನು ಕಡೆಗಣಿಸಲಾಗಿದೆ. ಕುರುಬ ಸಮುದಾಯದವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಾತ್ರ ಬೆಂಬಲಿಸುತ್ತಾರೆ ಎಂದು ನಮ್ಮನ್ನು ನಿರ್ಲಕ್ಷಿಸಲಾಗಿದೆ ಎಂದು ಆರೋಪಿಸಿದರು.

ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಒಂದೊಂದು ಬೂತ್ ಗೆ ಇಬ್ಬರನ್ನು ನೇಮಕ ಮಾಡಲಾಗಿತ್ತು. ಆದರೆ ಯಾವ ಹಿರಿಯ ಮುಖಂಡರು ನಮ್ಮನ್ನು ಸಂಪರ್ಕಿಸಲಿಲ್ಲ, ಪ್ರಚಾರ ಮಾಡಲು ಮಾರ್ಗದರ್ಶನ ನೀಡಲಿಲ್ಲ ಎಂದು ಕಿಡಿಕಾರಿದರು.

ಪತ್ರಿಕಾಗೋಷ್ಠಿ ನಂತರ ನಿಮ್ಮನ್ನು ಭೇಟಿ ಮಾಡಿ ಮಾತನಾಡುತ್ತೇನೆ ಎಂದು ಬಿಜೆಪಿ ಕಾರ್ಯಕರ್ತರನ್ನು ಡಾ.ಅಶ್ವಥ್ ನಾರಾಯಣ್ ಸಮಾದಾನಪಡಿಸಿದರು. ಪತ್ರಿಕಾಗೋಷ್ಠಿ ನಂತರ ಪ್ರತ್ಯೇಕ ಸಭೆ ನಡೆಸಿ ಮುಂದೆ ಹೀಗೆ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಉಪ ಅಂಚೆ ಪಾಲಕ ಗುರುನಂಜಪ್ಪ ಅವರಿಗೆ ಬೀಳ್ಕೊಡುಗೆ



ಮೈಸೂರಿನ ಅರಸು ಗೆಳೆಯರ ಬಳಗ ಪ್ರತಿಷ್ಠಾನದ ವತಿಯಿಂದ ನಿವೃತ್ತರಾದ ಉಪ ಅಂಚೆ ಪಾಲಕ ಗುರುನಂಜಪ್ಪ ಅವರನ್ನು ಸನ್ಮಾನಿಸಿ, ಬೀಳ್ಕೊಡಲಾಯಿತು. ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್, ಡಾ.ಎಂ.ಜಿ.ಆರ್. ಅರಸ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅರಸು ಗೆಳೆಯರ ಬಳಗ ಪ್ರತಿಷ್ಠಾನದ ಅಧ್ಯಕ್ಷ ಡಾ.ಪಿ.ಶಾಂತರಾಜ್ ಅರಸ್, ಗುರುನಂಜಪ್ಪನವರ ಪುತ್ರಿ, ಅವರ ಅಳಿಯ ಮತ್ತಿತರರು ಉಪಸ್ಥಿತರಿದ್ದರು.

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರವೇಶಕ್ಕೆ ಅರ್ಜಿ

ಮೈಸೂರು, ಮೇ 30–ವರುಣದ ಕೆಂಪೇಗೌಡನಹುಂಡಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2024–25ನೇ ಸಾಲಿನ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಎರಡು ವರ್ಷದ ವಿದ್ಯುತ್ ಕರ್ಮಿ, ಜೋಡಣೆಗಾರ, ಎಂ.ಇ.ವಿ ಹಾಗೂ ಒಂದು ವರ್ಷದ ಐ.ಆರ್.ಡಿ.ಎಂ ವೃತ್ತಿಗಳು ಲಭ್ಯವಿದೆ.

ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರುವ ಆಸಕ್ತ ಅಭ್ಯರ್ಥಿಗಳು https://www.cite.karnataka.gov.in ವೆಬ್‌ಸೈಟ್ ಮೂಲಕ ಜೂ.3ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರ ಕಚೇರಿ ದೂ.ಸಂ: 0821–2971291 ಹಾಗೂ ಮೊ.ಸಂ: 9008600076, 9972729230, 9148472115 ಅನ್ನು ಸಂಪರ್ಕಿಸಬಹುದು

ಪ್ರತಿಭಾ ಪುರಸ್ಕಾರ; ಸಾಧಕರಿಗೆ ಸನ್ಮಾನ

ಮೈಸೂರು, ಮೇ 30–2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಜೂ.2ರಂದು ಸಂಜೆ 5 ಗಂಟೆಗೆ ನಿವೇದಿತ ನಗರದ ಎಸ್.ಆರ್.ಸುಬ್ಬರಾವ್ ಉದ್ಯಾನದಲ್ಲಿ ಆಯೋಜಿಸಲಾಗಿದೆ. ನಗರಪಾಲಿಕೆ ಮಾಜಿ ಸದಸ್ಯ ಜೆ.ಎಸ್.ಜಗದೀಶ್ ನೇತೃತ್ವದಲ್ಲಿ ಆಯೋಜಿಸಿರುವ ಕಾರ್ಯಕ್ರಮವನ್ನು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದಾರೆ. ಸಂಸದ ಪ್ರತಾಪ್ ಸಿಂಹ ವಿದ್ಯಾರ್ಥಿಗಳನ್ನು ಅಭಿನಂದಿಸಲಿದ್ದಾರೆ. ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಲಿದ್ದು, ನೈಪುಣ್ಯ ಶಿಕ್ಷಣ ಸಂಸ್ಥೆ ಅಧ್ಯಕ್ಷ ರಘು ಕೌಟಿಲ್ಯ ಶುಭ ನುಡಿಯನ್ನಾಡಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕವೀಶ್‌ಗೌಡ ಭಾಗವಹಿಸಲಿದ್ದಾರೆ. ಇದೇ ವೇಳೆ ಭಾರತೀಯ ಅರಣ್ಯ ಸೇವೆಗೆ 33ನೇ ರ‍್ಯಾಂಕ್ (ಐಎಫ್‌ಎಸ್) ಪಡೆದಿರುವ ಸೌಮ್ಯಾ ರಾಂಪುರೆ ಅವರನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಪ್ರತ್ಯೇಕ ಪ್ರಕರಣದಲ್ಲಿ ಇಬ್ಬರು ನಾಪತ್ತೆ

ಮೈಸೂರು, ಮೇ 30–ಮೈಸೂರಿನ ವಿದ್ಯಾರಣ್ಯಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಬ್ಬರು ವ್ಯಕ್ತಿಗಳು ನಾಪತ್ತೆಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ನಾಗರಾಜು (55) ನಾಪತ್ತೆಯಾದವರು. ಇವರು ಮೇ 16ರಂದು ಬೆಳಗ್ಗೆ 7 ಗಂಟೆ ಸಮಯದಲ್ಲಿ ಕೆಲಸಕ್ಕೆ ಹೋಗಿ ಬರುತ್ತೇನೆಂದು ಹೇಳಿ ಹೋದವರು ವಾಪಸ್ ಮನೆಗೆ ಬಂದಿಲ್ಲ ಎಂದು ದೂರು ದಾಖಲಾಗಿದೆ.



ನಾಗರಾಜು



ಸ್ವಾಮಿ

ಮತ್ತೊಂದು ಪ್ರಕರಣದಲ್ಲಿ ಸ್ವಾಮಿ (56) ಎಂಬುವರು ಮೇ 23ರಂದು ಬೆಳಗ್ಗೆ ಮನೆಯಿಂದ ಹೋದವರು ವಾಪಸ್ ಮನೆಗೆ ಬಂದಿಲ್ಲ ಎಂದು ದೂರು ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ದೂ. 2418122, ಪೊಲೀಸ್ ಕಂಟ್ರೋಲ್ ರೂಂ ದೂ.2418339 ಸಂಪರ್ಕಿಸಲು ಕೋರಲಾಗಿದೆ.

ದುಷ್ಕರ್ಮಿಗಳಿಂದ ಬೇಕರಿ ಧ್ವಂಸ

ಮೈಸೂರು, ಮೇ 30(ಎಂಕೆ)– ನಂಜನಗೂಡು ತಾಲೂಕಿನ ಹುರಾ ಗ್ರಾಮದಲ್ಲಿ ಬೇಕರಿಯೊಂದನ್ನು ಕಿಡಿಗೇಡಿಗಳು ಧ್ವಂಸ ಮಾಡಿರುವ ಘಟನೆ ನಡೆದಿದೆ.

ಅಲ್ಲಿನ ಪಾಪಣ್ಣ ಎಂಬುವರ ಬೇಕರಿಗೆ ನುಗ್ಗಿರುವ ಕಿಡಿಗೇಡಿಗಳು, ಒಳಗಿದ್ದ ತಿಂಡಿ ಪದಾರ್ಥಗಳನ್ನು ಚೆಲ್ಲಾಡಿ, ಪಿಠೋಪಕರಣಗಳನ್ನು ರಸ್ತೆಗೆ ಬಿಸಾಡಿರುವ ದೃಶ್ಯಗಳು ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿವೆ. ಈ ಸಂಬಂಧ ಬೇಕರಿ ಮಾಲೀಕ ಪಾಪಣ್ಣ, ಬುಧವಾರ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಕಾಡಯ್ಯ, ವರುಣ, ಶಿವಮೂರ್ತಿ, ಕುಮಾರ್, ಪ್ರವೀಣ್ ಕುಮಾರ್, ಶಶಿಧರ್ ಮತ್ತು ಕಮಲ್‌ಕುಮಾರ್ ಎಂಬುವರ ವಿರುದ್ಧ ದೂರು ನೀಡಿದ್ದಾರೆ.

ನಿಧನ

ನಾರಾಯಣಸ್ವಾಮಿ ನಾಯ್ಡು



ಮೈಸೂರು, ಮೇ 30– ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಿ. ನಾರಾಯಣಸ್ವಾಮಿ ನಾಯ್ಡು ಬೆಂಗಳೂರಿನ ತಮ್ಮ ಪುತ್ರನ ನಿವಾಸದಲ್ಲಿ ಗುರುವಾರ ನಿಧನರಾದರು. ಮೈಸೂರಿನ ಕೆ.ಆರ್. ಮೊಹಲ್ಲಾದ ನಾಲಾ ಬೀದಿಯ ನಿವಾಸಿಯಾಗಿದ್ದ ದಿವಂಗತರು ಪತ್ನಿ, ಇಬ್ಬರು ಪುತ್ರರು ಮತ್ತು ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ದಿವಂಗತರ ಅಂತ್ಯಕ್ರಿಯೆ ಬೆಂಗಳೂರಿನಲ್ಲಿ ಗುರುವಾರ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಮತ್ತು ಸಿಬ್ಬಂದಿವರ್ಗ ಇವರ ನಿಧನಕ್ಕೆ ಸಂತಾಪ ಸೂಚಿಸಿದೆ.

ಸುಶಿಕ್ಷಿತರ ಪ್ರತಿನಿಧಿಯಾಗಲು ಮರಿತಿಬ್ಬೇಗೌಡ ಸೂಕ್ತ ಅಭ್ಯರ್ಥಿ

ಕೆ.ಆರ್. ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿಮತ



ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕಾಂಗ್ರೆಸ್ ಮುಖಂಡರೊಂದಿಗೆ ಮೈಸೂರಿನ ಹಲವು ಶಾಲಾ–ಕಾಲೇಜುಗಳಿಗೆ ಭೇಟಿ ನೀಡಿ, ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರವಾಗಿ ಮತಯಾಚಿಸಿದರು.


ಮೈಸೂರು: ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕುರುಬಾರಹಳ್ಳಿಯ ಸಿದ್ದಾರ್ಥನಗರ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರದ ಪ್ರಥಮ ದರ್ಜೆ ಕಾಲೇಜು, ಜ್ಯೋತಿ ಪದವಿಪೂರ್ವ ಕಾಲೇಜು ಮತ್ತಿತರ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರವಾಗಿ ಮತಯಾಚಿಸಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಮುಖಂಡರಾದ ಅಪ್ಪುಗೌಡ, ಸೋಮು, ರವಿ, ಪ್ರಾಶ್, ರವಿಶಂಕರ್, ರಾಮಸ್ವಾಮಿ, ಪುಟ್ಟಸ್ವಾಮಿ, ಆನಂದ, ರೂಪೇಶ್, ಸಿದ್ದರಾಮು, ವಿನಯ್, ಕುಮಾರ್, ಶಂಕರ್ ಮತ್ತಿತರರಿದ್ದರು.

ನಂತರ ಮಾತನಾಡಿದ ಎಂ.ಕೆ. ಸೋಮಶೇಖರ್ ಮೇಲ್ಮನೆ ಎನ್ನುವಂತದ್ದು ಪ್ರಬುದ್ಧರು, ಬುದ್ಧಿವಂತರು, ಜ್ಞಾನಿಗಳು ಪ್ರತಿನಿಧಿಸುವ ಕ್ಷೇತ್ರ. ರಾಜ್ಯದ ಅಭಿವೃದ್ಧಿಗೆ, ಸರ್ವತೋಮುಖ ಬೆಳವಣಿಗೆಗೆ ಹಲವಾರು ಕಾನೂನುಗಳನ್ನು ರೂಪಿಸುವಂತಹ ಜಾಗ. ಅಂತಹ ಸ್ಥಳಕ್ಕೆ ಹೋಗಿ ಸುಶಿಕ್ಷಿತರ ಪರ ಧ್ವನಿ ಎತ್ತುವ, ಶೈಕ್ಷಣಿಕ ಪ್ರಗತಿಗೆ ಯೋಜನೆಗಳನ್ನು ರೂಪಿಸುವ ಮಹತ್ತರವಾದ ಹೊಣೆಗಾರಿಕೆ ವಿಧಾನಪರಿಷತ್ ಸದಸ್ಯರಿಗಿದೆ. ಸತತವಾಗಿ ಮೇಲ್ಮನೆಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗುತ್ತಿರುವ ಮರಿತಿಬ್ಬೇಗೌಡರವರು ಅನುಭವಿ ರಾಜಕಾರಣಿ. ಸದಾ ಶಿಕ್ಷಕರ ನೋವುಗಳಿಗೆ ಧ್ವನಿಯಾಗಿ, ಪರಿಷತ್‌ನಲ್ಲಿ ಸಮಸ್ಯೆಗಳನ್ನು ಪ್ರಸ್ತಾಪಿಸಿ ಸರ್ಕಾರದ ಮೂಲಕ ಪರಿಹಾರಗಳನ್ನು ಕಲ್ಪಿಸುವ ಮೂಲಕ ತಮ್ಮ ಜವಾಬ್ದಾರಿಯನ್ನು ಅತ್ಯುತ್ತಮವಾಗಿ ನಿಭಾಯಿಸುತ್ತಿರುವ ಪ್ರತಿನಿಧಿ. ದ್ವೇಷ ರಾಜಕಾರಣ, ಭ್ರಷ್ಟಾಚಾರದ ನಂಟಿಲ್ಲದ ಮರಿತಿಬ್ಬೇಗೌಡರು ಹಾಸನ, ಮಂಡ್ಯ, ಚಾಮರಾಜನಗರ, ಮೈಸೂರಿನ ಪ್ರತಿಯೊಬ್ಬ ಶಿಕ್ಷಕರ ಒಡನಾಟವುಳ್ಳವರು ಎಂದು ಗುಣಗಾನ ಮಾಡಿದ್ದಾರೆ.

ಕೋಮುವಾದಿ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ಜೆಡಿಎಸ್ ಪಕ್ಷ ಹಣಬಲದ ಮೂಲಕ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಬಿಜೆಪಿಗರಿಗೆ ಜೆಡಿಎಸ್ ಅಭ್ಯರ್ಥಿ ಮೇಲೆ ವಿಶ್ವಾಸವಿಲ್ಲ. ಮೇಲ್ನೋಟಕ್ಕೆ ಪ್ರಚಾರದಲ್ಲಿ ಪಾಲ್ಗೊಳ್ಳುತ್ತಿರುವ ಬಿಜೆಪಿ ಮುಖಂಡರು ಜೆಡಿಎಸ್ ಅಭ್ಯರ್ಥಿಯನ್ನು ಒಪ್ಪುತ್ತಿಲ್ಲ. ಮಾಜಿ ಪರಿಷತ್ ಸದಸ್ಯರಾದ ಶ್ರೀಕಂಠೇಗೌಡರಲ್ಲೂ ಮೈತ್ರಿ ಅಭ್ಯರ್ಥಿ ಬಗ್ಗೆ ಅಸಮಾಧಾನವಿದೆ ಎಂದಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.05.2024 ಶುಕ್ರವಾರ, ಮಳೆ ನಕ್ಷತ್ರ: ರೋಹಿಣಿ, 25.05.2024ರಿಂದ 07.06.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪೂಭಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಅಪೂರ್ವ ಸ್ನೇಹ ಬಳಗ ಹಾಗೂ ಅರಿವು ಸಂಸ್ಥೆ :** ಪ್ರಸಕ್ತ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳಿಗೆ ಗುಲಾಬಿ ಹೂವು ಹಾಗೂ ಮೈಸೂರು ಪಾಕು ಮತ್ತು ಪುಸ್ತಕ ಪೆನ್ ನೀಡಿ ಮಕ್ಕಳನ್ನು ಶಾಲೆಗೆ ವಿಶೇಷವಾಗಿ ಸ್ವಾಗತಿಸುವ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಟಿಎಸ್ ಶ್ರೀವತ್ಸ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರಾದ ಆರ್.ಎಚ್.ಪವಿತ್ರ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಡಾ. ಕೆ.ರಘುರಾಮ್ ವಾಜಪೇಯಿ, ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಶಾಲೆಯ ಮುಖ್ಯೋಪಾಧ್ಯಾಯಿನಿ ಸುಗುಣ, ಸ್ಥಳ: ಅಕ್ಕನ ಬಳಗ ಶಾಲೆ, ತ್ಯಾಗರಾಜ ರಸ್ತೆ, ಬೆಳಗ್ಗೆ 9.30ಕ್ಕೆ.
- **ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ಸ್ ಸ್ಟೂಡೆಂಟ್ ಕ್ಲಬ್ಸ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಸಂಪನ್ಮೂಲ ವ್ಯಕ್ತಿಗಳಾದ ಪಿ.ಎನ್. ಮೋಹನ್ ಕುಮಾರ್, ಸುರೇಶ್, ಅಧ್ಯಕ್ಷತೆ : ಎನ್‌ಐಇ ಪ್ರಿನ್ಸಿಪಾಲ್ ಡಾ. ರೋಹಿಣಿ ನಾಗಪದ್ಮ, ಸ್ಥಳ: ಸರ್ವಪಲ್ಲಿ ರಾಧಾಕೃಷ್ಣನ್ ಸೆಮಿನಾರ್ ಹಾಲ್, ಬೆಳಗ್ಗೆ 10ಕ್ಕೆ.
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್, ಸುಜೋಕ್, ಅಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: 222, ಲೀಲಾವತಿ ನಾಯ್ಡು, ಅರವಿಂದನಗರ, ಬೆಳಗ್ಗೆ 10.30ಕ್ಕೆ
- **ಮೈಸೂರು ಕನ್ನಡ ವೇದಿಕೆ :** ಶ್ರೀ ಬಸವೇಶ್ವರ ಜಯಂತಿ ಮತ್ತು ಕಾರ್ಮಿಕ ದಿನಾಚರಣೆ ಪ್ರಯುಕ್ತ ಕಾಯಕಯೋಗಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಪ್ರಶಸ್ತಿ ಪ್ರಧಾನಿಸುವವರು : ಪಾಲಿಕೆ ಮಾಜಿ ಸದಸ್ಯ ಗೋಪಿ, ಪ್ರಧಾನ ಭಾಷಣ : ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಅಧ್ಯಕ್ಷತೆ : ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಉಪಸ್ಥಿತರು : ಸಮಾಜ ಸೇವಕ ಡಾ. ಶ್ರೀಷಾ ಭಟ್, ಸಾಹುಕಾರ್‌ಹುಂಡಿ ಮಹದೇವು, ನಾಲಾಬೀದಿ ರವಿ, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನ, ಸುಬ್ಬರಾಯನಕೆರೆ, ಬೆಳಗ್ಗೆ 11.30ಕ್ಕೆ.
- **ಅನುಭೂತಿ ಟ್ರಸ್ಟ್ :** ಪ್ರಾರಂಭೋತ್ಸವ ಹಾಗೂ ಎಸ್. ರಾಮನಾಥ ರಚಿಸಿರುವ ಪುಸ್ತಕಗಳ ಬಿಡುಗಡೆ, ಅಧ್ಯಕ್ಷತೆ : ಹಿರಿಯ ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ, ಪುಸ್ತಕ ಬಿಡುಗಡೆ: ರಂಗಕರ್ಮಿ ಮಂಡ್ಯ ರಮೇಶ್, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪನಿರ್ದೇಶಕರಾದ ಶ್ರೀಮತಿ ನಿರ್ಮಲಾ ಮಠಪತಿ, ಸ್ಥಳ: ಬಿ.ವಿ.ಕಾರಂತ ರಂಗಚಾವಡಿ, ರಂಗಾಯಣ, ಸಂಜೆ 5.30ಕ್ಕೆ.
- **ರಂಗವಲ್ಲಿ :** ಭಾಸ ಮಹಾಕವಿಯ ಪ್ರತಿಜ್ಞಾ ಮತ್ತು ಸ್ವಪ್ನ ನಾಟಕ ಪ್ರದರ್ಶನ, ಪರಿಕಲ್ಪನೆ ಮತ್ತು ನಿರ್ದೇಶನ: ಸಾಲಿಯಾನ್ ಉಮೇಶ ನಾರಾಯಣ, ರಂಗವಿನ್ಯಾಸ : ಹೆಚ್.ಕೆ. ದ್ವಾರಕಾನಾಥ್, ಸಂಗೀತ: ದಿಗ್ವಿಜಯ ಹೆಗ್ಗೋಡು, ಸ್ಥಳ: ಕಿರುರಂಗಮಂದಿರ, ಸಂಜೆ 6.30ಕ್ಕೆ
- **ವೀರಶೈವ ಲಿಂಗಾಯತ ವಿವಿಧ ಬಡಾವಣೆಗಳ ಒಕ್ಕೂಟ:** ಶ್ರೀ ಜಗಜ್ಯೋತಿ ಬಸವೇಶ್ವರರ 891ನೇ ಜಯಂತ್ಯೋತ್ಸವ, ಶ್ರೀ ಬಸವೇಶ್ವರ ಪ್ರತಿಮೆಗೆ ಪುಷ್ಪಾರ್ಚನೆ : ಒಕ್ಕೂಟದ ಗೌರವಾಧ್ಯಕ್ಷ ಶ್ರೀ ಸೋಮಶೇಖರ ಸ್ವಾಮೀಜಿ, ಸಹ ಪ್ರಾಧ್ಯಾಪಕಿ ಡಾ.ವಿನೋದಮ್ಮ ಅವರಿಂದ ಉಪನ್ಯಾಸ, ಗಾಯಕ ನಿತಿನ್ ರಾಜಾರಾಮ್ ಶಾಸ್ತ್ರಿ ಅವರಿಂದ ಸುಗಮ ಸಂಗೀತ, ಕು. ಭವ್ಯ –ಗಾಯಕಿ, ಪುರುತೋತ್ತಮ್ ಕಿರಗಸೂರು–ಕೀಬೋರ್ಡ್, ಪರಮೇಶ್ವರ ಹೆಗ್ಗಡೆ–ತಬಲ, ಸುಜೈಂದ್ರರಾವ್–ರಿದಮ್ ಪ್ಯಾಡ್, ವಿದುಷಿ ರಮ್ಯ ಎಸ್. ರಾಘವೇಂದ್ರ ಮತ್ತು ಶಿಷ್ಯರಿಂದ ಭರತನಾಟ್ಯ ಮತ್ತು ವಚನಾಧಾರಿತ ನೃತ್ಯ, ಸ್ಥಳ: ಜೆ.ಪಿ.ನಗರ ರಿಂಗ್ ರಸ್ತೆ, ನಂದಿನಿ ಹಾಲಿನ ಡೈರಿ ಹತ್ತಿರ, ಸಂಜೆ 6ಕ್ಕೆ.
- **ನಾದಬ್ರಹ್ಮ ಸಂಗೀತ ಸಭಾ :** ಟಿ.ಆರ್. ಮಹಾಲಿಂಗಂ ಸಂಸ್ಮರಣೆ ಅಂಗವಾಗಿ ವಿದ್ವಾನ್ ಹೆಚ್.ಎಸ್. ವೇಣುಗೋಪಾಲ್ ಅವರಿಗೆ 'ವೇಣು ಬ್ರಹ್ಮ' ಪದವಿ ಪ್ರದಾನ, ವಿದ್ವಾನ್ ಅಚ್ಯುತ್ ಎಂ. ಅತ್ರೇಯ ಅವರಿಂದ ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ, ವಿದ್ವಾನ್ ವೆಂಕಟೇಶ್ ಜೋಶ್ಯರ್–ಪಿಟೀಲು, ವಿದ್ವಾನ್ ವಿಕ್ರಮ್ ಭಾರದ್ವಾಜ್–ಮೃದಂಗ, ವಿದ್ವಾನ್ ಶ್ರೀನಿಧಿ ಆರ್. ಕೌಂಡಿನ್ಯ–ಘಟಂ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಮೈಸೂರು ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಶ್ರೀ ಕೃಷ್ಣ ಗಾನಸಭಾ :** ಗೌರವ ಸಮರ್ಪಣೆ ಮತ್ತು ಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ಉದ್ಯಮಿ ಎಂ. ಜಗನ್ನಾಥ ಶೆಣೈ ಅವರಿಗೆ ಧರ್ಮ ರತ್ನಾಕರ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರ ರಾಜೇ ಅರಸ್, ಕು. ನಿಸರ್ಗ ಮತ್ತು ವಿಸ್ಮಯ ಅವರಿಂದ ಹಾಡುಗಾರಿಕೆ, ಗಣೇಶ್ ಭಟ್–ಕೀಬೋರ್ಡ್, ಆತ್ಮಾರಾಮ–ತಬಲ, ವಿನಯ ರಂಗದೋಳ್–ರಿದಮ್ ಪ್ಯಾಡ್, ಸ್ಥಳ: ಆಳ್ವಾರ್ ಕಲಾಭವನ, ಗೋಕುಲಂ, ಸಂಜೆ 6ಕ್ಕೆ.
- **ರಂಗಾಯಣ :** ನಾಂದಿ ನಾಟಕೋತ್ಸವ, ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಕಾಕನ ಕೋಟೆ ನಾಟಕ ಪ್ರದರ್ಶನ, ರಚನೆ: ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿನ್ಯಾಸ: ಹೆಚ್.ಕೆ. ದ್ವಾರಕಾನಾಥ್, ಸಂಗೀತ ವಿನ್ಯಾಸ : ಅನುಷ್ ಶೆಟ್ಟಿ ಮತ್ತು ಮುನ್ನ, ನಿರ್ದೇಶನ : ಎಸ್.ರಾಮನಾಥ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಡಾ. ಎಸ್.ವಿ. ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗ ವಹಿಸುತ್ತಾರೆ: ಡಾ.ಸುಮಿತ್ರ, ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್.ಕೇಶವ ಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಅಪೂರ್ವ ಶ್ರೀಧರ್, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕೆ.ಎಸ್.ಹೇರಂಬ ಮತ್ತು ಕೆ.ಎಸ್. ಹೇಮಂತ್–ಕೊಳಲು ವಾದನ, 11.00 ಮಿಶ್ರಮಾಧುರ್ಯ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಕಾದಂಬರಿ ವಿಹಾರ–ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್ ಎಸ್.ಎಸ್, 1.20 ಭಾವಗೀತೆಗಳು–ಪ್ರಥಮ್ ಭಟ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎ.ಎನ್.ಕಿಶನ್–ವೀಣಾವಾದನ, 4.00 ಮಹಿಳಾರಂಗ 'ಸಖೀ ಪದ', ಪ್ರಸ್ತುತಿ: ಎಂ.ಎಸ್.ಭಾರತಿ, 4.30ವೃತ್ತಿ ಮಾರ್ಗದರ್ಶನ–'ಸಮಾಜ ಶಾಸ್ತ್ರ ಅಂದರೆ ಸೋಷಿಯಾಲಜಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಮುಕ್ತ ವಿವಿಸಮಾಜ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ಸಂತೋಷ್ ನಾಯಕ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 6.55 ಕೃಷಿರಂಗ–ಗೆಡ್ಡೆ ಗೆಣಸು ಬೇಸಾಯ ಕುರಿತು ಸಂವಾದ. ಭಾಗವಹಿಸುತ್ತಾರೆ. ಪಿರಿಯಾಪಟ್ಟಣ ತಾಲೂಕು ಹಾರನಹಳ್ಳಿ ಹೋಬಳಿ ಅಡಗೂರು ಗ್ರಾಮದ ಕೃಷಿಕ ದಂಪತಿ ಸುಪ್ರೀತ್ ಹಾಗೂ ಎಸ್.ಪಿ.ಶೋಭಾ, ಸಂದರ್ಶಕರು: ಎನ್.ಕೇಶವಮೂರ್ತಿ, 8.00 ಚರ್ಚೆ, 10.00 ತತ್ವ ಸಂಚಾರ: ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.30 ಸವಿನೆನಪು

TVS iQUBE ELECTRIC
₹12,300/-* CASH BACK
* T&C Apply
AMBARI TVS
Sayyaji Rao Road, Bamboo Bazar, Mandi Mohalla, Mysore - 01.
Ph : 0821 - 2958829, 90191 72160

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಮೇ 31 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 45 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಸ್ಪೇಕ್‌ಟ್ರಾ ಕನ್ವೆನ್ಷನ್ ಸೆಂಟರ್
Hunsur Road, MYSORE
Ph: 0821-2416419 / 95354 91919



ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ ಎಸ್‌ಐಟಿ ಅಧಿಕಾರಿಗಳು ಕರೆದೊಯ್ಯುತ್ತಿರುವ ದೃಶ್ಯವನ್ನು ಟಿವಿ ಚಾನೆಲ್‌ಗಳು ಪ್ರಸಾರ ಮಾಡಿದವು.

ಜರ್ಮನಿಯಿಂದ ಬೆಂಗಳೂರಿಗೆ ಬಂದ
ಪ್ರಜ್ವಲ್ ರೇವಣ್ಣ SIT ವಶಕ್ಕೆ

● ವಿಮಾನ ನಿಲ್ದಾಣದಲ್ಲೇ ಎಸ್‌ಐಟಿಗೆ ಸೆರೆಸಿಕ್ಕ ಪ್ರಜ್ವಲ್ ● ಬೆಳಗ್ಗಿನವರೆಗೆ ಎಸ್‌ಐಟಿ ಕಚೇರಿಯಲ್ಲೇ ಕಳೆದರು ● ಎಷ್ಟೇ ಕರೆದರೂ ಬಾರದ; ಅಂತೂ 34 ದಿನಗಳ ನಂತರ ಸ್ವದೇಶಕ್ಕೆ ವಾಪಸ್ಸಾದ ಸಂಸದ



ಬೆಂಗಳೂರು, ಮೇ 30(ಕೆಂಎಂ)– ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಆರೋಪಿ, ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಎಸ್‌ಐಟಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಜರ್ಮನಿಯ ಮ್ಯೂನಿಚ್‌ನಿಂದ ಭಾರತೀಯ ಕಾಲಮಾನ 4 ಗಂಟೆ 30 ನಿಮಿಷಕ್ಕೆ ಲುಫ್ತಾನ್ಸಾ ವಿಮಾನದಲ್ಲಿ ಪ್ರಯಾಣಿಸಿ, ನೇರವಾಗಿ ಸರಿರಾತ್ರಿ 1.05ಕ್ಕೆ ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರಜ್ವಲ್ ಆಗಮಿಸುತ್ತಿದ್ದಂತೆಯೇ ಅವರನ್ನು ಸುತ್ತುವರೆದ ಎಸ್‌ಐಟಿ ತಂಡ ವಶಕ್ಕೆ ಪಡೆದು, ಸಿಐಡಿ ಕಚೇರಿ ಆವರಣದಲ್ಲಿರುವ ಎಸ್‌ಐಟಿ ಕಚೇರಿಗೆ ಕರೆದೊಯ್ದು ಅವರನ್ನು ಇರಿಸಲಾಗಿದೆ.

ಸರಿರಾತ್ರಿ 1.05ಕ್ಕೆ ಪ್ರಜ್ವಲ್ ಪ್ರಯಾಣಿಸಿದ ವಿಮಾನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಯಿತು. ಪ್ರಜ್ವಲ್ ವಿಮಾನದಿಂದ ಇಳಿದು, ಇಮಿಗ್ರೇಷನ್ ಪ್ರಕ್ರಿಯೆಗಳನ್ನು ಮುಗಿಸುತ್ತಿದ್ದಂತೆಯೇ ಅಲ್ಲಿಯೇ ಬೀಡುಬಿಟ್ಟಿದ್ದ ಎಸ್‌ಐಟಿ ಅಧಿಕಾರಿಗಳು ಅವರನ್ನು ವಶಕ್ಕೆ ಪಡೆದು ಕರೆದೊಯ್ದರು. ಪ್ರಜ್ವಲ್ ಆಗಮನದ ವೇಳೆ ಜನ ಸೇರುವ ಸಾಧ್ಯತೆ ಹೆಚ್ಚಾಗಿದ್ದು, ಇದರಿಂದ ಸಂಚಾರಕ್ಕೆ ತೊಂದರೆ ಆಗಬಹುದು ಎಂಬ ಕಾರಣದಿಂದ ಮುನ್ನೆಚ್ಚರಿಕೆ ಕ್ರಮವಾಗಿ ಇಂದು ಸಂಜೆಯಿಂದಲೇ ಸಂಚಾರ ವಿಭಾಗದ ಪೊಲೀಸರು ಅಲರ್ಟ್ ಆಗಿದ್ದರು. ಪ್ರಜ್ವಲ್ ಬಂಧಿಸಿ ಕರೆದುಕೊಂಡು ಹೋಗುವ ವೇಳೆಗೆ ಯಾವುದೇ ತೊಂದರೆಯಾಗಬಾರದು ಎಂದು ಮುನ್ನೆಚ್ಚರಿಕೆ ವಹಿಸಲಾಗಿತ್ತು. ಏರ್‌ಪೋರ್ಟ್ ರಸ್ತೆಯಲ್ಲಿ ವಾಹನಗಳನ್ನು ನಿಲುಗಡೆ ಮಾಡದಂತೆ ಸೂಚಿಸಿ, ಜನಸಂದಣಿ ಸೇರದಂತೆ ಪೊಲೀಸರು ಕ್ರಮವಹಿಸಿದ್ದರು. ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಕಾನೂನು–ಸುವ್ಯವಸ್ಥೆ ಹಾಗೂ ಸಂಚಾರ ವಿಭಾಗದ ಪೊಲೀಸರು ಭೇಟಿ ನೀಡಿ, ಪ್ರಜ್ವಲ್ ಕರೆದೊಯ್ಯುವ ಮಾರ್ಗವನ್ನು ನಿರ್ಧರಿಸಿ, ಪರಿಶೀಲನೆ ಮಾಡಿದರು. ಈ ವೇಳೆ ಯಾರಾದರೂ ಪ್ರತಿಭಟನೆ ಮಾಡಲು ಮುಂದಾದರೆ ಅದನ್ನು ನಿಭಾಯಿಸಲು ಕೂಡ ಪೊಲೀಸರು ಸಜ್ಜಾಗಿದ್ದರು. ಪ್ರಜ್ವಲ್ ಅವರನ್ನು ಬಂಧಿಸಬೇಕಾದ ಕಾರಣದಿಂದಾಗಿ 10 ಎಸ್‌ಐಟಿ ಅಧಿಕಾರಿಗಳು ಟರ್ಮಿನಲ್ ಒಳಗೆ ಹೋಗಲು ಇಮಿಗ್ರೇಷನ್‌ನಿಂದ ಪಾಸ್ ಪಡೆಯಲಾಗಿತ್ತು ಅಲ್ಲದೇ ಪ್ರಜ್ವಲ್ ಬಂಧನಕ್ಕೆ ಹೊರಡಿಸಿರುವ ವಾರೆಂಟ್‌ಗಳ ● 7ನೇ ಪುಟಕ್ಕೆ

ವಂಚನೆ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ದಾಖಲೆ, ವಾಹನ, ಮೊಬೈಲ್ ಫೋನ್ ವಾಪಸ್ ನೀಡಲು
ಗುತ್ತಿಗೆದಾರನಿಂದ 50,000 ರೂ ಲಂಚ ಸ್ವೀಕಾರ; ಮಹಿಳಾ ಸಬ್‌ಇನ್‌ಸ್ಪೆಕ್ಟರ್ ಲೋಕಾಯುಕ್ತ ಬಲೆಗೆ




ರಾಧಾ

ಮೈಸೂರು, ಮೇ 30 (ಆರ್‌ಕೆ)– ವಂಚನೆ ಪ್ರಕರಣ ಸಂಬಂಧ ಆರೋಪಿಯಿಂದ ವಶಪಡಿಸಿಕೊಂಡಿದ್ದ ಕಾರುಗಳು, ದಾಖಲೆ, ಮೊಬೈಲ್ ಫೋನ್ ಸೇರಿದಂತೆ ಇನ್ನಿತರ ವಸ್ತುಗಳನ್ನು ಆತನಿಗೆ ಹಿಂದಿರುಗಿಸಲು 50,000 ರೂ ಲಂಚ ಸ್ವೀಕರಿಸುತ್ತಿರುವ ವೇಳೆ ಮೈಸೂರಿನ ಕುವೆಂಪು ನಗರದ ಸಬ್‌ಇನ್‌ಸ್ಪೆಕ್ಟರ್ ರಾಧಾ ಲೋಕಾಯುಕ್ತ ಪೊಲೀಸರಿಗೆ ಠಾಣೆಯಲ್ಲೇ ಸಿಕ್ಕಿಬಿದ್ದಿದ್ದಾರೆ. ● 9ನೇ ಪುಟಕ್ಕೆ

ಅರುಣ್ ಯೋಗಿರಾಜ್‌ರ 'ನಂದಿ' ಶೀಘ್ರವೇ ಅಮರನಾಥದಲ್ಲಿ ಪ್ರತಿಷ್ಠಾಪನೆ

● ಮೈಸೂರಿಂದ ಜಮ್ಮು–ಕಾಶ್ಮೀರಕ್ಕೆ ಹೊರಟ ಒಂದೂವರೆ ಟನ್ ತೂಕದ ನಂದಿ ● ಹಿಮದಿಂದ ಕೂಡಿದ ಶಿವಲಿಂಗದ ಮುಂದೆ ಸ್ಥಾಪನೆ



ಶಿಲ್ಪಿ ಅರುಣ್ ಯೋಗಿರಾಜ್ ನಂದಿ ವಿಗ್ರಹ ಕೆತ್ತನೆ ಕಾರ್ಯದಲ್ಲಿ ತೊಡಗಿರುವುದು

ಮೈಸೂರು, ಮೇ 30(ಜಿಎ)– ಅಯೋಧ್ಯೆಯ ಬಾಲರಾಮ ಮೂರ್ತಿ ಕೆತ್ತನೆ ಮೂಲಕ ವಿಶ್ವದಾದ್ಯಂತ ಮನ್ನಣೆಗಳಿಸಿದ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಜಮ್ಮು–ಕಾಶ್ಮೀರದಲ್ಲಿರುವ ಐತಿಹ್ಯ ಜ್ಯೋತಿರ್ಲಿಂಗ ಅಮರನಾಥ ದೇವಾಲಯದ ಮುಂಭಾಗ ಪ್ರತಿಷ್ಠಾನೆಗೊಳ್ಳಲಿರುವ ನಂದಿ ವಿಗ್ರಹ ಕೆತ್ತನೆ ಮಾಡುವ ಮೂಲಕ ಮತ್ತೆ ತಮ್ಮದೆ ಛಾಪು ಮೂಡಿಸಿದ್ದಾರೆ. ಈ ಹಿಂದೆ ಕೇದರನಾಥದ ಶಂಕರಾಚಾರ್ಯರ ಪ್ರತಿಮೆ, ದೆಹಲಿಯಲ್ಲಿ ● 9ನೇ ಪುಟಕ್ಕೆ

> "ಕಳೆದ ಎರಡು ತಿಂಗಳಿಂದ ಕೆತ್ತನೆ ಕಾರ್ಯ ಮಾಡಿದ್ದು, ನಂದಿ ವಿಗ್ರಹ ಅದ್ಭುತವಾಗಿ ಮೂಡಿಬಂದಿದೆ. ಈ ರೀತಿಯ ಮೂರ್ತಿಗಳನ್ನು ಈ ಹಿಂದೆ ನಮ್ಮ ತಂದೆ, ತಾತ ಕೆತ್ತಿದ್ದರು. ಅದನ್ನು ಕಲ್ಪಿಸಿಕೊಂಡು ನಂದಿ ವಿಗ್ರಹ ಕೆತ್ತಿದ್ದೇನೆ. ಬುಧವಾರ ಸಂಜೆ ಮೈಸೂರಿನಿಂದ ವಾಹನದಲ್ಲಿ ಶ್ರೀನಗರಕ್ಕೆ ಕಳುಹಿಸಲಾಗಿದೆ. ಇನ್ನು ಹತ್ತು ದಿನಗಳಲ್ಲಿ ಜಮ್ಮು–ಕಾಶ್ಮೀರ ತಲುಪಲಿದೆ. ಪ್ರತಿಷ್ಠಾಪನೆ ಟ್ರಸ್ಟ್ ವತಿಯಿಂದ ನನಗೂ ಆಹ್ವಾನವಿದ್ದು, ತೆರಳುತ್ತೇನೆ.
> –ಅರುಣ್‌ಯೋಗಿರಾಜ್, ಶಿಲ್ಪಿ

22 ಕ್ಯಾರೆಟ್ ಚಿನ್ನದ ದರ @ ತೊಳಸಿ
ತೊಳಸಿ ಜ್ಯುವೆಲ್ಲ್ THOLASI JEWELS
₹ 6670/-
ಆಶೋಕ ರಸ್ತೆ, ಮೈಸೂರು. ಫೋ: 0821-2521926.
ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು. ಫೋ: 0821-2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು, ನಂಜನಗೂಡು. ಫೋ: 08221-200926

Huge Discount of Rs. 10,000/-
on Group Departure
SINGAPORE, MALAYSIA & THAILAND
8 Nights / 9 Days,
Departure - 25th June 2024
Fully loaded Tour from Mysore to Mysore with Tour Manager.
HURRY... OFFER closes on 01st June 2024...
GLOBAL ENTRADA INTERNATIONAL TOURS
Call : 9606893482 / 0821-4249982 / 9901898182

ಜೂನ್ 4, ಲೋಕಸಭಾ ಚುನಾವಣೆ ಮತ ಎಣಿಕೆ
ಮೈಸೂರಲ್ಲಿ ಡಿಸಿ ಡಾ.ರಾಜೇಂದ್ರರಿಂದ ಎಣಿಕಾ ಕೇಂದ್ರದಲ್ಲಿ ಸಿದ್ಧತೆಗಳ ಪರಿಶೀಲನೆ

ಮೈಸೂರು, ಮೇ 30 (ಆರ್‌ಕೆ)– ಬರುವ ಜೂನ್ 4ರಂದು 2024ರ ಲೋಕಸಭಾ ಸಾರ್ವತ್ರಿಕ ಚುನಾವಣೆ ಮತ ಎಣಿಕೆ ನಡೆಯುವ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಇಂದು ಮೈಸೂರಿನ ಪಡುವಾರಹಳ್ಳಿ ಬಳಿಯ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಮತ ಎಣಿಕಾ ಕೇಂದ್ರದಲ್ಲಿ ಮಾಡಿರುವ ಸಿದ್ಧತಾ ಕಾರ್ಯವನ್ನು ಪರಿಶೀಲಿಸಿದರು.

ಬಂದೋಬಸ್ತ್ ನೇತೃತ್ವ ವಹಿಸಿರುವ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿ ಎಂ.ಮುತ್ತುರಾಜ್, ಎಸಿಪಿಗಳಾದ ಎಸ್.ಜಿ.ಗಜೇಂದ್ರ ಪ್ರಸಾದ, ರಮೇಶ್‌ಕುಮಾರ್ ● 9ನೇ ಪುಟಕ್ಕೆ



ಮೈಸೂರು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರೊಂದಿಗೆ ಗುರುವಾರ ಮೈಸೂರಿನ ಮಹಾರಾಣಿ ವಾಣಿಜ್ಯ ಕಾಲೇಜು ಮತ ಎಣಿಕಾ ಕೇಂದ್ರದಲ್ಲಿ ಸಿದ್ಧತೆಗಳ ಪರಿಶೀಲಿಸಿದರು.

ಇಂದಿನಿಂದ ಶಾಲೆ ಆರಂಭ

● ಮಕ್ಕಳಿಗೆ ಸಂಭ್ರಮದ ಸ್ವಾಗತ ● ಮಧ್ಯಾಹ್ನದ ಬಿಸಿಯೂಟದಲ್ಲಿ ಮಕ್ಕಳಿಗೆ 'ಪಾಯಸ'ದ ಸವಿ

ಮೈಸೂರು, ಮೇ 30(ಎಸ್‌ಬಿಡಿ)– ಸರ್ಕಾರಿ ಶಾಲೆಗಳು ಶುಕ್ರವಾರದಿಂದ ಪುನಾರಂಭಗೊಳ್ಳುತ್ತಿದ್ದು, ಮಕ್ಕಳನ್ನು ಸಂಭ್ರಮದಿಂದ ಸ್ವಾಗತಿಸಲು ಶಾಲಾ ಶಿಕ್ಷಣ ಇಲಾಖೆ ಸಜ್ಜಾಗಿದೆ.

2024–25ನೇ ಸಾಲಿನ ಶಾಲಾ ಶೈಕ್ಷಣಿಕ ಅವಧಿ ಅಧಿಕೃತವಾಗಿ ಆರಂಭವಾಗಲಿದೆ. ಬೇಸಿಗೆ ರಜೆ ಮುಗಿಸಿ ಮತ್ತೆ ಶಾಲೆಗಳತ್ತ ಹೆಜ್ಜೆ ಹಾಕುತ್ತಿರುವ ಮಕ್ಕಳನ್ನು ಆತ್ಮೀಯವಾಗಿ ಮಾತ್ರವಲ್ಲದೆ ಅದ್ದೂರಿಯಾಗಿ ಸ್ವಾಗತಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಶಾಲೆಗಳಿಗೆ ತಳಿರು–ತೋರಣ ಕಟ್ಟಿ, ಸಿಂಗರಿಸಲಾಗುತ್ತಿದೆ. ಡೋಲು, ನಗಾರಿ, ಮಂಗಳವಾದ್ಯದೊಂದಿಗೆ ಸಿಂಗರಿಸಿದ ಎತ್ತಿನ ಗಾಡಿಯಲ್ಲಿ ಮಕ್ಕಳನ್ನು ಶಾಲೆಗೆ ಕರೆ ತರುವುದಕ್ಕೂ ಯೋಜನೆ ಹಾಕಿಕೊಳ್ಳಲಾಗಿದೆ. ಶಾಲಾ ಆವರಣದಲ್ಲಿ ಮುಖ್ಯ ಶಿಕ್ಷಕರ ನೇತೃತ್ವದಲ್ಲಿ ಎಲ್ಲಾ ಶಿಕ್ಷಕರೂ ಮಕ್ಕಳಿಗೆ ಗುಲಾಬಿ ಹಾಗೂ ಸಿಹಿ ನೀಡಿ, ಸ್ವಾಗತಿಸಲಾಗುತ್ತದೆ.



ಸರ್ವ ಸಿದ್ಧತೆ: ಮೊದಲ ದಿನ ಮಕ್ಕಳನ್ನು ಅದ್ದೂರಿ ಹಾಗೂ ಆತ್ಮೀಯವಾಗಿ ಸ್ವಾಗತಿಸಲು ಶಿಕ್ಷಕರು ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದ್ದಾರೆ. ಶಾಲೆ ಆವರಣ, ತರಗತಿಯ ಕೊಠಡಿಗಳು, ಅಡುಗೆ ಕೋಣೆ, ಅಡುಗೆ ಪಾತ್ರೆಗಳು, ನೀರಿನ ಸಂಪ್, ಶೌಚಾಲಯ ಎಲ್ಲವನ್ನೂ ಸ್ವಚ್ಛಗೊಳಿಸಲಾಗಿದೆ. ಆಹಾರ ಧಾನ್ಯಗಳು ಲಭ್ಯವಿದ್ದು, ಬೆಳಗ್ಗೆ ತಾಜಾ ತರಕಾರಿಗಳನ್ನು ಖರೀದಿಸಿ ಮೊದಲ ದಿನವೇ ● 7ನೇ ಪುಟಕ್ಕೆ

ಕೇರಳ ಪ್ರವೇಶಿಸಿದ ಮುಂಗಾರು: ಇನ್ನು
ಎರಡ್ಮೂರು ದಿನದಲ್ಲಿ ಕರ್ನಾಟಕ ಪ್ರವೇಶ

● ಜೂನ್ 5ರ ವೇಳೆಗೆ ಈಶಾನ್ಯ ಭಾರತದಲ್ಲಿ ಮುಂದುವರಿಕೆ ● ನಿರೀಕ್ಷೆಗೂ 6 ದಿನ ಮೊದಲೇ ಪ್ರವೇಶ ● ರೈತರ ಮೊಗದಲ್ಲಿ ಮಂದಹಾಸ; ಕೃಷಿ ಚಟುವಟಿಕೆಗೆ ಚಾಲನೆ

ಮೈಸೂರು, ಮೇ30(ಬಿಎಲ್‌ಯು)– ನೈರುತ್ಯ ಮಾನ್ಸೂನ್ ಇಂದು ಕೇರಳ ಪ್ರವೇಶಿಸಿದೆ. ಇನ್ನು ಎರಡು ದಿನದಲ್ಲಿ ಕರ್ನಾಟಕ ಪ್ರವೇಶಿಸಲಿದೆ.

ಈ ಬಾರಿಯ ನೈರುತ್ಯ ಮಾನ್ಸೂನ್ ಜೂನ್ 1 ರಂದು ಕೇರಳ ಪ್ರವೇಶಿಸಲಿದೆ. ತರುವಾಯ ಜೂನ್ 4 ಇಲ್ಲವೇ 5 ರಂದು ಕರ್ನಾಟಕ ಪ್ರವೇಶಿಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿತ್ತು. ಆದರೆ ಎರಡು ದಿನ ಮೊದಲೇ, ಇಂದೇ ಕೇರಳ ಪ್ರವೇಶಿಸಿದೆ. ಇನ್ನು ಎರಡು–ಮೂರು ದಿನದಲ್ಲಿ ಕರ್ನಾಟಕ ಪ್ರವೇಶಿಸಲಿದೆ. ಈ ಮೂಲಕ ಜೂನ್ 5ರ ವೇಳೆಗೆ ಈಶಾನ್ಯ ಭಾರತದ ಬಹುತೇಕ ಭಾಗಗಳಲ್ಲಿ ಮುಂದುವರೆಯುತ್ತದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಈ ಮೂಲಕ ನೈರುತ್ಯ ಮುಂಗಾರು ಈಶಾನ್ಯ ಭಾರತದಲ್ಲಿ ನಿರೀಕ್ಷೆಗೂ 6 ದಿನ ಮೊದಲೇ ಆರಂಭವಾಗಲಿದೆ. ಈ ಬಾರಿ ಪೂರ್ವ ಮುಂಗಾರಿನಲ್ಲೇ ಉತ್ತಮ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಈ ಬಗ್ಗೆ ಜನವರಿ 1ರಿಂದ ಮೇ 30ರವರೆಗೆ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಯಲ್ಲಿ ಎಷ್ಟು ಪ್ರಮಾಣದಲ್ಲಿ ಮಳೆಯಾಗಿದೆ ಎಂದು ಅಂಕಿ–ಅಂಶಗಳ ಸಹಿತ ವಿವರ ನೀಡಿದೆ. ಮೈಸೂರಿನಲ್ಲಿ 201 ಮಿಲಿ ಮೀಟರ್ ವಾಡಿಕೆ ಮಳೆ ಆಗಬೇಕಿತ್ತು. ಆದರೆ ಈ ಬಾರಿ 263 ಮಿಲಿ ಮೀಟರ್ ಮಳೆಯಾಗಿದ್ದು, ಶೇಕಡ 31ರಷ್ಟು ಅಧಿಕ ಮಳೆಯಾಗಿದೆ. ಕೊಡಗು ಜಿಲ್ಲೆಯಲ್ಲಿ 248 ಮಿಲಿ ಮೀಟರ್ ವಾಡಿಕೆ ಮಳೆಯಾಗಬೇಕು, ಆದರೆ 316 ಮಿಲಿ ಮೀಟರ್ ಮಳೆಯಾಗಿದ್ದು, ಶೇಕಡ 29ರಷ್ಟು ಹೆಚ್ಚಾಗಿದೆ. ಮಂಡ್ಯ ಜಿಲ್ಲೆಯಲ್ಲಿ 163 ಮಿಲಿ ಮೀಟರ್ ● 9ನೇ ಪುಟಕ್ಕೆ

ಕೆಆರ್‌ಎಸ್, ಕಬಿನಿ ಜಲಾಶಯಕ್ಕೆ ಒಳ ಹರಿವಿನಲ್ಲಿ ಇಳಿಕೆ

ಪೂರ್ವ ಮುಂಗಾರಿನ ಕೊನೆ ಹಂತದಲ್ಲಿ ಮಳೆ ಪ್ರಮಾಣ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಮಂಡ್ಯದ ಕೆಆರ್‌ಎಸ್ ಹಾಗೂ ಮೈಸೂರು ಜಿಲ್ಲೆಯ ಕಬಿನಿ ಜಲಾಶಯಕ್ಕೆ ಬರುತ್ತಿರುವ ನೀರಿನ ಪ್ರಮಾಣದಲ್ಲಿ ಇಳಿಕೆಯಾಗಿದೆ. ಕಳೆದ ವಾರ ಈ ಎರಡು ಜಲಾಶಯಕ್ಕೆ 3ರಿಂದ 4 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿತ್ತು. ಆದರೆ ಈಗ 1500 ಕ್ಯೂಸೆಕ್‌ಗೆ ಇಳಿಕೆಯಾಗಿದೆ. ಕೆಆರ್‌ಎಸ್ ಜಲಾಶಯದ ಗರಿಷ್ಟ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 83.85 ಅಡಿಗಳಾಗಿದೆ. ಜಲಾಶಯಕ್ಕೆ 1515 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 543 ಕ್ಯೂಸೆಕ್ ನೀರು ಬಿಡಲಾಗುತ್ತಿದೆ. ಕಬಿನಿ ಜಲಾಶಯದ ಗರಿಷ್ಟ ಮಟ್ಟ 2284 ಅಡಿಗಳಾಗಿದ್ದು, ಇಂದಿನ ಮಟ್ಟ 2260 ಅಡಿಗಳಾಗಿದೆ. ಜಲಾಶಯಕ್ಕೆ 506 ಕ್ಯೂಸೆಕ್ ಒಳ ಹರಿವಿದ್ದು, 300 ಕ್ಯೂಸೆಕ್ ಹೊರ ಹರಿವಿದೆ.

DGF JEWELLERS
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ. (T&C)
ಒಂದು ಗ್ರಾಂ ಚಿನ್ನಕ್ಕೆ 7000
8884171888

Nakhsha® BUILDERS
ನೀವು ಕಮರ್ಷಿಯಲ್ ಸೈಟ್ ಹೊಂದಿದ್ದೀರಾ &
ನೀವು ಬಾಡಿಗೆದಾರರಿಲ್ಲದೆ ಅದನ್ನು ನಿರ್ಮಿಸಲು ಯೋಚಿಸುತ್ತಿದ್ದೀರಾ?
ವಾಣಿಜ್ಯ ನಿರ್ಮಾಣ ಮತ್ತು ಬಾಡಿಗೆದಾರರಿಗಾಗಿ ನಮ್ಮನ್ನು ಸಂಪರ್ಕಿಸಿ
ಎಲ್ಲಾ ಒಂದೇ ಛಾವಣಿಯ ಅಡಿಯಲ್ಲಿ
ನಮ್ಮ ಪರಿಣಿತಿ
• ರೆಸ್ಟೋರೆಂಟ್ • ಬಾರ್ಸ್ • ಸಂಕೀರ್ಣ • ರಿಕ್ರಿಯೇಶನಲ್ ಸ್ಪೇಸ್ • ಮಳಿಗೆ
• ಸ್ಪೋರ್ಟ್ಸ್ ಫೆಸಿಲಿಟಿ • ಸ್ಕೂಲ್ ಮತ್ತು ಕಾಲೇಜುಗಳು • ಹೋಟೆಲ್ಸ್ • ಆಸ್ಪತ್ರೆಗಳು
ನೋಟಬಲ್ ಪ್ರಾಜೆಕ್ಟ್ಸ್
MYSORE UNION · NORTH AVENUE · MYCAS · ICONIC RESTO · FISH CURRY RICE · DAKSHINA · The Continental
Terms and Conditions Apply*
#5489, 6th Main Road, 2nd Stage, Vijay Nagar, Mysuru - 570 017
www.nakhsha.in
+91 96069 66299 / +91 96069 66266

ನಕ್ಕರೆ ಅದೇ ಸ್ವರ್ಗ

ಗಿರಾಕಿ : (ಹೋಟೇಲ್‌ನಲ್ಲಿ ರೇಗುತ್ತಾ) "ಅಲ್ಲಾರೀ, ಈ ಉದ್ದಿನ ವಡೆಗೆ ಇಷ್ಟೊಂದು ಉಪ್ಪು ಹಾಕಿದ್ದೀರಿ. ಯಾರ್ರೀ ತಿಂತಾರೆ ಇದನ್ನ?"

ಮ್ಯಾನೇಜರ್ : "ಚಟ್ನಿಗೆ ಉಪ್ಪೇ ಹಾಕಿಲ್ಲ, ಅಲ್ಲಿಗೆ ಸರಿಯೋಗುತ್ತಲ್ಲ ಸಾರ್!"

ಮೈಸೂರು ಮಿತ್ರ

ಶುಕ್ರವಾರ, 31 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಆಶಾವಾದಿ ಪ್ರತಿಯೊಂದು ಕಷ್ಟದಲ್ಲೂ ಸಂದರ್ಭವನ್ನು ಹುಡುಕುತ್ತಾನೆ.ಆದರೆ ನಿರಾಶಾವಾದಿ ಪ್ರತಿಯೊಂದು ಸುಸಂದರ್ಭದಲ್ಲೂ ಕಷ್ಟವನ್ನು ಹುಡುಕುತ್ತಾನೆ.

–ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆರಿದ್ದು ಆರು ಮಂದಿಗೆ
ಬೀಸಿದ್ದು ಮೂರು ಮಂದಿಗೆ

ನಿಮ್ಮ ಪತ್ರಗಳು

ಕಾಲರಾದ ಭಯ ಬೇಡ, ಇರಲಿ ಎಚ್ಚರ!

ಮಾನ್ಯರೆ,

ನಂಜನಗೂಡು ತಾಲೂಕು ವರುಣ ಕ್ಷೇತ್ರದ ತಗಡೂರು ಗ್ರಾಮದಲ್ಲಿ ಕಳೆದ 15 ದಿನಗಳಿಂದ ಕಾಲರಾ ಸೋಂಕು ಕಾಣಿಸಿಕೊಂಡಿದ್ದು, 1 ಮತ್ತು 2ನೇ ಬ್ಲಾಕ್‌ನ ಸುಮಾರು 215ಕ್ಕೂ ಹೆಚ್ಚು ಜನರು ತಗಡೂರು ಸಮುದಾಯ ಆರೋಗ್ಯ ಕೇಂದ್ರ ಮತ್ತು ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಇದೇ ತಿಂಗಳ ಮೇ 7ರ ರಾತ್ರಿ ಸುರಿದ ವಿಪರೀತ ಮಳೆಗೆ ಪೈಪ್‌ಗಳು ಒಡೆದಿರಬಹುದು ಅಥವಾ ನೀರು ರಭಸವಾಗಿ ಹರಿದು ಕಾಲುವೆ ಸೇರುವ ಸಂದರ್ಭದಲ್ಲಿ ಗಲೀಜುಗಳನ್ನೆಲ್ಲ ಹೊತ್ತೊಯ್ದು ಪರಿಣಾಮ ಕೊಳಚೆಯಾಗಿರಲೂಬಹುದು. ತಕ್ಷಣಕ್ಕೆ ಎಚ್ಚೆತ್ತ ಸ್ಥಳೀಯ ಆಡಳಿತ ವರ್ಗ ಪೈಪ್‌ಲೈನ್‌ಗಳನ್ನು ಸರಿಪಡಿಸಿ, ಜನತೆಗೆ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಕರೆ ನೀಡಿದೆ. ಅಲ್ಲದೆ ತಾಲೂಕು, ಜಿಲ್ಲಾ ಮಟ್ಟದ ಅಧಿಕಾರಿಗಳು, ಜೊತೆಗೆ ಮಾಜಿ ಶಾಸಕ ಡಾ. ಯತೀಂದ್ರ ಭೇಟಿ ನೀಡಿ ಪರಿಶೀಲನೆ ನಡೆಸಿ ಕಾಲರಾ ಉಲ್ಬಣವಾಗದಂತೆ ಜಾಗೃತಿ ಮೂಡಿಸಿದ್ದಾರೆ. ಈಗಿರುವಾಗ ನಂಜನಗೂಡು ತಾಲೂಕು ವಿಭಾಗದ ಕುಡಿಯುವ ನೀರು ಮತ್ತು ನೈರ್ಮಲ್ಯ ಸಹಾಯಕ ಕಾರ್ಯಪಾಲಕ ಅಭಿಯಂತರ ಶಿವಕುಮಾರ್, ಸ್ಥಳೀಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದಿವಾಕರ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಇದು ಸರಿಯಲ್ಲ ಎನಿಸುತ್ತದೆ.

ಕೈಗಳನ್ನು ಶುಚಿಯಾಗಿಟ್ಟುಕೊಳ್ಳುವುದು, ಬಿಸಿಯೂಟ, ಶುದ್ಧವಾದ ಆಹಾರ ಸೇವಿಸುವುದು, ಕುದಿಸಿ ಆರಿಸಿದ ನೀರನ್ನು ಕುಡಿಯುವುದು, ಬೇಕರಿ ತಿಂಡಿ–ತಿನಿಸು ತಿನ್ನದಂತೆ, ಸುತ್ತ–ಮುತ್ತಲ ಪ್ರದೇಶಗಳನ್ನು ಸ್ವಚ್ಛಗೊಳಿಸುವಂತೆ ಸ್ಥಳೀಯ ಗ್ರಾಮ ಪಂಚಾಯಿತಿ ಹಾಗೂ ಆರೋಗ್ಯ ಇಲಾಖೆ ಜಂಟಿಯಾಗಿ ಸೇರಿ ಹೀಗೆ ಕರಪತ್ರದ ಮೂಲಕ ಹಲವು ಬಗೆಯ ಪ್ರಕಟಣೆಗಳನ್ನು ಹೊರಡಿಸಿ, ಕರ್ತವ್ಯ ನಿರ್ವಹಿಸುತ್ತಿದೆ. ಹೀಗಿದ್ದರೂ ಸಹ ಜನತೆ ಜಾಗೃತರಾಗದ ಹೊರತು ಅಧಿಕಾರಿಗಳಾಗಲೀ ಅಥವಾ ಜನಪ್ರತಿನಿಧಿಗಳಾಗಲೀ ಏನು ಮಾಡುವರು? ಕಾಲರಾ ಸೋಂಕನ್ನು ತಡೆಯಲು ಹೇಗೆ ಸಾಧ್ಯವಾದೀತು? ಸದ್ಯ ಕಾಲರಾ ಸೋಂಕು ಉಲ್ಬಣಗೊಂಡಿಲ್ಲ. ಏನೇ ಆಗಲಿ ಕಾಲರಾ ಸೋಂಕಿನ ಬಗ್ಗೆ ಭಯ ಬೇಡ. ಆದರೆ ಎಚ್ಚರಿಕೆ ಇರಲಿ!

– ಪ್ರಜ್ವಲ್ ಶಶಿ, ತಗಡೂರು. ನಂಜನಗೂಡು ತಾಲೂಕು.

ರಸ್ತೆ ಗುಂಡಿಗಳನ್ನು ತುರ್ತಾಗಿ ಮುಚ್ಚಬೇಕಿದೆ!

ಮಾನ್ಯರೆ,

ಕಳೆದ ಹಲವು ದಿನಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ರಾಜ್ಯದ ಕೆಲವು ಪ್ರಮುಖ ಹೆದ್ದಾರಿ ರಸ್ತೆಗಳಿಗೆ ಹೆಚ್ಚು ಹಾನಿಯಾಗಿದೆ. ಇದರ ಜೊತೆಗೆ ಗ್ರಾಮೀಣ ಭಾಗದ ರಸ್ತೆಗಳು ಕೂಡ ಮಳೆಗೂ ಮುಂಚೆಯೇ ಹಾಳಾಗಿದ್ದು, ಪ್ರಸ್ತುತ ಮಳೆಯಿಂದಾಗಿ ಹೊಂಡ, ಗುಂಡಿಗಳು ಮತ್ತಷ್ಟು ಹೆಚ್ಚಾಗಿವೆ. ಕೆಲವು ಕಡೆಗಳಲ್ಲಿ ಮಳೆಯು ಕಳಪೆ ಕಾಮಗಾರಿಯನ್ನು ಬಟಾಬಯಲು ಮಾಡಿದೆ! ಪ್ರವಾಹದಿಂದ ಆಗಿರುವ ರಸ್ತೆ ಹಾನಿಯಿಂದ ಗ್ರಾಮೀಣ ಹಾಗೂ ನಗರ ಭಾಗದಲ್ಲಿ ಸಂಚಾರವೇ ದುಸ್ತರವಾಗಿದೆ. ರಾಜ್ಯ ಹೆದ್ದಾರಿ, ಜಿಲ್ಲಾ ಹಾಗೂ ತಾಲೂಕು ರಸ್ತೆಗಳಲ್ಲಿ ವಾಹನ ಓಡಿಸುವುದೆಂದರೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಗುಂಡಿ ಬಿದ್ದ ರಸ್ತೆಯಲ್ಲಿ ಜನ ಸಂಚಾರಕ್ಕೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕೆಲವೆಡೆ ಸುರಿಯುವ ಸೋನೆ ಮಳೆಗೆ ರಸ್ತೆ ಕೆಸರು ಗದ್ದೆಯಂತಾಗುತ್ತಿದೆ. ಪಾದಚಾರಿಗಳು, ದ್ವಿಚಕ್ರ ಹಾಗೂ ಭಾರಿ ಗಾತ್ರದ ವಾಹನಗಳು ಸಂಚರಿಸಲು ಕಷ್ಟಪಡಬೇಕಿದೆ. ಇದರಿಂದ ರಸ್ತೆಗಳಲ್ಲಿ ಗುಂಡಿ ಬಿದ್ದ ಜಾಗದಲ್ಲಿ ನೀರು ತುಂಬಿ ಯಾವುದು ರಸ್ತೆ, ಯಾವುದು ಗುಂಡಿ ಎಂಬುದರ ವ್ಯತ್ಯಾಸ ಗೊತ್ತಾಗದೆ ಅಪಘಾತ ಸಂಭವಿಸುತ್ತಿವೆ. ಅಲ್ಲದೇ ರಸ್ತೆಯ ಗುಂಡಿಗಳಲ್ಲಿ ಕೆಲವರು ತಮ್ಮ ಜೀವವನ್ನೇ ಬಲಿ ಕೊಟ್ಟಿದ್ದಾರೆ. ಇದರ ಜೊತೆಗೆ ಗುಂಡಿಮಯ ರಸ್ತೆಯಲ್ಲಿ ವಾಹನಗಳ ಸಂಚಾರ ವೇಗ ಶೇ.50 ರಷ್ಟು ಕಡಿಮೆಯಾಗಿದೆ ಹಾಗೂ ವಾಹನಗಳಿಗೆ ಇಂಧನ ಕೂಡ ಜಾಸ್ತಿ ಖರ್ಚಾಗುತ್ತಿದೆ. ವಾಹನ ಮತ್ತು ಆರೋಗ್ಯ ಎರಡೂ ಕೂಡ ಹಾಳಾಗುತ್ತಿವೆ. ರಸ್ತೆ ದುರಸ್ತಿ ಮಾಡದಿರುವ ಬಗ್ಗೆ ಸಾರ್ವಜನಿಕರು ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಹೀಗಾಗಿ ಸರ್ಕಾರ ರಸ್ತೆಗಳಲ್ಲಿ ಗುಂಡಿ ಬಿದ್ದಿರುವ ಹೊಂಡಗಳನ್ನು ತುರ್ತಾಗಿ ಮುಚ್ಚಿಸಿ ಪ್ರಯಾಣಿಕರ ಜೀವ ರಕ್ಷಣೆಯತ್ತ ಹೆಚ್ಚಿನ ಗಮನ ಕೊಡಬೇಕಿದೆ.

–ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ರಾಷ್ಟ್ರಸೇವೆ ಮಾಡಿ ಜನರ ಮನ್ನಣೆಗೆ ಪಾತ್ರರಾಗಲಿ

ಮಾನ್ಯರೆ,

ಈ ಬಾರಿಯ ಲೋಕಸಭೆ ಚುನಾವಣೆ ಪ್ರಕ್ರಿಯೆ ಮುಗಿಯಲು ಕೇವಲ ಐದಾರು ದಿನ ಇದೆ. ಬಹುಶಃ ಎಲ್ಲಾ ನನ್ನ ದೇಶಬಂಧುಗಳು ಯೋಗ್ಯ ಅಭ್ಯರ್ಥಿಯನ್ನೇ ಆರಿಸಿದ್ದಾರೆ ಎಂದು ಭಾವಿಸುತ್ತಾ ದೇಶದ ಉಜ್ವಲ ಭವಿಷ್ಯ ಹಾಗೂ ನಮ್ಮ ಮುಂದಿನ ಪೀಳಿಗೆ ಉದ್ಧಾರಕ್ಕೆ ಯೋಗ್ಯ ಸರ್ಕಾರವನ್ನು ಆರಿಸಿರುತ್ತಾರೆ. ಈ ಬಾರಿಯ ಚುನಾವಣೆ ಯಾವುದೇ ಪಕ್ಷ ವಿಷಯಾಧಾರಿತ ಚರ್ಚೆ ಮಾಡದೆ ಕೇವಲ ವೈಯಕ್ತಿಕ, ಸ್ಥಳೀಯ ವಿಷಯಗಳು ಹಾಗೂ ಗ್ಯಾರಂಟಿಗಳ ಬಗ್ಗೆ ಹೆಚ್ಚು ಮಾತಾಡಿವೆ. ಜಾತಿ ಆಧಾರಿತ ಉಮೇದುವಾರರನ್ನು ನಿಲ್ಲಿಸಿ ಜಾತಿ ಧರ್ಮದ ಹೆಸರಲ್ಲಿ ಮತ ಕೇಳಿದ್ದು ಮಾಮೂಲಿ ಆಗಿತ್ತು. ಹೊಸ ಮತದಾರರು ವಿಶೇಷವಾಗಿ ಯುವ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿದ್ದು ಒಳ್ಳೆಯ ಸೂಚನೆ. ಆದರೂ ಮತದಾನ ಶೇಕಡಾವಾರು ಕಡಿಮೆ. ಈಗ ಎಲ್ಲರ ಚಿತ್ತ ಜೂನ್ 4 ರತ್ತ ಸದ್ಯ ಅಂದು ಸೋತವರು ಮತದಾನ ಯಂತ್ರ ಸರಿಯಿರಲಿಲ್ಲ, ಪೆನ್‌ಡ್ರೈವ್, ಸಿಡಿ ಕಾರಣ ಎಂದು ಹೇಳದೇ ದೇಶದ ಮಹಾಜನತೆ ನೀಡಿದ ತೀರ್ಪನ್ನು ಮನಸಾರೆ ಒಪ್ಪಿ ಸೋತವರು ಆತ್ಮ ವಿಮರ್ಶೆ ಮಾಡಿಕೊಂಡು ತಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳಲಿ. ಗೆದ್ದವರು ಗೆದ್ದ ದಿನ ಹುಮ್ಮಸ್ಸಿನಲ್ಲಿ ಕೇವಲ ಭಾಷಣ ಮಾಡದೆ ಸಂಪೂರ್ಣ 5 ವರ್ಷ ರಾಷ್ಟ್ರಸೇವೆ ಮಾಡಿ ಜನರ ಮನ್ನಣೆಗೆ ಪಾತ್ರರಾಗಲಿ. ಒಟ್ಟಿನಲ್ಲಿ ಹೊಸದಾಗಿ ಆಯ್ಕೆಯಾಗುವ ಎಲ್ಲಾ ಸದಸ್ಯರಿಗೆ ಶುಭಾಶಯಗಳು.

–ಸತ್ಯಪ್ರಸಾದ್, ಶ್ರೀರಾಂಪುರ, ಮೈಸೂರು

ಈಶ್ವರಗೌಡನಹಳ್ಳಿ ಶಾಲೆಗೆ ಶೌಚಾಲಯ ಸೌಲಭ್ಯ ಕಲ್ಪಿಸಿ


ಮಾನ್ಯರೆ,

ನಂಜನಗೂಡು ತಾಲೂಕಿಗೆ ಸೇರಿರುವ ಈಶ್ವರಗೌಡನಹಳ್ಳಿಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಶೌಚಾಲಯದ ಸೌಲಭ್ಯ ಇಲ್ಲದೇ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಹಲವು ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯಗಳು ಇಲ್ಲ. ಇರುವ ಕೆಲವೆಡೆಗಳಲ್ಲಿ ನೀರಿನ ಸೌಲಭ್ಯವಿಲ್ಲ. ಇನ್ನೂ ಕೆಲವೆಡೆ ನಿರ್ವಹಣೆ ಕೊರತೆಯಿಂದ ಶೌಚಾಲಯಗಳು ಗಬ್ಬೆದ್ದು ನಾರುತ್ತಿವೆ. ಇದರಿಂದಾಗಿ ಶಾಲಾ ಮಕ್ಕಳು ಮೂತ್ರ ವಿಸರ್ಜನೆಗೆ ಬಯಲನ್ನೇ ಆಶ್ರಯಿಸಬೇಕಾದ ಪರಿಸ್ಥಿತಿ ಇದೆ. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಸದಸ್ಯರು, ಅಧಿಕಾರಿಗಳು ಶೌಚಾಲಯ ವ್ಯವಸ್ಥೆ ಕಲ್ಪಿಸಬೇಕೆಂದು ಮನವಿ.

–ಅಂಬಿಕಾ ಡಿ., ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು.

ಮಹಿಳೆಯರೂ ಮಾನವ ಕುಲದವರಲ್ಲವೇ...!?

– ಮಿರ್ಲೆ ಚಂದ್ರಶೇಖರ,
ಮೊ: 9916129654.



ಮಾಧ್ಯಮಗಳು ಹಾಗೂ ಪತ್ರಿಕೆಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯದ ಸುದ್ದಿಗಳು ಇಲ್ಲದ ದಿನಗಳಿಲ್ಲ. ಅದರಲ್ಲೂ ಲೈಂಗಿಕವಾಗಿ ಶೋಷಣೆಗೆ ಒಳಗಾಗಿರುವ ಮಹಿಳೆಯರ ಬಗ್ಗೆಯೇ ಹೆಚ್ಚು ಕಾಣುತ್ತೇವೆ. ಅನಾದಿಕಾಲದಿಂದಲೂ ನಡೆದುಕೊಂಡು ಬರುತ್ತಿರುವ ಅನಾಗರಿಕ ಕೃತ್ಯವಿದು. ನಾಗರಿಕತೆಯು ಬೆಳೆದಂತೆ ಕಡಿಮೆ ಆಗುವ ಬದಲು ಏರುಗತಿಯಲ್ಲಿರುವುದು ದುರ್ದೈವ. ವಿದ್ಯೆಯನ್ನು ಕಲಿತವರು ಹಾಗೂ ಅಧಿಕಾರದಲ್ಲಿ ಇರುವವರೇ ಹೆಣ್ಣಿನ ಶೋಷಣೆಗೆ ಮುಂಚೂಣಿಯಲ್ಲಿ ಕಂಡು ಬರುವುದು ಒಂದು ಕಡೆಯಾದರೆ ನಾಲ್ಕಾರು ಮಂದಿ ಒಂದು ಹೆಣ್ಣನ್ನು ಹೊತ್ತೊಯ್ದು ಸಾಮೂಹಿಕ ಅತ್ಯಾಚಾರ ಮಾಡಿ, ಕೊಲ್ಲುವ ವಿಕೃತ ಮನಸ್ಸಿನ ರಾಕ್ಷಸರು ಮತ್ತೊಂದು ವರ್ಗ. ಸೃಷ್ಟಿಯಲ್ಲಿ ಗಂಡು ಮತ್ತು ಹೆಣ್ಣುಗಳೆಂದು ವರ್ಗೀಕರಿಸಿ ವಿಭಿನ್ನವಾದ ಅಂಗಾಂಗಗಳನ್ನು ಇಟ್ಟು ಆಕರ್ಷಣೆಯ ಮನಸ್ಸು ಕೊಟ್ಟ ಭಗವಂತ ಭೂಮಿಗೆ ಬಂದರೂ ಹೆಣ್ಣಿನ ಮೇಲೆ ಆಗುತ್ತಿರುವ ಕಾಮದ ಅಟ್ಟಹಾಸವನ್ನು ತಡೆಯಲಾರ. ಆ ಮಟ್ಟಕ್ಕೆ ಸಮಾಜದಲ್ಲಿ ವಿಕೃತರ ಸಂತತಿ ಬೆಳೆದು ನಿಂತಿದೆ.

ನೋಡಲು ಸಭ್ಯರೇ, ಪ್ರತಿಷ್ಠಿತ ಕುಟುಂಬದಿಂದ ಬಂದವರೆ, ಸರ್ಕಾರದ ಆಡಳಿತದಲ್ಲಿ ಪ್ರಮುಖ ಸ್ಥಾನದಲ್ಲಿ ಇರುವವರೇ, ಸರ್ವವನ್ನೂ ತ್ಯಜಿಸಿ ಲಕ್ಷಾಂತರ ಭಕ್ತಾದಿಗಳನ್ನು ಹೊಂದಿರುವ ಮಠಕ್ಕೆ ಪೀಠಾಧಿಪತಿಗಳಾಗಿರುವ ಗುರುಗಳೇ, ಹೆಚ್ಚು ಕಲಿತು ಮಕ್ಕಳಿಗೆ ಬೋಧಿಸುವ ಗುರುಗಳೇ... ಇಂತಹ ಹೀನ ಕೃತ್ಯಗಳ ಕರ್ತೃಗಳಾಗಿರುವಾಗ(ಕಾಮ ಪೀಡಕರು) ರಕ್ಷಣೆಗೆ ಸಂತ್ರಸ್ತೆಯಾದವಳು ಯಾರ ಬಳಿ ಹೋಗಬೇಕು?.

ಸಂಬಂಧದಲ್ಲಿ ಮಗಳಾಗಲೀ, ಸಹೋದರಿಯಾಗಲೀ, ತಾಯಿಯ ವಯಸ್ಸಿನವರಾದರೂ ಬಿಡುವುದಿಲ್ಲ ಕಾಮುಕರು. ಹೆಣ್ಣು–ಗಂಡುಗಳ ಸೃಷ್ಟಿಯಲ್ಲಿ ಆಕರ್ಷಣೆಯನ್ನಿಟ್ಟ ಭಗವಂತ, ಸ್ವಯಂ ನಿಯಂತ್ರಿಸುವ ಶಕ್ತಿಯನ್ನೂ ಕೊಟ್ಟಿರುತ್ತಾನೆ. ಉಪಯೋಗಿಸಿಕೊಳ್ಳುವ ನಡವಳಿಕೆಯನ್ನು ಕಲಿಸಿಕೊಡುವಲ್ಲಿ ಎಡವಿದ್ದರ ಫಲವಿದು. ರಾಜಮಹಾರಾಜರ ಕಾಲದಿಂದ ಇಂದಿನ ಪ್ರಜಾಪ್ರಭುತ್ವದ ಮಂತ್ರಿಗಳ ಆಡಳಿತದವರೆಗೂ ಹೆಣ್ಣಿನ ಮೇಲೆ ಕ್ರೌರ್ಯ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಶೇಕಡವಾರು ಪ್ರಮಾಣದಲ್ಲಿ ಇಂದು ಜಾಸ್ತಿ ಇರಬಹುದು ಅಥವಾ ತಂತ್ರಜ್ಞಾನದ ಆವಿಷ್ಕಾರಗಳಾದ ಹಿಡನ್ ಕ್ಯಾಮರಾ, ಪೆನ್‌ಡ್ರೈವ್, ಮೊಬೈಲ್‌ಗಳಂತಹ ಉಪಕರಣಗಳಿಂದಲೂ ಹೆಚ್ಚು ಬಯಲಾಗಿ ಬೆತ್ತಲಾಗುತ್ತಿರುವ ಕಾರಣವೂ ಇರಬಹುದು.

ಅನುಮಾನವೇ ಇಲ್ಲ; ಜೀವಿಗಳಲ್ಲಿ ಪ್ರಾಣಿ ವರ್ಗವೂ ಒಳಗೊಂಡಂತೆ ಹೆಣ್ಣು–ಗಂಡುಗಳಿಬ್ಬರೂ ಕಾಮುಕರೆ, ಇಲ್ಲದಿದ್ದರೆ ಸಂತತಿ ಮುಂದುವರಿಯಬೇಕಲ್ಲ! ವಿಕೃತರಾದವರು ಮಾತ್ರ ಅನೈತಿಕ ವ್ಯವಹಾರಗಳಿಗೆ ತೊಡಗಿಸಿಕೊಳ್ಳುವುದು. ಇದರಲ್ಲಿ ವಿಶ್ವದಾಖಲೆ ಬರೆಯುವಷ್ಟು ಸಾಧನೆ ಮಾಡಿರುವ ದುಷ್ಟರು ಸಜ್ಜನಿಕೆಯ ಸೋಗಿನಲ್ಲಿ ನಮ್ಮ ನಡುವೆ ಇದ್ದಾರೆ!. ಈ ವಿಷಯದಲ್ಲಿ ಯಾರೂ ಯಾರನ್ನೂ ನಂಬುವುದಕ್ಕೆ ಬರುವುದಿಲ್ಲ.

ಗಂಡಿನಷ್ಟೇ ಸರಿಸಮನಾಗಿ ನಿಲ್ಲಬೇಕೆಂಬ ತವಕದಲ್ಲಿರುವ ನಮ್ಮ ಹೆಣ್ಣು ಮಕ್ಕಳು ಶೋಷಣೆಗೆ ಒಳಗಾಗುತ್ತಿರುವುದು ಅತ್ಯಂತ ದುಃಖಕರ ಸಂಗತಿ. ವಿದ್ಯೆ ಕಲಿಯಲು ಸಮೀಪದ ನಗರಕ್ಕೆ ಹೋಗಿ ಬರುವುದಿರಲಿ ಅದೇ ಊರಿನ ಕಾಲೇಜಿಗೆ ಹೋಗುವುದಕ್ಕೂ ಹೆದರುತ್ತಿದ್ದ ಹೆಣ್ಣು ಮಕ್ಕಳು ಇಂದು ನಿರಾಯಾಸವಾಗಿ ವಿದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಿ, ಅಲ್ಲೇ ನೌಕರಿ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲೂ ಗಂಡಿಗಿಂತಲೂ ಹೆಚ್ಚು ಸಾಧನೆ ಮಾಡಿರುವ ಮಹಿಳೆಯರು ಕಾಮುಕರಿಂದ ರಕ್ಷಿಸಿಕೊಳ್ಳುವ ಜಾಣ್ಮೆ ಬೆಳೆಸಿಕೊಳ್ಳುವುದನ್ನು ಮೈಗೂಡಿಸಿಕೊಳ್ಳಬೇಕಾಗಿದೆ.

ಜೀವನಶೈಲಿಯ ಬದಲಾವಣೆಯಿಂದಲೂ ಸಮಾಜದ ಸ್ವಾಸ್ಥ್ಯ ಕೆಡುತ್ತಿದೆ. ಭ್ರೂಣಹತ್ಯೆ, ಜೂಜು, ತಂಬಾಕು ಕುಡಿತಗಳಂತಹ ದುರಭ್ಯಾಸಗಳು, ಉದ್ರೇಕಿಸುವ ದೃಶ್ಯ ಮಾಧ್ಯಮಗಳು, ಬೆಳೆದ ವಾತಾವರಣ ಇತ್ಯಾದಿಗಳು ಮನುಷ್ಯನ ಗುಣವನ್ನು ಕಟ್ಟಿಕೊಡುತ್ತವೆ. ಹಾಗಾಗಿ ಬಾಲ್ಯದಲ್ಲೇ ಪೂರಕ ವಾತಾವರಣ ಒದಗಿಸಿಕೊಡುವುದು ಪೋಷಕರ ಬಹುಮುಖ್ಯ ಧ್ಯೇಯವಾಗಬೇಕು. ಬೆಳವಣಿಗೆಯ ಹಂತದಲ್ಲಿನ ಸಸಿಗೆ ನೀರು, ಗೊಬ್ಬರ ಹಾಕಿದರಷ್ಟೇ ಸಾಲದು ನೀಟಾಗಿ ನಮಗಿಷ್ಟವಾಗುವಂತೆ ಬೆಳೆಯಬೇಕೆಂದರೆ ಅನವಶ್ಯಕ ರೆಕ್ಕೆಗಳನ್ನು ಕಡಿದು ನೇರವಾಗಿ ಬೆಳೆಯುವ ಹಾಗೆ ಸಪೋರ್ಟ್ ಆಗಿ ಕೋಲನ್ನು ನೆಡುವುದು ಮುಖ್ಯವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಮದುವೆ ಆಗಲು ಗಂಡಿಗೆ ಹೆಣ್ಣುಗಳೇ ಸಿಗದೇ ಇರುವುದು ತುಂಬಾ ಕಳವಳಕಾರಿ. ಒಂದು ಹೆಣ್ಣಿಗೊಂದು ಗಂಡು, ಹೇಗೋ ಸೇರಿ ಹೊಂದಿಕೊಂಡು ನಡೆವುದೇ ಜೀವನ. ಆದರೆ ಹಾಗೆ ಆಗುತ್ತಿಲ್ಲವಲ್ಲ. ಮದುವೆಗಳು ವಿಳಂಬವಾಗುತ್ತಿವೆ. ವಿದ್ಯಾವಂತ ಹೆಣ್ಣು ಮಕ್ಕಳು ಮದುವೆಯಾಗಲು ನಿಬಂಧನೆಗಳನ್ನು ಹಾಕುತ್ತಿದ್ದಾರೆ. ಮುರಿದುಬಿದ್ದ ಸಂಬಂಧಗಳು, ಮತ್ತೊಂದು ಮದುವೆ ಆಗಬೇಕೇ, ಬೇಡವೇ ಎಂಬ ಸಂದಿಗ್ಧತೆಯಲ್ಲಿ ಇವೆ. ಮದುವೆ ಆದವರ ಕಥೆ ಹೀಗಾದರೆ ವಯಸ್ಸು ಮೀರಿದರೂ ಮದುವೆಯನ್ನೇ ಆಗದ ಯುವಕ–ಯುವತಿಯರ ಸಂಖ್ಯೆ ಏರುತ್ತಲೇ ಇದೆ.

ಲಿಂಗಾನುಪಾತ 2017–19ರಲ್ಲಿ 1000 ಪುರುಷರಿಗೆ 904 ಮಹಿಳೆಯರು ಇದ್ದದ್ದು 2036ರ ಹೊತ್ತಿಗೆ 952 ಆಗಬಹುದೆಂಬ ಅಂದಾಜಿದೆ. ನ್ಯಾಷನಲ್ ಫ್ಯಾಮಿಲಿ ಹೆಲ್ತ್ ಸರ್ವೆ ಪ್ರಕಾರ 2024ಕ್ಕೆ 1000 ಪುರುಷರಿಗೆ 1020 ಮಹಿಳೆಯರೆಂದು ತಿಳಿಸಲಾಗಿದೆ. ಏರುಪೇರಾಗುವ ಅಂಕಿ–ಅಂಶಗಳು ಏನೇ ಇರಲಿ ಗಂಡಿಗೊಂದು ಹೆಣ್ಣು ಸಿಗುತ್ತಿಲ್ಲ ಹಾಗೂ ಆಗಬೇಕಾದ ಕಾಲಕ್ಕೆ ಮದುವೆಗಳು ಆಗುತ್ತಿಲ್ಲವೆಂಬುದು ಇಂದಿನ ವಾಸ್ತವ. ವಯಸ್ಸು ಮೀರಿದ ಅವಿವಾಹಿತರು ಹರಕೆ ಹೊತ್ತು ಸಂಘ ಕಟ್ಟಿಕೊಂಡು ತಂಡೋಪತಂಡವಾಗಿ ದೇವಸ್ಥಾನಗಳಿಗೆ ಕಾಲುನಡಿಗೆ ಹೋಗುವುದು ಸಾಮಾನ್ಯ ಸಂಗತಿಯಾಗಿದೆ. ಮದುವೆಗಾಗಿ ಸ್ವಯಂವರ ಏರ್ಪಡಿಸಿದರೆ ಭಾಗವಹಿಸುವ ಕನ್ಯೆಯರು ಎಷ್ಟು? ಮೂರು ಮತ್ತೊಂದಾಗಿದೆ!.

ಮದುವೆಗಳು ಸೂಕ್ತ ವಯಸ್ಸಿಗೆ ಗಂಡು ಮಕ್ಕಳಿಗೆ ಆಗದಿರುವುದು ಬಹುಶಃ ಲೈಂಗಿಕ ದೌರ್ಜನ್ಯಕ್ಕೆ ಕಾರಣ ಇರಬಹುದೆ?! ಆದರೆ ಮದುವೆ ಆಗಿ ಸುಂದರ ಪತ್ನಿಯನ್ನು ಹೊಂದಿರುವ ನಡುವಯಸ್ಸಿನ ಪುರುಷರು ಈ ಕೃತ್ಯಕ್ಕೆ ಇಳಿಯುವರಲ್ಲ ಅವರಿಗೆ ಏನಾಗಿದೆ?, ಯಾವ ದೊಡ್ಡರೋಗ ಬಡಿದಿರುತ್ತದೆ!?.

ಗಂಡಿನಷ್ಟೇ ಸರಿಸಮನಾಗಿ ನಿಲ್ಲಬೇಕೆಂಬ ತವಕದಲ್ಲಿರುವ ನಮ್ಮ ಹೆಣ್ಣು ಮಕ್ಕಳು ಶೋಷಣೆಗೆ ಒಳಗಾಗುತ್ತಿರುವುದು ಅತ್ಯಂತ ದುಃಖಕರ ಸಂಗತಿ. ವಿದ್ಯೆ ಕಲಿಯಲು ಸಮೀಪದ ನಗರಕ್ಕೆ ಹೋಗಿ ಬರುವುದಿರಲಿ ಅದೇ ಊರಿನ ಕಾಲೇಜಿಗೆ ಹೋಗುವುದಕ್ಕೂ ಹೆದರುತ್ತಿದ್ದ ಹೆಣ್ಣು ಮಕ್ಕಳು ಇಂದು ನಿರಾಯಾಸವಾಗಿ ವಿದೇಶ ಗಳಲ್ಲಿ ಉನ್ನತ ವ್ಯಾಸಂಗ ಮಾಡಿ, ಅಲ್ಲೇ ನೌಕರಿ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲೂ ಗಂಡಿಗಿಂತಲೂ ಹೆಚ್ಚು ಸಾಧನೆ ಮಾಡಿ ರುವ ಮಹಿಳೆಯರು ಕಾಮುಕರಿಂದ ರಕ್ಷಿಸಿಕೊಳ್ಳುವ ಜಾಣ್ಮೆ ಬೆಳೆಸಿಕೊಳ್ಳುವುದನ್ನು ಮೈಗೂಡಿಸಿಕೊಳ್ಳಬೇಕಾಗಿದೆ.

ಲೈಂಗಿಕ ದೌರ್ಜನ್ಯಗಳನ್ನು ವಿಶ್ಲೇಷಿಸಿದರೆ ವಿಕೃತ ಕಾಮಕ್ಕೆ ತೊಡಗಿಸಿಕೊಳ್ಳುವವರಲ್ಲಿ ಶೇ.90ರಷ್ಟು ಯಾರೆಂದರೆ: ಆರ್ಥಿಕವಾಗಿ ಸದೃಢವಾಗಿರುವವರು, ಅಧಿಕಾರವುಳ್ಳ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು, ಉನ್ನತ ವ್ಯಾಸಂಗ ಮಾಡಿದವರು, ಅಗತ್ಯಕ್ಕಿಂತ ಹೆಚ್ಚು ಪೌಷ್ಟಿಕ ಹಾಗೂ ಮೃಷ್ಟಾನ್ನ ತಿನ್ನುವವರು, ಮಠಾಧಿಪತಿಗಳು, ನಗರವಾಸಿಗಳು, ಗ್ಲಾಮರ್ ಕ್ಷೇತ್ರದಲ್ಲಿ ಇರುವವರೇ ಆಗಿರುತ್ತಾರೆ. ಮಹಿಳೆಯರು ಅನ್ಯ ಗ್ರಹದಿಂದ ಬಂದವರೇ ಅಥವಾ ಇವರೇನು ಮಾನವ ಕುಲದವರಲ್ಲವೇ? ಎಂಬ ಅನುಮಾನ ಮಾಧ್ಯಮಗಳಲ್ಲಿ ತೋರಿಸುವ ದೌರ್ಜನ್ಯದ ದೃಶ್ಯಗಳನ್ನು ನೋಡಿದಾಗಲೆಲ್ಲ ಅನ್ನಿಸುವುದುಂಟು. ಒಬ್ಬನೇ ಪೀಡಕ ಅಟ್ಟಹಾಸಗೈದ ಮಹಿಳೆಯರ ಸಂಖ್ಯೆಯನ್ನು ನೋಡಿದಾಗ ಇದು ಸಾಧ್ಯವೇ ಎಂಬ ಸಂಶಯವು ಬರದೆ ಇರದು, ಲೆಕ್ಕಾಚಾರ ಮಾಡಿ ತಾಳೆ ಹಾಕಿದರೆ ಖಂಡಿತ ಅಸಾಧ್ಯವಾದ ಕಾರ್ಯವಿದು.

ಸಮಾಜವು ಪುರುಷಪ್ರಧಾನದಿಂದ ಹೊರಬಂದು ಮಹಿಳೆಯರಿಗೂ ಪ್ರಾಶಸ್ತ್ಯ ಕೊಡುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದರೂ ವಾಸ್ತವವಾಗಿ ಮಹಿಳೆಯರು ಇನ್ನೂ ಪುರುಷರಿಂದ ಹಿಂಸೆಗೆ ಒಳಗಾಗುತ್ತಿದ್ದಾರೆ. ಕೆಲವೊಮ್ಮೆ ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯಕ್ಕೆ ಕಾರಣ ಏನೆಂಬ ಸತ್ಯಾಂಶವನ್ನು ಹೇಳಿದರೆ, ಹೇಳಿದವನನ್ನೇ ಜಗ್ಗಾಡಿ ನಿಂದಿಸುವರು.

ಬೆಕ್ಕಿಗೆ ಗಂಟೆ ಕಟ್ಟುವವರು ಯಾರೆಂಬುದನ್ನು ಪತ್ರಿಕೆಗಳ ಸುದ್ದಿಗಳಲ್ಲಿ ನೋಡುತ್ತಿದ್ದೇವೆ. ಆಗೊಮ್ಮೆ ಧೈರ್ಯ ಮಾಡಿ ಅಂತಹ ಕಾಮುಕ ಬೆಕ್ಕುಗಳಿಗೆ ಗಂಟೆ ಕಟ್ಟಿದ್ದೇ ಆದಲ್ಲಿ ದೌರ್ಜನ್ಯದ ಸಮಯದಲ್ಲಿ ಸೌಂಡ್ ಬರದೆ ಇರುತ್ತದೆಯೇ. ಅದಕ್ಕಾಗಿಯೇ ಗಂಟೆ ಕಟ್ಟಲು ಯಾರೂ ಹೋಗುವುದಿಲ್ಲ ಮುಂದೊಂದು ದಿನ ಕಟ್ಟುವವನು ಕಟ್ಟಿಸಿಕೊಳ್ಳಬೇಕಾಗುತ್ತದಲ್ಲ ಎಂಬ ಭಯವೂ ಇರಬಹುದು!.

ಹೆಣ್ಣನ್ನು ಭೂಮಿಗೆ ಹೋಲಿಸುತ್ತೇವೆ. ಏಕೆಂದರೆ ಎರಡರ ಮೇಲೂ ಮನುಷ್ಯ ನಿರಂತರವಾಗಿ ಕ್ರೌರ್ಯ ತೋರಿ ಸಂಕಷ್ಟಕ್ಕೆ ದೂಡುತ್ತಿದ್ದಾನಲ್ಲ. ಎಲ್ಲಿಯವರೆಗೆ ಭೂಮಿ ಮತ್ತು ಹೆಣ್ಣನ್ನು ಗೌರವಿಸುವುದಿಲ್ಲವೋ ಅಲ್ಲಿಯವರೆಗೆ ಗಂಡಿಗೆ ನೆಮ್ಮದಿ ಇರದು. ಗಾದೆಯಂತೆ ಯಾರು ಹೆಣ್ಣು, ಹೊನ್ನು ಮತ್ತು ಮಣ್ಣಿನ ಹಿಂದೆ ಹೋಗುತ್ತಾನೋ ಅವನಿಗೆ ಎಂದಿಗೂ ಸಂಕಷ್ಟ ತಪ್ಪಿದ್ದಲ್ಲ ಎಂಬುದು ನೂರಕ್ಕೆ ನೂರು ಸತ್ಯ!.

ನೆನಪಿರಲಿ ಅವಳೊಂದು ಹೆಣ್ಣು, ಸೃಷ್ಟಿಕರ್ತೆ, ತಿದ್ದುವವಳು, ಸಂಸಾರದ ಕಣ್ಣು, ನೀಗುವವಳು ಹಸಿವು, ಗರ್ಭದಲ್ಲಿಟ್ಟು ಕಾಯುವಳು ವಂಶದ ಕುಡಿಗಳನ್ನು, ಇನ್ನಾದರೂ ಉಳಿಸಿ ಬೆಳಸಿರುವಳ ಸಂಕುಲವನ್ನು ಮರೆಯದಿರಿ ನಮ್ಮ ಜನ್ಮದಾತೆಯೂ ಒಂದು ಹೆಣ್ಣು ಎಂಬುದನ್ನು.

ನೈಟ್ ಅಲ್ವಾ ನೈಟಿ...!

ರಮಾ, ತುಂಬಾ ಸುಸಂಸ್ಕೃತ ಮನೆಯಿಂದ ಬಂದವಳು. ತುಂಬು ಕುಟುಂಬ. ಆಕೆಯ ಮನೆಯಲ್ಲಿ ಸೂರ್ಯೋದಯಕ್ಕೆ ಮುಂಚೆ ಏಳಬೇಕು. ಸ್ನಾನ, ಸಂಧ್ಯಾ, ವಂದನೆ ಎಲ್ಲವೂ ಸಹ ಸಮಯಕ್ಕೆ ಆಗಬೇಕು. ಇಲ್ಲದಿದ್ದರೆ ಆಕೆಯ ತಂದೆಯು ಬಹಳ ಕೋಪಗೊಳ್ಳುತ್ತಿ ದ್ದರು. ಹಾಗಾಗಿ ಅವರ ಮನೆಯಲ್ಲಿ ಸೂರ್ಯೋದಯಕ್ಕೆ ಮುಂಚೆ ಎಲ್ಲರೂ ಸಹ ಏಳುತ್ತಿದ್ದರು ಹಾಗಾಗಿ ಮದುವೆಯಾದ ನಂತರವೂ ರಮಾಳಿಗೆ ಬೆಳಗ್ಗೆ ಎದ್ದೊಡನೆ ಸ್ನಾನ ಪೂಜೆ ಇತ್ಯಾದಿಗಳನ್ನು ಮಾಡುವ ಅಭ್ಯಾಸ. ಹಾಗಾಗಿ ಯಾರು ಆಕೆಯ ಮನೆಗೆ ಹೋದರು ಸಹ ಆಕೆ ಸದಾ ಕಾಲ ಹಸನ್ಮುಖಿಯಾಗಿ ಯಾವಾಗಲೂ ಸಹ ತಯಾರಾಗಿ ಇರುತ್ತಿದ್ದಳು.



ಸಂಗೀತ ಹುಟ್ಟು ಸೋಂಬೇರಿ ಆಕೆಯ ಯಾವ ಕೆಲಸಕ್ಕೂ ಸಹ ಸಮಯ ಇರಲಿಲ್ಲ ಹಾಗೂ ರಾತ್ರಿ ಹಾಕಿಕೊಂಡ ನೈಟಿಯಲ್ಲೇ ದಿನ ಪೂರ್ತಿ ಕಳೆಯುತ್ತಿದ್ದಳು. ಒಂದು ದಿನ ಇದ್ದಕ್ಕಿದ್ದ ಹಾಗೆ ಸಂಗೀತಾಳ ಗಂಡನ ಆಫೀಸಿನಲ್ಲಿ ಕೆಲಸ ಮಾಡುವವರು ಮನೆ ಬೆಲ್ ಮಾಡುತ್ತಾರೆ. ಆಗ ಸಂಗೀತ ಹೋಗಿ ಬಾಗಿಲು ತೆಗೆದಾಗ ಈ ಮನೆಯ ಯಜಮಾನಿಯನ್ನು ಕರೀತೀರಾ ಅಂತ ಕೇಳುತ್ತಾರೆ. ಅದನ್ನ ಕೇಳಿದ ಸಂಗೀತಳಿಗೆ ಕೋಪ ಬರುತ್ತದೆ. ಇಷ್ಟು ದೊಡ್ಡ ಮನೆಯ ಯಜಮಾನಿ ಯನ್ನ ಆಕೆಯ ಮುಂದೆಯೇ ಹೋಗಿ ಯಜಮಾನಿ ಕರಿ ಎಂದರೆ ಅವಳಿಗೆ ಹೇಗಾಗಬೇಕು . ಆದರೆ ಇದರಲ್ಲಿ ಆಫೀಸಿನವರದು ಏನೂ ತಪ್ಪಿರುವುದಿಲ್ಲ. ಕಾರಣ ಮಠ–ಮಠ ಮಧ್ಯಾಹ್ನವಾದರೂ ಕೆಟ್ಟ ನೈಟಿಯಲ್ಲೇ ಇದ್ದರೆ ಅವರು ಆಕೆಯನ್ನು ಕೆಲಸದವರು ಅಂದುಕೊಂಡರು. ನೈಟಿ ಹಾಕಿಕೊಳ್ಳುವುದು ತಪ್ಪು ಅಂತ ನಾನು ಸಹ ಹೇಳುತ್ತಿಲ್ಲ. ಹೆಸರಿಗೆ ತಕ್ಕ ಹಾಗೆ ನೈಟಿ ಅಂದರೆ ರಾತ್ರಿ ಮಲಗುವಾಗ ಧರಿಸುವ ವಸ್ತ್ರವಾಗಿ ಅದನ್ನು ಬಳಸಿದರೆ ಒಳ್ಳೆಯದು. ಆದರೆ ಈಗಿನ ಕಾಲದಲ್ಲಿ ಸಾಕಷ್ಟು ಜನ ಅದರಲ್ಲೂ ಗೃಹಿಣಿಯರು ಈ ನೈಟಿಯಲ್ಲೇ ತಮ್ಮ ಜೀವನವನ್ನು ಸವೆಸಿ ಬಿಡುತ್ತಾರೆ. ಬೀರುವಿನಲ್ಲಿ ಅಷ್ಟೊಂದು ಹಣ ಕೊಟ್ಟು ತಂದ ಸೀರೆ ಹಾಗೂ ಬಟ್ಟೆಯನ್ನು ಇಟ್ಟುಕೊಂಡಿದ್ದರು, ನೈಟಿಯಲ್ಲೇ ಅವರ ಜೀವಮಾನವನ್ನು ಕಳೆದುಬಿಡುತ್ತಾರೆ . ಬಹಳ ಬೇಸರದ ಸಂಗತಿ ಎಂದರೆ ಇತ್ತೀಚೆಗೆ ದೇವಸ್ಥಾನಗಳಲ್ಲಿ ಅದರಲ್ಲೂ ಧನುರ್ಮಾಸದ ಸಮಯದಲ್ಲಿ ದೇವಸ್ಥಾನದಲ್ಲಿ ಬೋರ್ಡ್ ಮೇಲೆ ಬರೆದಿರುತ್ತಾರೆ. ದಯವಿಟ್ಟು ನೈಟಿಯಲ್ಲಿ ಬರಬೇಡಿ ಎಂದು. ನಮ್ಮ ಹೆಂಗಸರು ದೇವಸ್ಥಾನಕ್ಕೂ ನೈಟಿಯನ್ನು ಹಾಕಿಕೊಂಡು ಹೋಗುತ್ತಾರೆ ಎಂದರೆ ಎಂತಹ ಶೋಚನೀಯ ಸಂಗತಿ. ಅದರಲ್ಲೂ ಬೆಳಗ್ಗೆ ವಾಕಿಂಗ್ ಮಾಡುವ 90 ಪ್ರತಿಶತ ಹೆಂಗಸರು ನೈಟಿ ಹಾಕಿಕೊಂಡು ಬರುತ್ತಾರೆ. ಬೇಜಾರಾಗುವ ಸಂಗತಿ ಎಂದರೆ ಅವರೆಲ್ಲ ಬಹಳ ಅನುಕೂಲಸ್ಥರು. ಮನೆಯಲ್ಲಿ ಎಲ್ಲವೂ ಇದೆ ಆದರೆ ಆ ನೈಟಿಯನ್ನು ಏಕೆ ಬಿಡುತ್ತಿಲ್ಲ ಎಂದು ಮಾತ್ರ ತಿಳಿದಿಲ್ಲ.

ಆಸ್ಪತ್ರೆ, ದೇವಸ್ಥಾನ, ಅಂಗಡಿಗಳು, ಸಂತೆ ಎಲ್ಲಾ ಕಡೆ ಈ ನೈಟಿಯದ್ದೇ ಕಾರುಬಾರು ಆಗೋಗಿಬಿಟ್ಟಿದೆ. ಕೊನೆಗೆ ನಾನೊಮ್ಮೆ ಕುತೂಹಲ ತಾಳಲಾರದೆ ಯಾಕೆ ಇನ್ನೂ ನೈಟಿಯಲ್ಲಿ ಇದ್ದೀರಾ ಎಂದು ಕೇಳಿದಾಗ ಅವರು ಕೊಡುವ ಉತ್ತರ ಕೇವಲ ಮೌನ.... ಎಷ್ಟೋ ಜನ ಹೆಂಗಸರು ಹಬ್ಬಕ್ಕೆ ಹೊಸ ನೈಟಿಯನ್ನು ತೆಗೆದುಕೊಳ್ಳುತ್ತಾರೆ ಎಂದು ತಿಳಿದು ನನಗೆ ಆಶ್ಚರ್ಯವಾಯಿತು.

ಅಷ್ಟೇ ಅಲ್ಲ, ಎಷ್ಟೋ ಶಾಲೆಗಳ ಮುಂದೆ ಮಕ್ಕಳನ್ನು ಕರೆದು ಕೊಂಡು ಹೋಗುವ ಪೋಷಕರು ನೈಟಿಯಲ್ಲಿ ಬರಬಾರದು ಎಂದು ಬೋರ್ಡ್ ಹಾಕಿದ್ದಾರೆ. ಇದನ್ನ ನೋಡಿ ನಗಬೇಕೋ, ಅಳಬೇಕೋ ತಿಳಿಯದಾಗಿದೆ. ತಾಯಂದಿರಿಗಾಗಿ ನಾವು ಮಕ್ಕಳಿಗೆ ಯಾವ ರೀತಿ ಶಿಕ್ಷಣವನ್ನ ಕೊಡುತ್ತಿದ್ದೇವೆ ಎಂದು ಒಂದು ಸಣ್ಣ ಸೂಕ್ಷ್ಮತೆ ನಮ್ಮಲ್ಲಿರಬೇಕು. ನಮ್ಮ ಜನ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕುಂಕುಮಕ್ಕೆ ನೈಟಿ ಕೊಡುವ ಮಟ್ಟಿಗೆ ಹೋಗಿದ್ದಾರೆ. ಕೇಳಿದರೆ 250, 300 ರೂ. ಸೀರೆ ಯಾರೂ ಉಡುವುದಿಲ್ಲ. ಹಾಗಾಗಿ ನೈಟಿ ಕೊಟ್ಟರೆ ಕೊನೆಯ ಪಕ್ಷ ಮನೆಯಲ್ಲಾದರೂ ಬಳಸುತ್ತಾರೆ ಎಂಬ ಉತ್ತರ ಬರುತ್ತದೆ. ಕಾಲ ಎಲ್ಲಿಗೆ ಹೋಗುತ್ತಿದೆ ದೇವ. ಅದರಲ್ಲೂ ಪಾಪ ಆ ಕಾಟನ್ ನೈಟಿಗಳು ನೈಟಿಯಾಗಿ, ಒರೆಸುವ ಬಟ್ಟೆಯಾಗಿ, ಕಾಲು ಒರೆಸುವ ವಸ್ತ್ರವಾಗಿಯೂ ಜೀವ ತೆಯ್ಯುತ್ತದೆ.

ಆದಷ್ಟು ಗೃಹಿಣಿಯರು ನೈಟಿಯನ್ನು ರಾತ್ರಿಯಲ್ಲಿ ಧರಿಸಿ ಹಾಗೂ ಅದಕ್ಕೂ ಸಹ ಅದರದೇ ಆದ ಬೆಲೆ ಇದೆ. ಹಾಗಾಗಿ ಎಲ್ಲಾ ಕಡೆ ಹಾಕಿಕೊಂಡು ಬಂದು ದಯವಿಟ್ಟು ಅದರ ಬೆಲೆ ಹಾಗೂ ನಿಮ್ಮ ಬೆಲೆಯನ್ನು ಕಳೆದುಕೊಳ್ಳಬೇಡಿ. ಇದರ ಬಗ್ಗೆ ನೀವೂ ಚಿಂತನೆ ಮಾಡಿ.

– ಸೌಮ್ಯ ಕೋಳಿ, ಮೈಸೂರು

ಮನುಷ್ಯರಾದವರಿಗೆ ನಾಚಿಕೆ ಇರಬೇಕಲ್ವಾ...



ನಾಚಿಕೆಯೆಂಬುದು ಮನುಷ್ಯನ ಅತೀ ಮುಖ್ಯ ಸ್ವಭಾವವಾಗಿದೆ. ನಾಚಿಕೆಯನ್ನು ವ್ಯಾಖ್ಯಾನಿಸುವುದು ಕಷ್ಟವಾದರೂ ಅದೊಂದು ಜನ್ಮಜಾತ ಅನುಭವ. ನಾಚಿಕೆ ಎನ್ನುವ ಪದದಲ್ಲಿ ಸೌಂದರ್ಯ, ಸರಳತೆ, ಮನ ಶಾಸ್ತ್ರೀಯ, ಸಮಾಜಶಾಸ್ತ್ರೀಯ ಹಾಗೂ ಮಾನವೀಯ ಮೌಲ್ಯಗಳು, ನೈತಿಕತೆ ಎಲ್ಲವೂ ಅಡಗಿದೆ. ಈ ನೆಲಗಟ್ಟಿನಲ್ಲಿ ಇದರ ಅಧ್ಯಯ ನವು ಆಗಬೇಕಿದೆ. ನಾಚಿಕೆ ಅಥವಾ ಲಜ್ಜೆಯು ಸಂದರ್ಭಾನುಸಾರ ಬಳಕೆಯಾದರು ಪ್ರತಿ ಸಂದರ್ಭದಲ್ಲೂ ಅದು ನೀಡುವ ಸಂದೇಶ ಮಾತ್ರ ವ್ಯಕ್ತಿತ್ವವನ್ನು ಅರಳಿಸಬಹುದು ಅಥವಾ ಕೆರಳಿಸಲೂಬಹುದು.

ಹೋಗಿಯಪ್ಪಾ ನೀವು ತುಂಬಾ ನಾಚ್ಕೋತೀರಾ ಅಂದಾಗ ಧೈರ್ಯದಿಂದ ಮುನ್ನುಗ್ಗಬೇಕೆಂಬ ಸಲಹೆ ಇದೆ, ನಿಮಗೆ ನಾಚಿಕೆ ಆಗಲ್ವಾ ಅನ್ನೋ ಮಾತಿನ ಹಿಂದೆ ಕೆಟ್ಟದ್ದನ್ನು ಮಾಡಬಾರದೆಂಬ ಎಚ್ಚರಿಕೆ ಇದೆ. ನಾಚಿಕೆಗೇಡು ಎಂದಾಗ ಅನಾಹುತಕಾರಿ ಅವಮಾನಕಾರಿ ಕೆಲಸವನ್ನು ಯಾವುದೇ ಎಗ್ಗಿಲ್ಲದೆ ಮಾಡಿದರೆಂಬ ನೋವಿದೆ.

ಮಾನವರಿಗಿರುವ ಅನೇಕ ಸ್ವಭಾವಗಳಲ್ಲಿ ನಾಚಿಕೆ ಸ್ವಭಾವು ಒಂದು. ಈ ನಾಚಿಕೆ ಎನ್ನುವುದು ಅತೀ ಮುಖ್ಯವಾದುದು. ನಾಚಿಕೆ ಇಲ್ಲದೆ ಬದುಕು ಸಾಗುವುದಿಲ್ಲ. ಹಾಗೆಯೇ ನಾಚಿಕೊಂಡೇ ಬದುಕಲೂ ಆಗುವುದಿಲ್ಲ. ಹೆಣ್ಣಾಗಲಿ ಗಂಡಾಗಲಿ ನಾಚ್ಕೋಬೇಕು ಅನ್ನೋ ಮಾತಿನ ಹಿಂದೆ ಸಂಸ್ಕಾರವಿದೆ. ಹೆಣ್ಣು ನಾಚ್ಕೋಂಡಷ್ಟು ಅವಳ ಸೌಂದರ್ಯ ಇಮ್ಮಡಿಸುತ್ತದೆ. ಹೆಣ್ಣಾಗಲಿ ಗಂಡಾಗಲಿ ನಾಚಿಕೆ ಬಿಟ್ಟು ಕೆಲಸ ಮಾಡಬಾರದು ಅಂದಾಗ ಅಲ್ಲಿ ಸಾಮಾಜಿಕ ಸಾಮುದಾಯಿಕ ಹಿತಾಸಕ್ತಿಯ ಮೌಲ್ಯ ಅಡಗಿದೆ. ನಾಚಿಕೆಯನ್ನು ನಮ್ಮ ನಿತ್ಯ ಬದುಕಿನ ನೀತಿ ಸಂಹಿತೆಯನ್ನಾಗಿಸಿಕೊಳ್ಳಬೇಕು. ಇಲ್ಲವಾದರೆ ನಾಚಿಕೆಗೇಡಿನ ಮಾತು, ಕೃತಿ, ನಡತೆ ಆಚಾರ ವಿಚಾರಗಳೆಲ್ಲವೂ ಅಪಮೌಲ್ಯಗೊಳ್ಳುತ್ತವೆ. ಆಗ ನಾಚಿಕೆಗೇಡಿನ ಲಜ್ಜೆಗೇಡಿತನದ ಬದುಕನ್ನು ಭಂಡ ಬಾಳೆಂದು ಸಮಾಜ ತುಚ್ಛೀಕರಿಸಿ ನೋಡುತ್ತದೆ. ಅಂತಹವರ ಬಗ್ಗೆ ಸದಾ ಎಚ್ಚರಿಕೆಯಿಂದಿರಬೇಕೆಂದು ಒಳ ಮರ್ಮ ನುಡಿಯುತ್ತಲಿರುತ್ತದೆ.

ನಾರಿ ನಾಚಿ ನೀರಾದಳು, ಅಯ್ಯೋ ಏಟೊಂದು ನಾಚ್ಕೋತಾಳೆ ಅನ್ನೋ ಮಾತಿನ ಧಾಟಿ ಹಿಂದೆ ರಸಿಕತೆಯೂ ಅಡಗಿದೆ. ಸನ್ನಡತೆಗು ನಾಚಿಕೆಗೂ ಹತ್ತಿರದ ಸಂಬಂಧವಿದೆ. ನಡತೆ ಹೀನರನ್ನು ನಾಚಿಕೆಗೆಟ್ಟವರೆಂದೇ ಪರಿಗಣಿಸಲಾಗುತ್ತದೆ. ನಮಗೆ ವೈಯಕ್ತಿಕವಾಗಿ ನಾಚಿಕೆ ಎನ್ನುವುದು ನೈತಿಕ ಮೌಲ್ಯ ವಾದಾಗ ವ್ಯಕ್ತಿತ್ವದ ಸೌಂದರ್ಯ ನಳನಳಿಸುತ್ತದೆ. ಅಷ್ಟೇ ಅಲ್ಲದೆ ನಮ್ಮನ್ನಾಳುವ, ನಮ್ಮನ್ನಾಳ ಬಯಸುವ ಜನ ನಾಯಕರಿಗೆ ಸಾಮಾಜಿಕ, ಆರ್ಥಿಕ, ರಾಜಕಿಯ ಜೀವನದಲ್ಲಿ ನಾಚಿಕೆ ಇಲ್ಲದೆ ಹೋದರೆ ರಾಷ್ಟ್ರ ವಿಘಟನೆಯಾ ದೀತು. ನಾಚಿಕೆ ಇಲ್ಲದೆ ಹೋದರೆ ವ್ಯಕ್ತಿತ್ವ ವಿಘಟನೆಯಾದಿತು, ನಮ್ಮಲ್ಲಾಗಿರುವ ನೈತಿಕ ಅಧಃಪತನಕ್ಕೆ, ಲಜ್ಜೆಗೇಡಿ ಬದುಕೇ ಕಾರಣವಾಗಿದೆ. ಆಡಳಿತ ಭ್ರಷ್ಟತೆ, ಅಧಿಕಾರ ಭ್ರಷ್ಟತೆ, ವ್ಯಕ್ತಿತ್ವ ರೂಪಿಸಬೇಕಾದವರೇ ಬಹುರೂಪಿ ಭ್ರಷ್ಟತೆಯ ಮಾದರಿಗಳಾಗುತ್ತಿರುವುದರ ಹಿಂದೆ ನಾಚಿಕೆ ಸ್ವಭಾವದ ಶಿಕ್ಷಣದ ಕೊರತೆಯನ್ನು ಪ್ರತಿಧ್ವನಿಸುತ್ತದೆ.

ಜಾಗತಿಕರಣವು, ಕೊಳ್ಳುಬಾಕುತನವು ಎಲ್ಲಾ ರೀತಿಯ ನಾಚಿಕೆ ಹಿಂಜರಿಕೆಗಳನ್ನು ದೂರ ಮಾಡು ತ್ತಿದೆ. ಜಾತಿ ಧರ್ಮಗಳ ಅಂತರವನ್ನು ಕಡಿಮೆ ಮಾಡಿ ಮೌಢ್ಯದಿಂದ ಜನರನ್ನು ಹೊರ ತರುವಲ್ಲಿ ಸ್ವಲ್ಪ ಮಟ್ಟಿನ ಯಶಸ್ಸನ್ನು ಸಾಧಿಸಿದೆ. ಇದೇ ಜಾಗತೀ ಕರಣವು ಸ್ವಾತಂತ್ರ್ಯವನ್ನು ಸ್ವೇಚ್ಛೆಯನ್ನಾಗಿಸಿ ಸಂಸ್ಕೃತಿ ಯನ್ನು ವಿಕೃತಿಯನ್ನಾಗಿಸಿದೆ. ಮರ್ಯಾದಸ್ಥರು ನಾಚಿಕೆಯಿಂದ ತಲೆ ತಗ್ಗಿಸುವ ಪ್ರಸಂಗಗಳು ಎದುರಾದಾಗ ಆತ್ಮಹತ್ಯೆಯಂಚಿಗೆ ಹೋಗಿರುವುದು ಉಂಟು. ಊಸರವಳ್ಳಿಯಂತೆ ಬಣ್ಣ ಬದಲಾಯಿಸುವ ಮರ್ಯಾದ ಹೀನರು ನಾಚಿಕೆ ಬಿಟ್ಟು ಮಾಡಿದ ಕೆಲಸಗಳಿಂದ ಅನೇಕರ ಜೀವಕ್ಕೂ ಕುತ್ತಾಗಿರುವುದುಂಟು. ಆದ್ದರಿಂದ ಇನ್ನೊಬ್ಬರ ಬದುಕನ್ನು ಹಸನಾಗಿಸುವ ಯಾವ ಕೆಲಸವನ್ನು ನಾಚಿಕೆ ಬಿಟ್ಟು ಮಾಡೋಣ. ಇನ್ನೊಬ್ಬರಿಗೆ ಕೇಡಬಯಸುವ ಮುನ್ನ ನಾಚಿಕೊಳ್ಳೋಣ. ನಾಚಿಕೆ ಬಿಟ್ಟು ಮಾಡಬೇಕಿನಿಸುವ ಅನ್ಯಾಯ, ಅಕ್ರಮ, ದುರಾಲೋಚನೆ, ದುಷ್ಕರ್ಮ, ಪರಹಿಂಸೆ, ವ್ಯಕ್ತಿ ನಿಂದೆಯಿಂದ ದೂರವಿರುವ ಸಂಕಲ್ಪ ಮಾಡೋಣ. ನಮ್ಮ ಬದುಕಿಗೆ ನಾಚಿಕೆಯು ಆದರ್ಶವಾಗಲಿ, ಹಿಂಜರಿಕೆಯ ನಾಚಿಕೆಯಿಂದ ಮುಕ್ತರಾಗಿ ಸಾಮಾಜಿಕ ಮುಖ್ಯವಾಹಿನಿಗೆ ಬಂದು ತೆರೆಮರೆಯಲ್ಲಿ ನಾಚಿಕೆಗೇಡಿನ ಕೆಲಸ ಮಾಡದಿರೋಣ.

– ಬ್ಯಾ. ರಾ. ಪ್ರಸನ್ನಕುಮಾರ್
ಫೋನ್: 9206376889
Email- byaraaprajss@gmaill.com

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಭಾರೀ ಭದ್ರತೆ ನಡುವೆ ಜೂ.4ರಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಮತ ಎಣಿಕೆ

●ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ. ರಾಜೇಂದ್ರ ಮಾಹಿತಿ ●ಅಂದು ಬೆಳಗ್ಗೆ 8 ಗಂಟೆಯಿಂದ ಮತ ಎಣಿಕೆ ಪ್ರಕ್ರಿಯೆಗೆ ಚಾಲನೆ ●ಪ್ರತಿ ವಿಧಾನಸಭಾ ಕ್ಷೇತ್ರದ ಎಣಿಕಾ ಟೇಬಲ್‌ಗೆ ಪ್ರತಿ ಪಕ್ಷದ ಒಬ್ಬ ಏಜೆಂಟ್‌ಗೆ ಅವಕಾಶ

ಮೈಸೂರು, ಮೇ 30(ಎಂಟಿವೈ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯ ಮತ ಎಣಿಕಾ ಕಾರ್ಯಕ್ಕೆ ಮೈಸೂರಿನ ಮಹಾರಾಣಿ ವಾಣಿಜ್ಯ ಕಾಲೇಜಿನಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಮೂರು ಸುತ್ತಿನ ಪೊಲೀಸ್ ಬಿಗಿ ಭದ್ರತೆಯಲ್ಲಿ ಜೂ.4ರಂದು ಬೆಳಗ್ಗೆ 8ರಿಂದ ಎಣಿಕಾ ಕಾರ್ಯ ಆರಂಭವಾಗಲಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಲೋಕಸಭಾ ಚುನಾವಣಾ ಮತ ಎಣಿಕೆ ಸಂಬಂಧ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಚಿತ್ರದಲ್ಲಿ ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಪೊಲೀಸ್ ಆಯುಕ್ತ ರಮೇಶ್ ಬಾನೊತ್, ಡಿಸಿಪಿ ಮುತ್ತುರಾಜ್, ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ ಅವರನ್ನು ಕಾಣಬಹುದು.

ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತ ಎಣಿಕಾ ಕಾರ್ಯಕ್ಕೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ. ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ 10 ಕೊಠಡಿಗಳನ್ನು ಎಣಿಕಾ ಕಾರ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಲೋಕಸಭಾ ಕ್ಷೇತ್ರದ ವ್ಯಾಪ್ತಿ 8 ವಿಧಾನಸಭಾ ಕ್ಷೇತ್ರಗಳ ಮತಯಂತ್ರಗಳನ್ನು ಪ್ರತ್ಯೇಕ ಕೊಠಡಿಯಲ್ಲಿರಿಸಿ ಏಕಕಾಲಕ್ಕೆ ಎಣಿಕಾ ಕಾರ್ಯ ಜರುಗಲಿದೆ. ನೆಲ ಮಹಡಿಯ ಕೊಠಡಿ-11ರಲ್ಲಿ ಹುಣಸೂರು, ಮೊದಲನೇ ಮಹಡಿ 103ರಲ್ಲಿ ಚಾಮರಾಜ, 111ರಲ್ಲಿ ಕೃಷ್ಣರಾಜ, 120ರಲ್ಲಿ ಚಾಮುಂಡೇಶ್ವರಿ, 126ರಲ್ಲಿ ಪಿರಿಯಾಪಟ್ಟಣ, ಎರಡನೇ ಮಹಡಿಯ ಕೊಠಡಿ ಸಂಖ್ಯೆ 203ರಲ್ಲಿ ವಿರಾಜಪೇಟೆ, 211ರಲ್ಲಿ ಮಡಿಕೇರಿ, 218ರಲ್ಲಿ ನರಸಿಂಹರಾಜ ಕ್ಷೇತ್ರ, 220ರಲ್ಲಿ ಅಂಚೆ ಮತಪತ್ರಗಳು, 220(2)ರಲ್ಲಿ ಇಟಿಪಿಬಿಎಂಎಸ್ ಮತಗಳ ಎಣಿಕೆ ನಡೆಯಲಿದೆ. ಮತ ಎಣಿಕೆಯ ಪ್ರತಿಯೊಂದು ಟೇಬಲ್‌ಗೆ ಒಬ್ಬರು ಮೇಲ್ವಿಚಾರಕ, ಒಬ್ಬರು ಸಹಾಯಕ ಮತ್ತು ಒಬ್ಬರು ಮೈಕ್ರೋ ಅಬ್ಸರ್ವರ್ ನೇಮಕ ಮಾಡಿ, ಈಗಾಗಲೇ ಒಂದು ಹಂತದ ತರಬೇತಿ ಮುಗಿದಿದ್ದು, ಜೂ.1ರಂದು ಅಂತಿಮ ಹಂತದ ತರಬೇತಿ ನೀಡಲಾಗುತ್ತದೆ ಎಂದು ತಿಳಿಸಿದರು.

ಮತ ಎಣಿಕೆ ಕೇಂದ್ರಕ್ಕೆ 3 ಹಂತದಲ್ಲಿ ಭದ್ರತೆ ಒದಗಿಸಲಾಗಿದ್ದು, ಮೂರನೇ ಹಂತದ ಭದ್ರತೆಯ ವ್ಯಾಪ್ತಿಯ ನಂತರ ಕೊಠಡಿ ದ್ವಾರಗಳನ್ನು ವೀಕ್ಷಣೆ ಮಾಡಲು ಅವಕಾಶ ಕಲ್ಪಿಸಿದ್ದು, ಹೀಗಾಗಿ ಅಭ್ಯರ್ಥಿಗಳು ಹಾಗೂ ಚುನಾವಣಾ ಏಜೆಂಟರು ಅಂದು ಬೆಳಿಗ್ಗೆ 7ಕ್ಕೆ ಮತ ಎಣಿಕೆ ಕೇಂದ್ರದ ಭದ್ರತಾ ಕೊಠಡಿಯ ಆವರಣಕ್ಕೆ ಬರಲು ಸೂಚನೆ ನೀಡಲಾಗಿದೆ. ಬೆಳಿಗ್ಗೆ 7.30ಕ್ಕೆ ಭದ್ರತಾ ಕೊಠಡಿಯ ಬಾಗಿಲನ್ನು ತೆರೆಯಲಾಗುವುದು. ಮತ ಎಣಿಕೆ ಸ್ಥಳದಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳು ಮತ್ತು ಚುನಾವಣಾ ಏಜೆಂಟರು, ಮತ ಎಣಿಕೆ ಏಜೆಂಟರು ಪ್ರವೇಶಿಸಲು ಅವಕಾಶ ಇರಲಿದೆ ಎಂದು ಮಾಹಿತಿ ನೀಡಿದರು.

ಜೂ.4ರಂದು ಬೆಳಗ್ಗೆ 7.30ಕ್ಕೆ ರಾಜಕೀಯ ಪಕ್ಷಗಳ ಮುಖಂಡರು, ಅಭ್ಯರ್ಥಿಗಳ ಏಜೆಂಟರ ಸಮ್ಮುಖದಲ್ಲಿ ಸ್ಟ್ರಾಂಗ್‌ರೂಮ್ ತೆರೆಯಲಾಗುತ್ತದೆ. ಎಣಿಕಾ ಪ್ರಕ್ರಿಯೆಯಲ್ಲಿ ಮೊದಲಿಗೆ ಅಂಚೆ ಮತದಾನ ಆರಂಭಿಸಲಾಗುತ್ತದೆ. 8.30ರ ನಂತರ ಮತಯಂತ್ರಗಳಿಂದ ಎಣಿಕಾ ಕಾರ್ಯ ಆರಂಭವಾಗುತ್ತದೆ. ಪ್ರತಿ ಕೊಠಡಿಯಲ್ಲೂ 14 ಟೇಬಲ್‌ನಲ್ಲಿ ಎಣಿಕಾ ಕಾರ್ಯ ನಡೆಯಲಿದೆ. ಮತ ಎಣಿಕೆಗೆ ಈಗ ಎಲ್ಲ ಅಭ್ಯರ್ಥಿಗಳು ಟೇಬಲ್‌ಗೆ ಒಬ್ಬರಂತೆ ಎಣಿಕಾ ಏಜೆಂಟರನ್ನು ನೇಮಿಸಬಹುದು. ಈ ಏಜೆಂಟರು ಮತ ಎಣಿಕೆ ಕೇಂದ್ರದಲ್ಲಿ ಅವರಿಗೆ ನಿಯೋಜಿಸಿರುವ ಸ್ಥಳದಲ್ಲಿ ಕುಳಿತುಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ. ವಿವಿ ಪ್ಯಾಟ್‌ಗಳನ್ನು ಆಯ್ಕೆ ಮಾಡಿ ಎಣಿಕೆ ಮಾಡಲಾಗುವುದು. ಮತ ಎಣಿಕಾ ಹಾಲ್‌ನಲ್ಲಿ ಮೊಬೈಲ್ ಮತ್ತಿತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿರ್ಬಂಧಿಸಲಾಗಿದೆ. ಮತ ಎಣಿಕೆ ಆವರಣದ ಸುತ್ತ ಸೆಕ್ಷನ್ 144 ಜಾರಿಗಳಿಸಲಾಗಿದೆ ಎಂದು ತಿಳಿಸಿದರು.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಈ ಬಾರಿ 20,92,222 ಮತದಾರರಿದ್ದು, 14,77,571 ಮತದಾನ ಮಾಡಿ ಶೇ.70.62ರಷ್ಟು ಮತದಾನವಾಗಿದೆ. ಸೇವಾ ಮತದಾರರಿಗೆ 2088 ಅಂಚೆ ಮತಪತ್ರ ಹಂಚಿಕೆ ಮಾಡಲಾಗಿದ್ದು, ಅವುಗಳಲ್ಲಿ ಇದುವರೆಗೂ 1012 ಅಂಚೆ ಮತಪತ್ರ ಸ್ವೀಕೃತವಾಗಿದೆ. ಜೂ.4ರ ಬೆಳಗ್ಗೆ 8ಗಂಟೆವರೆಗೂ ಅಂಚೆ ಮತಪತ್ರಗಳನ್ನು ಸ್ವೀಕರಿಸಲಾಗುತ್ತದೆ. 8 ಗಂಟೆ ನಂತರ ಬರುವ ಅಂಚೆ ಮತಪತ್ರವನ್ನು ಪರಿಗಣಿಸುವುದಿಲ್ಲ. 85 ವರ್ಷ ಮೇಲ್ಪಟ್ಟವರು, ವಿಶೇಷಚೇತನರು(ಪಿಡಬ್ಲ್ಯುಡಿ) ಮತದಾರರು, ಎವಿಇಎಸ್ ಮತದಾರರು 8902 ಇದ್ದು, ಅದರಲ್ಲಿ 7594 ಮತ ಚಲಾವಣೆಯಾಗಿದೆ ಎಂದು ಹೇಳಿದರು.

ಇವಿಎಂ ಮತ ಎಣಿಕೆ ಮತ್ತು ಅಂಚೆ ಮತ ಪತ್ರ, ಇಟಿಪಿಬಿಎಂಎಸ್ ಮತ ಎಣಿಕೆ ಕಾರ್ಯಕ್ಕೆ ಮೀಸಲು ಸಿಬ್ಬಂದಿ ಸೇರಿದಂತೆ ಒಟ್ಟು 160 ಮತ ಎಣಿಕೆ ಮೇಲ್ವಿಚಾರಕರು, 187 ಮತ ಎಣಿಕೆ ಸಹಾಯಕರು ಮತ್ತು 171 ಮತ ಎಣಿಕೆ ಮೈಕ್ರೋ ಅಬ್ಸರ್‌ವರ್‌ಗಳನ್ನು ನೇಮಕ ಮಾಡಲಾಗಿದೆ. ಇದರೊಂದಿಗೆ ಎಣಿಕೆ ಮಾಡಲು, ಇವಿಎಂ ತೆಗೆದುಕೊಂಡು ಬರುವುದು ಸೇರಿದಂತೆ ವಿವಿಧ ಕಾರ್ಯಕ್ಕಾಗಿ ಒಂದು ವಿಧಾನಸಭಾ ಕ್ಷೇತ್ರದ ಎಣಿಕಾ ಕಾರ್ಯಕ್ಕೆ 80ರಿಂದ 100 ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದರು.

ಎಣಿಕಾ ಕಾರ್ಯದ ವೇಳೆ ಎಲ್ಲಾ ವಿವಿ ಪ್ಯಾಟ್‌ಗಳನ್ನು ಎಣಿಕೆ ಮಾಡಲು ಅವಕಾಶವಿಲ್ಲ. ಪ್ರತಿ ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದ ತಲಾ 5 ವಿವಿ ಪ್ಯಾಟ್‌ಗಳಲ್ಲಿರುವ ಚೀಟಿಗಳನ್ನು ಎಣಿಕೆ ಮಾಡಬಹುದಾಗಿದೆ. ಮತಗಟ್ಟೆಗಳ ಸಂಖ್ಯೆಯುಳ್ಳ ಸ್ಲಿಪ್‌ಗಳುಳ್ಳ ಬಾಕ್ಸ್‌ನಿಂದ ರಾಜಕೀಯ ಪಕ್ಷಗಳ ಏಜೆಂಟರು ಆಯ್ಕೆ ಮಾಡಿದ ನಂತರ ಅನುಮಾನವಿದ್ದರೆ ವಿವಿ ಪ್ಯಾಟ್ ಸ್ಲಿಪ್‌ಗಳ ಎಣಿಕೆ ಮಾಡಲು ಅವಕಾಶವಿದೆ ಎಂದರು.

ಪಾಲಿಸಬೇಕಾದ ಸೂಚನೆಗಳು: ಪ್ರತಿ ಎಣಿಕೆ ಏಜೆಂಟರಿಗೆ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯನ್ನು ಕಡ್ಡಾಯ ಧರಿಸಿಕೊಂಡಿರಬೇಕು. ಪಾಸ್ ತೆಗೆದುಕೊಂಡು ಬರದೇ ಹೋದರೆ ಅಂತಹ ಏಜೆಂಟರನ್ನು ಮತ ಎಣಿಕೆ ಕೇಂದ್ರದ ಒಳಗಡೆ ಬಿಡುವುದಿಲ್ಲ. ಈ ಶಿಸ್ತನ್ನು ಪಾಲಿಸದೇ ಇರುವ ಏಜೆಂಟರನ್ನು ಯಾವುದೇ ಸಂದರ್ಭದಲ್ಲಿಯೂ ಚುನಾವಣಾಧಿಕಾರಿ ಯಾವುದೇ ಪೂರ್ವ ಮುನ್ಸೂಚನೆ ನೀಡದೆ ಹೊರಗೆ ಹಾಕಲಾಗುವುದು. ಮೊಬೈಲ್ ಫೋನ್‌ಗಳಿಗೆ ಅವಕಾಶ ಇರುವುದಿಲ್ಲ. ಮೊಬೈಲ್ ಫೋನ್‌ಗಳನ್ನು ಸಂಗ್ರಹಣಾ ಕೌಂಟರ್‌ನಲ್ಲಿ ಇರಿಸಬೇಕು. ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಮತ ಎಣಿಕಾ ವಿವರಗಳನ್ನು ಅನೌನ್ಸ್ ಮಾಡಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅತೀ ಹೆಚ್ಚಿನ ಸುತ್ತು: ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಎಂಟು ಕ್ಷೇತ್ರಗಳಲ್ಲಿ ಮಡಿಕೇರಿ ಕ್ಷೇತ್ರದ 273 ಮತಗಟ್ಟೆಗಳಿಗೆ 20 ಸುತ್ತಿನಲ್ಲಿ ಮತ ಎಣಿಕೆ ನಡೆಯಲಿದೆ. ವಿರಾಜಪೇಟೆಯ 273 ಮತಗಟ್ಟೆಗಳಿಗೆ 20 ಸುತ್ತು, ಪಿರಿಯಾಪಟ್ಟಣ ಕ್ಷೇತ್ರದ 235 ಮತಗಟ್ಟೆಗಳಿಗೆ 17 ಸುತ್ತು, ಹುಣಸೂರು ಕ್ಷೇತ್ರದ 274 ಮತಗಟ್ಟೆಗಳಿಗೆ 20 ಸುತ್ತು, ಚಾಮುಂಡೇಶ್ವರಿ ಕ್ಷೇತ್ರದ 343 ಮತಗಟ್ಟೆಗಳಿಗೆ 25 ಸುತ್ತು, ಕೃಷ್ಣರಾಜ ಕ್ಷೇತ್ರದ 265 ಮತಗಟ್ಟೆಗಳಿಗೆ 19 ಸುತ್ತು, ಚಾಮರಾಜ ಕ್ಷೇತ್ರದ 248 ಮತಗಟ್ಟೆಗಳಿಗೆ 18 ಸುತ್ತು, ನರಸಿಂಹರಾಜ ಕ್ಷೇತ್ರದ 291 ಮತಗಟ್ಟೆಗಳಿದ್ದು, 21 ಸುತ್ತುಗಳಲ್ಲಿ ಎಣಿಕೆ ನಡೆಯಲಿದ್ದು, ಪ್ರತಿ ಕ್ಷೇತ್ರಕ್ಕೆ 14 ಎಣಿಕೆ ಟೇಬಲ್‌ಗಳಲ್ಲಿ ಎಣಿಕೆ ನಡೆಯಲಿದೆ. ಅಂಚೆ ಮತಪತ್ರ ಮತ್ತು ಸೇವಾ ಮತದಾರರ ಅಂಚೆ ಮತಪತ್ರಗಳ ಎಣಿಕೆಗೆ 25 ಟೇಬಲ್‌ಗಳ ವ್ಯವಸ್ಥೆಗೆ ಕ್ರಮಕೈಗೊಳ್ಳಲಾಗಿದೆ. ಸುದ್ದಿಗೋಷ್ಠಿಯಲ್ಲಿ ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಪೊಲೀಸ್ ಆಯುಕ್ತ ರಮೇಶ್ ಬಾನೊತ್, ಡಿಸಿಪಿ ಮುತ್ತುರಾಜ್, ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ ಇದ್ದರು.

ಎಣಿಕಾ ಕೇಂದ್ರ 100 ಮೀಟರ್ ಸುತ್ತಮುತ್ತ ನಿಷೇಧಾಜ್ಞೆ

ಮೈಸೂರು, ಮೇ 30(ಎಂಟಿವೈ)- ಲೋಕಸಭಾ ಚುನಾವಣೆಯ ಮತ ಎಣಿಕೆ ನಡೆಯುವ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ 100 ಮೀಟರ್ ಸುತ್ತಮುತ್ತ ನಿಷೇಧಾಜ್ಞೆ ಹೇರಲಾಗಿದ್ದು, ವಾಹನ ಸಂಚಾರಕ್ಕೆ ಬದಲಿ ಮಾರ್ಗದ ವ್ಯವಸ್ಥೆ ಮಾಡಲಾಗುತ್ತದೆ ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೊತ್ ತಿಳಿಸಿದ್ದಾರೆ.

ಜಿ.ಪಂ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತ ಎಣಿಕೆ ಕೇಂದ್ರಕ್ಕೆ ಪಾಸ್ ಇರುವವರಿಗೆ ಮಾತ್ರ ಒಳ ಪ್ರವೇಶಿಸಲು ಅವಕಾಶ ನೀಡಲಾಗುತ್ತದೆ. ಚುನಾವಣಾ ಆಯೋಗ ನೀಡಿರುವ ಪಾಸ್ ಅನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕಾಗಿದೆ. ಪ್ರತ್ಯೇಕ ಎರಡು ಸ್ಥಳದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಪಾಸ್ ಇಲ್ಲದೇ ಇರುವವರು ಎಣಿಕಾ ಕೇಂದ್ರದ ಬಳಿ ಓಡಾಡುವುದಕ್ಕೂ ನಿಷೇಧ ಹೇರಲಾಗಿದೆ. ಕತ್ತರಿ, ಚಾಕು ಇನ್ನಿತರ ಹರಿತವಾದ ವಸ್ತುಗಳು, ಬೆಂಕಿ ಹಾಗೂ ಸ್ಫೋಟಕ ಸಾಮಗ್ರಿಗಳಿಗೆ ಅವಕಾಶವಿಲ್ಲ. ಪ್ರಚೋದನಕಾರಿ ಭಾಷಣಕ್ಕೆ ನಿಷೇಧ, ಧ್ವನಿವರ್ಧಕ, ಡಿಜೆ ಉಪಯೋಗಿಸುವುದು ಮತ್ತು ಬೈಕ್ ರ್‍ಯಾಲಿ ನಿಷೇಧಿಸಲಾಗಿದೆ. ಮತ ಎಣಿಕೆ ಕೇಂದ್ರದ ಸುತ್ತ 100 ಮೀಟರ್ ಅಂತರದಲ್ಲಿ ಮೊಬೈಲ್ ಫೋನ್, ಕಾರ್ಡ್‌ಲೆಸ್ ಫೋನ್ ಅಥವಾ ಇನ್ನಿತರ ಎಲೆಕ್ಟ್ರಾನಿಕ್ ಉಪಕರಣಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಿದೆ. ಮತ ಎಣಿಕೆ ಕಾರ್ಯಕ್ಕೆ ನಿಯೋಜಿಸಲಾದ ಅಧಿಕಾರಿಗಳು, ಸಿಬ್ಬಂದಿ, ಅಭ್ಯರ್ಥಿಗಳು, ಚುನಾವಣಾ ಏಜೆಂಟ್, ಎಣಿಕೆ ಏಜೆಂಟ್‌ಗಳನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಪ್ರವೇಶಿಸುವಂತಿಲ್ಲ. ಗೆದ್ದ ಅಭ್ಯರ್ಥಿಗಳ ವಿಜಯೋತ್ಸವ ಮೆರವಣಿಗೆ ನಿಷೇಧಿಸಲಾಗಿದೆ ಎಂದರು.

ಕಳೆದ ಬಾರಿ ಸಾರ್ವಜನಿಕರಿಗೆ ಪ್ರವೇಶ ನೀಡಿಲ್ಲ ಎಂಬ ಆರೋಪ ಕೇಳಿ ಬಂದಿತ್ತು. ಹೀಗಾಗಿ ಈ ಬಾರಿ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದ್ದು, ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಅವಕಾಶವಿದೆ. ಕಲಾಮಂದಿರದಿಂದ ಹುಣಸೂರು ರಸ್ತೆಯ ಕೆಎಸ್‌ಓಯು ಸಿಗ್ನಲ್‌ವರೆಗೆ, ಲೀಲಾಚೆನ್ನಯ್ಯ ಕಲ್ಯಾಣ ಮಂಟಪದವರೆಗೂ ವಾಹನ ಸಂಚಾರ ನಿಷೇಧಿಸಲಾಗುತ್ತಿದೆ. ಹೀಗಾಗಿ ವಾಹನ ಸಂಚಾರಕ್ಕೆ ಬದಲಿ ವ್ಯವಸ್ಥೆ ಮಾಡಲಾಗುವುದು ಎಂದರು.

ನನ್ನ, ಸಿಎಂ ಸಿದ್ದರಾಮಯ್ಯ, ನಮ್ಮ ಸರ್ಕಾರದ ವಿರುದ್ಧ ಶತ್ರು ಭೈರವಿ ಯಾಗ

•ಡಿಸಿಎಂ ಡಿ.ಕೆ.ಶಿವಕುಮಾರ್ ಅಚ್ಚರಿ ಹೇಳಿಕೆ •ಭೈರವನ ಭಕ್ತಿಯಿಂದ ಸ್ಮರಿಸಿದರೆ ಒಳ್ಳೆಯದಾಗುತ್ತೆ: ಸ್ವಸಮಾಧಾನ

ಬೆಂಗಳೂರು,ಮೇ 30- ನನ್ನ ವಿರುದ್ಧ ಕೇರಳದ ದೇವಸ್ಥಾನವೊಂದರಲ್ಲಿ ಶತ್ರು ಭೈರವಿ ಯಾಗವನ್ನು ಮಾಡಿಸಲಾಗುತ್ತಿದೆ. ಈ ಯಾಗವನ್ನು ಯಾರು ಮಾಡಿಸುತ್ತಿದ್ದಾರೆ, ಯಾರ್‍ಯಾರು ಆ ಯಾಗದಲ್ಲಿ ಭಾಗವಹಿಸಿದ್ದಾರೆ, ಇನ್ನೂ ಯಾರು ಈ ಯಾಗದ ಹಿಂದಿದ್ದಾರೆ ಎಂಬ ವಿಚಾರ ನನಗೆ ಗೊತ್ತಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರು ಹೇಳಿದ್ದಾರೆ.



ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಹಾಗೂ ಸಿಎಂ ಸಿದ್ದರಾಮಯ್ಯ ವಿರುದ್ಧ, ನಮ್ಮ ಸರ್ಕಾರದ ವಿರುದ್ಧವೇ ಯಾಗ ಮಾಡಿಸಲಾಗುತ್ತಿದೆ. ಕೇರಳದ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಈ ಯಾಗ ನಡೆಯುತ್ತಿದೆ. ಉತ್ತರ ಭಾರತದಿಂದ ಬಂದಿರುವ ಅಘೋರಿಗಳ ತಂಡವೊಂದು ಈ ಯಾಗವನ್ನು ನಡೆಸುತ್ತಿದೆ. ಅಷ್ಟೇ ಅಲ್ಲ, ಈ ಯಾಗದಲ್ಲಿ ಪಂಚ ಬಲಿಯನ್ನೂ ನೀಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಹೆಸರೇ ಹೇಳುವಂತೆ, ಶತ್ರು ಭೈರವ ಯಾಗ ಎಂದರೆ ಶತ್ರುಗಳನ್ನು ನಾಶಪಡಿಸುವ ಅಥವಾ ಶತ್ರುಗಳ ಬಾಧೆಯಿಂದ ಹೊರಬರಲು ಮಾಡುವಂಥ ಯಾಗ ಎಂದು ಧಾರ್ಮಿಕ ವಲಯದಲ್ಲಿ ಹೇಳಲಾಗುತ್ತದೆ. ನಮ್ಮ ದೇಶದಲ್ಲಿ ಭೈರವ ದೇವರನ್ನು ಅನಾದಿ ಕಾಲದಿಂದಲೂ ಪೂಜಿಸಿಕೊಂಡು ಬರಲಾಗಿದೆ.

ನಾವೆಲ್ಲರೂ ಕಾಲಭೈರವ ದೇವರ ಹೆಸರನ್ನು ಕೇಳಿರುತ್ತೇವೆ. ಕಾಲ ಭೈರವ ಎಂಬ ದೇವರಿನ ಹೆಸರು ಕೇಳಿದ ಕೂಡಲೇ ಕೆಲವರು ಬೆಚ್ಚಿ ಬೀಳುವುದುಂಟು. ಆದರೆ, ನಿಜ ಹೇಳಬೇಕೆಂದರೆ ಶುದ್ಧ ಮನಸ್ಸಿನಿಂದ ಕಾಲ ಭೈರವನ ಪೂಜೆ, ಆರಾಧನೆ ಮಾಡಿದರೆ ಮನುಷ್ಯರು ತಾವು ಅನುಭವಿಸುತ್ತಿರುವ ತೊಂದರೆಗಳಿಂದ, ಕಷ್ಟಗಳಿಂದ ಬೇಗನೇ ಮುಕ್ತಿ ಹೊಂದಿ ಸುಖ ಜೀವನವನ್ನು ಪಡೆಯುತ್ತಾರೆಂಬ ಪ್ರತೀತಿಯಿದೆ.

ಅಷ್ಟೇ ಅಲ್ಲ, ವ್ಯಕ್ತಿ ಜಾತಕದಲ್ಲಿ ಶನಿ, ರಾಹು ಹಾಗೂ ಕೇತುಗಳ ಮಹಾದೆಸೆಯಿದ್ದರೂ, ಭೈರವನನ್ನು ಪೂಜಿಸಿದರೆ ಆ ವ್ಯಕ್ತಿಯು ಎಲ್ಲಾ ತೊಂದರೆಗಳಿಂದ ಮುಕ್ತನಾಗುತ್ತಾನೆ ಎಂಬ ಮಾತು ಇದೆ. ಹಾಗಾದರೆ, ಈ ಭೈರವ ದೇವರ ಪೂಜೆ ಹೇಗೆ ಎಂದು ಯಾರಾದರೂ ಕೇಳಬಹುದು. ಅಸಲಿಗೆ, ಭೈರವನು ಎಂಟು ರೂಪಗಳಿದ್ದಾನೆ ಎಂದು ಹೇಳಲಾಗುತ್ತದೆ. ಅವುಗಳೆಂದರೆ, ಚಂಡ ಭೈರವ, ಬಟುಕ್ ಭೈರವ, ರೂ ರೂ ಭೈರವ, ಕ್ರೋಧ ಭೈರವ, ಉನ್ಮತ ಭೈರವ, ಕಪಾಲ ಭೈರವ, ಭೀಷಣ ಭೈರವ ಮತ್ತು ಸಂಹಾರ ಭೈರವ. ಆ ಎಂಟು ಸ್ವರೂಪಗಳ ಹೆಸರುಗಳನ್ನು ಸ್ಮರಿಸಿದರೂ ಸಾಕು, ಕಾಲ ಭೈರವನು ಎಂಟು ದಿಕ್ಕುಗಳಿಂದ ತನ್ನ ಭಕ್ತರನ್ನು ಕಾಪಾಡುತ್ತಾನೆ ಎಂದು ಆಸ್ತಿಕರು ಹೇಳುತ್ತಾರೆ.

ಲಿಕ್ವಿಡ್ ನೈಟ್ರೋಜನ್ ನಿಷೇಧಿಸಿ ರಾಜ್ಯ ಸರ್ಕಾರ ಆದೇಶ

ಬಳಸಿದರೆ 7 ವರ್ಷ ಶಿಕ್ಷೆ, 10 ಲಕ್ಷ ರೂ. ದಂಡ!

ಬೆಂಗಳೂರು, ಮೇ 30- ರಾಜ್ಯದಲ್ಲಿ 'ಲಿಕ್ವಿಡ್ ನೈಟ್ರೋಜನ್' ನಿಷೇಧ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ಒಂದು ವೇಳೆ ಬಳಸಿದರೆ 7 ವರ್ಷ ಶಿಕ್ಷೆ, 10 ಲಕ್ಷ ರೂ. ದಂಡ ವಿಧಿಸಲಾಗುತ್ತದೆ.

ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಸ್ಮೋಕಿಂಗ್ ಬಿಸ್ಕತ್ ಅಥವಾ ಡೆಸರ್ಟ್ಸ್ ಹಾಗೂ ಇತರೆ ತಿನಿಸುಗಳನ್ನು ಸೇವನೆಗಾಗಿ ಗ್ರಾಹಕರಿಗೆ ಒದಗಿಸುವ ಸಂದರ್ಭದಲ್ಲಿ ಲಿಕ್ವಿಡ್ ನೈಟ್ರೋಜನ್ (ದ್ರವ ಸಾರಜನಕ) ಬಳಸುವುದನ್ನು ನಿರ್ಬಂಧಿಸಲಾಗಿದೆ.

ಈ ಕುರಿತು ಮೇ 3ರಂದು ಆದೇಶಿಸಲಾಗಿದ್ದು, ಅಗತ್ಯ ಪ್ರಕಟಣೆಯನ್ನು ಹೊರಡಿಸಲಾಗಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಇದೀಗ ಮತ್ತೊಮ್ಮೆ ಪ್ರಕಟಣೆ ನೀಡಲಾಗಿದೆ. ಆದೇಶವನ್ನು ಉಲ್ಲಂಘಿಸಿದಲ್ಲಿ ಆಹಾರ ತಯಾರಕರ ವಿರುದ್ಧ 7 ವರ್ಷ ಶಿಕ್ಷೆ ಹಾಗೂ 10 ಲಕ್ಷ ರೂಪಾಯಿಗಳವರೆಗೆ ದಂಡ ವಿಧಿಸಲಾಗುವುದು ಎಂದು ರಾಜ್ಯ ಸರ್ಕಾರ ಎಚ್ಚರಿಕೆ ನೀಡಿದೆ.

ಲಿಕ್ವಿಡ್ ನೈಟ್ರೋಜನ್ ಪಾನ್ ತಿಂದು 12 ವರ್ಷರ ಬಾಲಕಿಯ ಹೊಟ್ಟೆಯಲ್ಲಿ ರಂಧ್ರವಾಗಿತ್ತು. ಇದು ಜನರಲ್ಲಿ ಆತಂಕ ಸೃಷ್ಟಿಸಿದ್ದು ಇದರ ಬೆನ್ನಲ್ಲೇ ಲಿಕ್ವಿಡ್ ನೈಟ್ರೋಜನ್ ಪಾನ್ ನಿಷೇಧಕ್ಕೆ ಹೋಟೆಲ್ ಅಸೋಸಿಯೇಷನ್ ಮುಂದಾಗಿತ್ತು.

ಪುರಿ ಜಗನ್ನಾಥ ಉತ್ಸವದ ವೇಳೆ ಪಟಾಕಿ ಸ್ಫೋಟ: ಮೂವರ ಸಾವು, 30 ಮಂದಿಗೆ ಗಾಯ

ಭುವನೇಶ್ವರ, ಮೇ 30- ಪುರಿಯಲ್ಲಿ ಬುಧವಾರ ಜಗನ್ನಾಥ ದೇವರ ಚಂದನ್ ಯಾತ್ರೆಯ ವೇಳೆ ಪಟಾಕಿ ಸಿಡಿದ ಪರಿಣಾಮ ಕನಿಷ್ಠ ಮೂವರು ಮೃತಪಟ್ಟಿದ್ದು, 30 ಭಕ್ತರು ಗಾಯಗೊಂಡಿದ್ದಾರೆ. ಚಂದನ್ ಯಾತ್ರೆ ಅಂಗವಾಗಿ ನರೇಂದ್ರ ಕೊಳದಲ್ಲಿ ಮೂರು ಪ್ರಧಾನ ದೇವರುಗಳಾದ ಜಗನ್ನಾಥ, ಬಲಭದ್ರ ಮತ್ತು ಸುಭದ್ರಾರ 'ಚಾಪಾ ಖೇಲಾ'ದ ಸಮಯದಲ್ಲಿ ಪಟಾಕಿಗಳನ್ನು ಸ್ಫೋಟಿಸಿದ್ದರಿಂದ ದುರ್ಘಟನೆ ಸಂಭವಿಸಿತು.

ಪಟಾಕಿಗಳ ಸಿಡಿತದಿಂದ ತೀವ್ರ ಸುಟ್ಟಗಾಯಗಳಾಗಿ ಕಟಕ್‌ನ ಎಸ್‌ಸಿಬಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸೇರಿಸಿದ್ದ ಬಾಲಕ ಮತ್ತು ಭುವನೇಶ್ವರದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇಬ್ಬರು ಮೃತಪಟ್ಟಿದ್ದಾರೆ. ಒಡಿಶಾದ ಮುಖ್ಯ ಕಾರ್ಯದರ್ಶಿ ಪ್ರದೀಪ್ ಕುಮಾರ್ ಜೆನಾ, ಖುರ್ದಾ ಕಲೆಕ್ಟರ್ ಚಂಚಲ್ ರಾಣಾ ಮತ್ತು ಆರೋಗ್ಯ ಕಾರ್ಯದರ್ಶಿ ಶಾಲಿನಿ ಪಂಡಿತ್ ಅವರು ಬುಧವಾರ ತಡರಾತ್ರಿ ವಿವಿಧ ಆಸ್ಪತ್ರೆಗಳಿಗೆ ಭೇಟಿ ನೀಡಿ ಗಾಯಾಳುಗಳ ಚಿಕಿತ್ಸೆಯ ಮೇಲ್ವಿಚಾರಣೆ ನಡೆಸಿದರು. ಪ್ರತ್ಯಕ್ಷದರ್ಶಿಗಳ ಪ್ರಕಾರ, ಪವಿತ್ರ ಕೊಳದಲ್ಲಿ ಜಲಕ್ರೀಡೆಯನ್ನು ವೀಕ್ಷಿಸಲು ಅಲ್ಲಿ ನೆರೆದಿದ್ದ ಭಕ್ತರ ಮೇಲೆ ಸಿಡಿದ ಪಟಾಕಿ ಕಿಡಿಗಳು ಬಿದ್ದಿವೆ. ಜನಸಾಗರ ನೆರೆದಿದ್ದರೂ ಅಗ್ನಿ ಸುರಕ್ಷತಾ ಕ್ರಮ ಇರಲಿಲ್ಲ.

ಅಕ್ರಮವಾಗಿ ಹಣ ವರ್ಗಾವಣೆ

ಸಚಿವ ನಾಗೇಂದ್ರ ವಜಾ ಮಾಡಬೇಕು; ಪ್ರಕರಣದ ಸಿಬಿಐ ತನಿಖೆ ಆಗಬೇಕು

●ವಿಪಕ್ಷ ನಾಯಕ ಆರ್.ಅಶೋಕ್ ಆಗ್ರಹ ●ಇದಕ್ಕೆ ಜೂನ್ 6ರ ಗಡುವು

ಬೆಂಗಳೂರು, ಮೇ 30(ಕೆಎಂಶಿ)- ಪರಿಶಿಷ್ಟ ಪಂಗಡದವರ ಹಣ ನುಂಗಿರುವ ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ವಜಾ ಮಾಡಿ, ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ಒತ್ತಾಯಿಸಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ.ಗಳನ್ನು ಸರ್ಕಾರವೇ ನುಂಗಿ ನೀರು ಕುಡಿದಿದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಇದಕ್ಕೆ ನೇರ ಹೊಣೆ.

ಇಲಾಖಾ ಸಚಿವ ನಾಗೇಂದ್ರ ಅವರನ್ನು ಜೂನ್ 6ರೊಳಗೆ ಸಂಪುಟದಿಂದ ವಜಾಗೊಳಿಸದಿದ್ದರೆ, ಇಡೀ ರಾಜ್ಯಾದ್ಯಂತ ಬಿಜೆಪಿ ಉಗ್ರ ಹೋರಾಟ ನಡೆಸಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವರು ರಾಜೀನಾಮೆ ನೀಡುವವರೆಗೂ ನಾವು ವಿಶ್ರಮಿಸುವುದಿಲ್ಲ, ಅಷ್ಟೇ ಅಲ್ಲ, ಹಗರಣದಲ್ಲಿ ಪಾಲುದಾರರಾಗಿರುವ ಅಧಿಕಾರಿಗಳನ್ನು ತಕ್ಷಣವೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಪ್ರಕರಣ ಮುಚ್ಚಿ ಹಾಕಲೆಂದೇ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ, ಸಿಐಡಿ ಎಂದರೆ, ಕಾಂಗ್ರೆಸ್ ಇನ್ವೆಸ್ಟಿಗೇಷನ್ ಡಿಪಾರ್ಟ್‌ಮೆಂಟ್, ಇದರಿಂದ ಯಾವುದೇ ನ್ಯಾಯ ದೊರಕದು ಎಂದರು.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಚುನಾವಣಾ ಭಾಷಣದಲ್ಲಿ ಮಾತನಾಡಿ, ತಮ್ಮ ಸರಕಾರ ಬಂದ ಬಳಿಕ ಮಹಿಳೆಯರ ಬ್ಯಾಂಕ್ ಖಾತೆಗೆ ಟಕಾ.., ಟಕ್, ಟಕಾ.., ಟಕ್ ಹಣ ಹಾಕುವುದಾಗಿ ಹೇಳಿದ್ದರು, ಅವರ ಮಾತನ್ನು ಅನುಸರಿಸಿದ ರಾಜ್ಯ ಕಾಂಗ್ರೆಸ್‌ನ ಎಲ್ಲ ಸಚಿವರು, ಟಕ್.., ಟಕಾ.., ಟಕ್ ಎಂಬಂತೆ ಹಣ ವರ್ಗಾವಣೆ ಮಾಡಿದ್ದಾರೆ ಎಂದು ವ್ಯಂಗ್ಯವಾಡಿದರು.

ನಾಲ್ಕರಂದು 25 ಕೋಟಿ ಟಕಾ.., ಟಕ್ ವರ್ಗಾವಣೆ, 6ರಂದು 25 ಕೋಟಿ ಟಕಾ.., ಟಕ್ ವರ್ಗಾವಣೆ, 21ರಂದು 44 ಕೋಟಿ ಟಕಾ.., ಟಕ್ ವರ್ಗಾವಣೆ, ರಾಜ್ಯ ಖಜಾನೆಯಿಂದ 43 ಕೋಟಿ ಟಕಾ.., ಟಕ್ ವರ್ಗಾವಣೆ, ಮತ್ತೆ 21ರಂದು 50 ಕೋಟಿ ಟಕಾ.., ಟಕ್ ಟ್ರಾನ್ಸ್‌ಫರ್ ಆಗಿದೆ.

ಕಾಂಗ್ರೆಸ್ಸಿನವರು ಇಷ್ಟು ಮೊತ್ತವನ್ನು ಅವರ ಲೂಟಿ ಖಾತೆಗೆ ಹಾಕಿದ್ದಾರೆ. ಇದೊಂದು ಬ್ರಹ್ಮಾಂಡ ಭ್ರಷ್ಟಾಚಾರ. 187 ಕೋಟಿ ರೂ. ನುಂಗಲು ಒಬ್ಬ ಮಂತ್ರಿಯಿಂದ ಸಾಧ್ಯವಿಲ್ಲ, ಇದು ಸಣ್ಣ ಮೊತ್ತವೇನಲ್ಲ ಅವರ ಜೀವನ, ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳು ಸಂತೃಪ್ತಿಯಿಂದ ಬದುಕುವಷ್ಟು ದುಡ್ಡು ಇದು ಎಂದರು.

ರಾಹುಲ್ ಗಾಂಧಿ ಹೇಳಿದಂತೆ 25 ಸಾವಿರ ಕೋಟಿ ರೂ. ದಲಿತರ ಹಣ ಮಾಯವಾಗಿದೆ, ಎಲ್ಲಿಗೆ ಹೋಯಿತು, ಯಾರಿಗೆ ಹೋಯಿತೆಂದು ಗೊತ್ತಿಲ್ಲ, ಯಾವುದಕ್ಕೆ ಬಳಸಿದರೆಂದೂ ಗೊತ್ತಿಲ್ಲ, ಇವತ್ತು ಅಧಿಕಾರಿಗಳು ಟಕಾ.., ಟಕ್ ಎಂದು ಸತ್ತು ಹೋಗುತ್ತಿದ್ದಾರೆ, ಬಿತ್ತನೆ ಬೀಜದ ಬೆಲೆ ಶೇ. 70 ರಷ್ಟು ಟಕಾ.., ಟಕ್ ಏರಿಕೆಯಾಗಿದೆ.

ಕಾಂಗ್ರೆಸ್ಸಿನವರಿಗೆ ರಾಮನ ಕಂಡರೆ ಆಗುವುದಿಲ್ಲ, ವಾಲ್ಮೀಕಿ ಮಹರ್ಷಿ ಕಂಡರೆ ಆಗೋಲ್ಲ. ಆದರೆ, ವಾಲ್ಮೀಕಿ ನಿಗಮದ ಹೆಸರಿನಲ್ಲಿ ಇದ್ದ 187 ಕೋಟಿ ರೂ. ಎಗರಿಸಿದ್ದು ಬ್ರಹ್ಮಾಂಡ ಭ್ರಷ್ಟಾಚಾರ. ಇದೆಲ್ಲಾ ಕಾಂಗ್ರೆಸ್ಸಿನ ಒಂದು ವರ್ಷದ ಸಾಧನೆ ಎಂದು ಟೀಕಿಸಿದರು.

ಧ್ಯಾನಕ್ಕಾಗಿ ಕನ್ಯಾಕುಮಾರಿ ತಲುಪಿದ ಮೋದಿ

ಭಗವತಿ ಅಮ್ಮನ್ ದೇಗುಲದಲ್ಲಿ ಪೂಜೆ



ಕನ್ಯಾಕುಮಾರಿ,ಮೇ 30- ಬರೋಬ್ಬರಿ 45 ಗಂಟೆಗಳ ಧ್ಯಾನ ಕೈಗೊಳ್ಳಲು ತಮಿಳುನಾಡಿನ ಕನ್ಯಾಕುಮಾರಿಯಲ್ಲಿರುವ ವಿವೇಕಾನಂದ ಸ್ಮಾರಕಕ್ಕೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಸಂಜೆ ತಲುಪಿದರು.

ಲೋಕಸಭೆಯ 7ನೇ ಮತ್ತು ಅಂತಿಮ ಹಂತದ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ತೆರೆಬಿದ್ದ ಬೆನ್ನಲ್ಲೇ ಮೋದಿ ದೀರ್ಘ ಧ್ಯಾನ ಆರಂಭಿಸಿದ್ದಾರೆ. 131 ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರು ಧ್ಯಾನ ಕೈಗೊಂಡಿದ್ದ ಧ್ಯಾನ ಮಂಟಪದಲ್ಲಿ ಇಂದು ಸಂಜೆಯಿಂದ ಜೂನ್ 1ರವರೆಗೆ ಮೋದಿ ಧ್ಯಾನ ಮಾಡಲಿದ್ದಾರೆ.

ಕನ್ಯಾಕುಮಾರಿಗೆ ಆಗಮಿಸುತ್ತಿದ್ದಂತೆ ನೇರ ಭಗವತಿ ಅಮ್ಮನ್ ದೇಗುಲಕ್ಕೆ ತೆರಳಿದ ಮೋದಿ, ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಧೋತಿ ಮತ್ತು ಬಿಳಿ ಶಾಲು ಹಾಕಿದ್ದ ಮೋದಿ ದೇಗುಲದಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ಗರ್ಭಗುಡಿಯ ಪ್ರದಕ್ಷಿಣೆ ಹಾಕಿದರು. ಅರ್ಚಕರು ವಿಶೇಷ ಆರತಿ ಬೆಳಗಿ, ಪ್ರಸಾದದ ಜೊತೆಗೆ ಶಾಲು ಮತ್ತು ದೇವಿಯ ಫೋಟೊವನ್ನು ನೀಡಿದರು.

ಚುನಾವಣಾ ಪ್ರಚಾರದ ಬಳಿಕ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವುದನ್ನು ಪ್ರಧಾನಿ ಮೋದಿ ರೂಢಿಸಿಕೊಂಡಿದ್ದಾರೆ. 2019ರ ಲೋಕಸಭಾ ಚುನಾವಣೆ ಪ್ರಚಾರದ ಬಳಿಕ ಅವರು ಕೇದಾರನಾಥ ಮತ್ತು 2014ರ ಪ್ರಚಾರದ ಬಳಿಕ ಶಿವಾಜಿಯ ಪ್ರತಾಪಗಢಕ್ಕೆ ತೆರಳಿದ್ದರು.

ಏಪ್ರಿಲ್ 19ರಿಂದ ಆರಂಭವಾಗಿ ಏಳು ಹಂತಗಳಲ್ಲಿ ನಡೆಯುತ್ತಿರುವ ಲೋಕಸಭಾ ಚುನಾವಣೆಯ ಪೈಕಿ 6 ಹಂತಗಳು ಮುಗಿದಿದೆ 7ನೇ ಹಂತದ ಚುನಾವಣೆಯ ಮತದಾನ ಜೂನ್ 1ರಂದು ನಡೆಯಲಿದ್ದು, ಜೂನ್ 4 ರಂದು ಫಲಿತಾಂಶ ಹೊರಬೀಳಲಿದೆ. ಪ್ರಧಾನಿ ಮೋದಿ ಭೇಟಿ ಹಿನ್ನೆಲೆಯಲ್ಲಿ ಭದ್ರತೆ ಹೆಚ್ಚಿಸಲಾಗಿದ್ದು, ಸುಮಾರು 2 ಸಾವಿರ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ.

ವಿದ್ಯಾರಣ್ಯಪುರಂ ಸಿವೇಜ್ ಫಾರಂನ ಗೇಟ್ ಬಂದ್; ಕಸ ತೆರವು ಹಿನ್ನೆಲೆ

ಕೆಸರೆ, ರಾಯನಕೆರೆ ಘಟಕಗಳಿಗೆ ಕಸ ಸಾಗಿಸಲು ಸೂಚನೆ

ಅಧಿಕಾರಿಗಳು, ಸಿಬ್ಬಂದಿಗೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತರ ಸೂಚನೆ



ಮೈಸೂರಿನ ವಿದ್ಯಾರಣ್ಯಪುರಂ ಸಿವೇಜ್ ಫಾರಂ ಗೇಟ್ ಬಂದ್ ಮಾಡಿರುವುದರಿಂದ ಕಸ ತುಂಬಿರುವ ವಾಹನಗಳು ಹೊರಗೆ ನಿಂತಿದ್ದ ದೃಶ್ಯ

ಮೈಸೂರು, ಮೇ 30(ಆರ್‌ಕೆ)- ವಿದ್ಯಾರಣ್ಯಪುರಂ ಸಿವೇಜ್ ಫಾರಂನಲ್ಲಿ ಬೆಟ್ಟದೋಪಾದಿಯಲ್ಲಿ ರಾಶಿ ಬಿದ್ದಿರುವ ಘನ ತ್ಯಾಜ್ಯ ತೆರವು ಪ್ರಕ್ರಿಯೆ ಆರಂಭವಾಗಿರುವುದರಿಂದ ಮೈಸೂರು ನಗರದಾದ್ಯಂತ ಇನ್ನು ಮುಂದೆ ಸಂಗ್ರಹಿಸುವ ತ್ಯಾಜ್ಯವನ್ನು ಕೆಸರೆ ಮತ್ತು ರಾಯನಕೆರೆ ಘಟಕಗಳಿಗೆ ಸಾಗಿಸುವಂತೆ ಪಾಲಿಕೆ ಆಯುಕ್ತರಾದ ಡಾ. ಎನ್.ಎನ್.ಮಧು ಸೂಚನೆ ನೀಡಿದ್ದಾರೆ.

ಈ ಸಂಬಂಧ ಮೇ 28ರಂದು ಅಧಿಸೂಚನೆ ಹೊರಡಿಸಿದ್ದ ಆಯುಕ್ತರು, ಈಗ ಸಿವೇಜ್ ಫಾರಂನ ಘನ ತ್ಯಾಜ್ಯ ಘಟಕದ ಮುಖ್ಯ ದ್ವಾರವನ್ನು ಬಂದ್ ಮಾಡಿಸಿದ್ದರು. ಹಾಗಾಗಿ ಮೈಸೂರು ನಗರದಾದ್ಯಂತ ಮನೆಮನೆಯಲ್ಲಿ ಸಂಗ್ರಹಿಸಲಾದ ಕಸ ತುಂಬಿದ ಟಿಪ್ಪರ್ ಚಾಲಕರು, ಎಂದಿನಂತೆ ಇಂದೂ ವಿದ್ಯಾರಣ್ಯಪುರಂನ ಸಿವೇಜ್ ಫಾರಂಗೆ ಕೊಂಡೊಯ್ದಿದ್ದರು. ಆದರೆ ಗೇಟ್ ಬಂದ್ ಆಗಿದ್ದರಿಂದ ವಾಹನ ಚಾಲಕರು ಹೊರಗೆ ಗಂಟೆ ಗಟ್ಟಲೆ ಕಾಯುತ್ತಿದ್ದರು. ವಿಷಯ ತಿಳಿದು, ಇಂದು ಅಲ್ಲಿಯೇ ಡಂಪ್ ಮಾಡುವಂತೆ ತಿಳಿಸಿದ ಡಾ.ಮಧು, ಇಂದು ಸಂಜೆ ಪಾಲಿಕೆ ಕಚೇರಿಯಲ್ಲಿ ಇಂಜಿನಿಯರ್‌ಗಳು, ಆರೋಗ್ಯ ವಿಭಾಗ, ಪರಿಸರ ಇಂಜಿನಿಯರ್‌ಗಳೊಂದಿಗೆ ಸಭೆ ನಡೆಸಿ ನಾಳೆ (ಮೇ31)ಯಿಂದ ಕೆಸರೆ ಮತ್ತು ರಾಯನಕೆರೆ ಘಟಕಗಳಿಗೆ ಮಾತ್ರ ವಿಂಗಡಿಸಿದ ಕಸ ಸುರಿಯುವಂತೆ ನಿರ್ದೇಶನ ನೀಡಿದರು.

ಪ್ರಸ್ತುತ ವಿದ್ಯಾರಣ್ಯಪುರಂನ ಸಿವೇಜ್ ಫಾರಂನಲ್ಲಿ ಸುಮಾರು 8 ಲಕ್ಷ ಟನ್ ಕಸ ಸಂಗ್ರಹವಾಗಿದ್ದು, ಅದನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಿ ತೆರವುಗೊಳಿಸಲು ಸೂರತ್ ಮೂಲದ ಮೆಸರ್ಸ್ ಡಿ.ಹೆಚ್.ಪಟೇಲ್ ಹಾರ್ದಿಕ್ ಬಿಕಾಬಾಯ್ ಕುಂಟ ಸಂಸ್ಥೆಗೆ ಟೆಂಡರ್ ಮೂಲಕ 2024ರ ಮಾರ್ಚ್ 15ರಂದು ಒಪ್ಪಿಸಿ ಕಾರ್ಯಾದೇಶ ನೀಡಲಾಗಿದ್ದು, ಅವರು ಈಗ ಸ್ಥಳದಲ್ಲಿ ಯಂತ್ರೋಪಕರಣ ಅಳವಡಿಸಿ, ಸಿದ್ಧತೆ ಮಾಡಿಕೊಂಡಿದ್ದಾರೆ. ಜೂನ್ 1ರಿಂದ ಪ್ರೊಸೆಸಿಂಗ್ ಕಾರ್ಯ ಆರಂಭಿಸಲಿದ್ದಾರೆ ಎಂದು ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆಜೆಸಿಂಧು ತಿಳಿಸಿದ್ದಾರೆ.

2022ರ ಸೆಪ್ಟಂಬರ್ ತಿಂಗಳವರೆಗೆ 6ಲಕ್ಷ ಟನ್ ಘನತ್ಯಾಜ್ಯ ಸಂಗ್ರಹವಾಗಿದ್ದು ಸಿವೇಜ್ ಫಾರಂನಲ್ಲಿ ಈವರೆಗೆ 8 ಲಕ್ಷ ಟನ್ ಕಸ ಸಂಗ್ರಹವಾಗಿದೆ. ಗುತ್ತಿಗೆ ಪಡೆದಿರುವ ಸಂಸ್ಥೆಯು ಆ ಸಾಮರ್ಥ್ಯದ ಕಸ ವಿಲೇವಾರಿಗೆ ಜವಾಬ್ದಾರಿ ಹೊತ್ತಿದೆಯೇ ಹೊರತು, ಹೆಚ್ಚುವರಿಯಾಗಿ ನಿತ್ಯ ಅಲ್ಲಿಗೆ ತ್ಯಾಜ್ಯ ಡಂಪ್ ಮಾಡಿದರೆ ತೊಂದರೆಯಾಗುತ್ತದೆ ಎಂದು ಅವರು ತಿಳಿಸಿದರು.

7 ತಿಂಗಳ ಹಿಂದೆ ಆರಂಭವಾದ ಕೆಸರೆ ಮತ್ತು 1 ತಿಂಗಳ ಹಿಂದೆ ಆರಂಭವಾದ ರಾಯನಕೆರೆ ಕಸ ವಿಲೇವಾರಿ ಘಟಕಗಳಲ್ಲಿ ಹಸಿ ಮತ್ತು ಒಣ ಕಸ ಶೇಖರಣೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರತೀ ದಿನ ಮೈಸೂರು ನಗರದಾದ್ಯಂತ 200 ಟನ್ ಒಣ ಕಸ ಮತ್ತು 300 ಟನ್ ಹಸಿ ಕಸ ಉತ್ಪತ್ತಿಯಾಗುತ್ತಿದ್ದು, ಪೌರಕಾರ್ಮಿಕರು ಮನೆ ಮನೆಯಿಂದ ಸಂಗ್ರಹಿಸುವಾಗಲೇ ಮೂಲದಿಂದ ಕಸ ಬೇರ್ಪಡಿಸಿ ತಂದು ಈ ಎರಡು ಕಡೆ ಸುರಿಯಬೇಕೆಂದು ಅವರು ತಿಳಿಸಿದರು.

ಬಡಾವಣೆಗಳ ಮನೆಯಿಂದ ಬೇರ್ಪಡಿಸಿದ ಕಸ ಸಂಗ್ರಹಿಸಿ ಪ್ರತ್ಯೇಕ ಕಂಟೇನರ್‌ಗಳಲ್ಲಿ ತಂದು ಸುರಿದರೆ, ಹಸಿ ಕಸವನ್ನು ಕಾಂಪೋಸ್ಟ್ ಗೊಬ್ಬರ ಮಾಡಿ ಒಣ ಕಸವನ್ನು ವೈಜ್ಞಾನಿಕವಾಗಿ ನೆಲ ಭರ್ತಿ ಮಾಡಲು ಸಾಧ್ಯವಾಗುತ್ತದೆ ಎಂದು ಸಿಂಧು ತಿಳಿಸಿದ್ದಾರೆ.

ಲೋಕಸಭಾ ಚುನಾವಣೆ: ಪ್ರಧಾನಿ ಮೋದಿ ಪ್ರಚಾರ ಅಂತ್ಯ, 75 ದಿನಗಳಲ್ಲಿ 200ಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ಭಾಗಿ



ನವದೆಹಲಿ, ಮೇ 30– ಶನಿವಾರ ಅಂತಿಮ ಹಂತದ ಲೋಕಸಭಾ ಚುನಾವಣೆ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಪಂಜಾಬ್‌ನ ಹೋಶಿಯಾರ್‌ಪುರದಲ್ಲಿ ಪ್ರಚಾರವನ್ನು ಮುಕ್ತಾಯಗೊಳಿಸಿದರು. ಮೂರನೇ ಬಾರಿಗೆ ಅಧಿಕಾರ ಹಿಡಿಯಲು ಬಿಜೆಪಿ ಕಣ್ಣಿಟ್ಟಿದ್ದು, ಪ್ರಧಾನಿ ಮೋದಿ ದೇಶದ ಉದ್ದಗಲಕ್ಕೂ ತಮ್ಮ ಪಕ್ಷದ ಪರವಾಗಿ ವ್ಯಾಪಕ ಪ್ರಚಾರ ನಡೆಸಿದ್ದಾರೆ.

ಈ ಬಾರಿ ಲೋಕಸಭಾ ಚುನಾವಣೆಗಾಗಿ 75 ದಿನಗಳಲ್ಲಿ ರೋಡ್ ಶೋ, ರ್‍ಯಾಲಿ ಸೇರಿದಂತೆ 200ಕ್ಕೂ ಹೆಚ್ಚು ಚುನಾವಣಾ ಕಾರ್ಯಕ್ರಮಗಳಲ್ಲಿ ಮೋದಿ ಪಾಲ್ಗೊಂಡಿದ್ದರು. ಏಳು ಹಂತದ ಲೋಕಸಭೆ ಚುನಾವಣೆಗೆ ಮೋದಿ ಕರ್ನಾಟಕ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ ಮತ್ತು ಒಡಿಶಾ ಸೇರಿದಂತೆ ಹಲವು ರಾಜ್ಯಗಳಲ್ಲಿ ಪ್ರಚಾರ ನಡೆಸಿದ್ದಾರೆ. ಇದೇ ಮೊದಲ ಬಾರಿ ಮೋದಿ ಅವರು ವಿವಿಧ ಮಾಧ್ಯಮ ಸಂಸ್ಥೆಗಳಿಗೆ ದಾಖಲೆ ಸಂಖ್ಯೆಯ ಸಂದರ್ಶನಗಳನ್ನು ನೀಡಿದ್ದು, ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ಎತ್ತಿ ತೋರಿಸಿದ್ದಾರೆ.

ಪ್ರಧಾನಿಯವರು ಚುನಾವಣಾ ಪ್ರಚಾರದ ಕೊನೆಯಲ್ಲಿ ಆಧ್ಯಾತ್ಮಿಕ ಪ್ರಯಾಣ ಕೈಗೊಳ್ಳುವ ಪ್ರಧಾನಿ ಇಂದಿನಿಂದ ಜೂನ್ 1ರವರೆಗೆ ಕನ್ಯಾಕುಮಾರಿಯಲ್ಲಿ ತಂಗಲಿದ್ದಾರೆ. ಅಲ್ಲಿನ ಸ್ವಾಮಿ ವಿವೇಕಾನಂದ ಮಂಟಪದಲ್ಲಿ ಧ್ಯಾನ ಮಾಡಲು ಪ್ರಧಾನಿ ಯೋಜಿಸಿದ್ದಾರೆ. ಇದು ಭಾರತದ ದಕ್ಷಿಣದ ತುದಿಯಾಗಿದ್ದು, ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿ ಸಂದಿಸುವ ಸ್ಥಳವಾಗಿದೆ. ಹಿಂದೂ ಮಹಾಸಾಗರ, ಬಂಗಾಳ ಕೊಲ್ಲಿ ಮತ್ತು ಅರೇಬಿಯನ್ ಸಮುದ್ರದ ಸಂಗಮ ಸ್ಥಳವಾಗಿದೆ. ಮೋದಿಯವರು ಕನ್ಯಾಕುಮಾರಿಗೆ ಹೋಗುವ ಮೂಲಕ ರಾಷ್ಟ್ರೀಯ ಏಕತೆಯ ಸಂಕೇತವನ್ನು ರವಾನಿಸುತ್ತಿದ್ದಾರೆ. ಇದೇ ರೀತಿಯಲ್ಲಿ 2019ರಲ್ಲಿ ಕೇದಾರನಾಥಕ್ಕೆ ಭೇಟಿ ನೀಡಿದ್ದ ಪ್ರಧಾನಿ ಮೋದಿ 2014ರಲ್ಲಿ ಶಿವಾಜಿಯ ಪ್ರತಾಪಗಢಕ್ಕೆ ಭೇಟಿ ನೀಡಿದ್ದರು. ಪ್ರಧಾನಿಯವರು ಈ ವರ್ಷ ಮಾರ್ಚ್ 16ರಂದು ಕನ್ಯಾಕುಮಾರಿಯಿಂದಲೇ ಚುನಾವಣಾ ಪ್ರಚಾರ ಆರಂಭಿಸಿದ್ದರು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ಹಣ ದುರುಪಯೋಗ

ಸೂಕ್ತ ತನಿಖೆಗೆ ಆಗ್ರಹಿಸಿ ನಾಯಕರ ಹಿತರಕ್ಷಣಾ ವೇದಿಕೆ ಪ್ರತಿಭಟನೆ

ಮೈಸೂರು, ಮೇ 30(ಜಿಎ)– ಶ್ರೀಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಸುಮಾರು 187 ಕೋಟಿ ರೂ. ದುರುಪಯೋಗ ಕುರಿತು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ ನಗರದ ಜಿಲ್ಲಾ ಪಂಚಾಯಿತ್ ಕಚೇರಿ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಿತು.

ವೇದಿಕೆ ಅಧ್ಯಕ್ಷ ಪ್ರಭಾಕರ್ ಹುಣಸೂರು ಮಾತನಾಡಿ, ಇತ್ತೀಚೆಗೆ ಶ್ರೀಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡು ಡೆತ್‌ನೋಟ್‌ನಲ್ಲಿ ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ಸುಮಾರು 187 ಕೋಟಿ ರೂ. ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಡೆತ್‌ನೋಟ್ ಬರೆದಿಟ್ಟಿದ್ದಾರೆ. ಈ ಅವ್ಯವಹಾರ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಕಿಡಿಕಾರಿದರು.

ಪರಿಶಿಷ್ಟರ ಅಭಿವೃದ್ಧಿಗೆ ಕುತ್ತು ತಂದು ಅಧಿಕಾರಿಗಳ ಮೇಲೆ ಒತ್ತಡ ಹೇರಿ ನಿಗಮದಿಂದ ಹಣ ದುರುಪಯೋಗ ಮಾಡಿಕೊಂಡಿದ್ದಾರೆ. ಈ ಕೂಡಲೆ ಅಧಿಕಾರಿಯನ್ನು ಹೆದರಿಸಿ ಅಕ್ರಮ ಮಾಡುವಂತೆ ಮಾಡಿ ಅಧಿಕಾರಿಯ ಆತ್ಮಹತ್ಯೆಗೆ ಕಾರಣರಾದವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿದರು.

ಪಡುವಾರಹಳ್ಳಿ ರಾಮಕೃಷ್ಣ ಮಾತನಾಡಿ, ಸರ್ಕಾರ ಈ ಪ್ರಕರಣವನ್ನು ಸಿಐಡಿಗೆ ನೀಡಲು ಮುಂದಾಗಿದೆ. ಆದರೆ, ಸಿಐಡಿಗೆ ಪ್ರಕರಣ ವಹಿಸಿದರೆ, ಈ ಕೇಸ್ ಸಹ ಹಳ್ಳ ಹಿಡಿಯುವ ಸಾಧ್ಯತೆ ಹೆಚ್ಚಿರುವುದರಿಂದ ಹಾಲಿ ನ್ಯಾಯಾಧೀಶರ ಸಮಿತಿ ರಚಿಸಿ ತನಿಖೆ ನಡೆಸಬೇಕು. ಹಾಗೇ ಸಮಾಜ ಕಲ್ಯಾಣ ಸಚಿವರು ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶ್ರೀಧರ್, ರಾಜು ಮಾರ್ಕೆಟ್, ಕೆರೆಹಳ್ಳಿ ಮಾದೇಶ್, ಹಿನಕಲ್ ಚಂದ್ರು, ವಿಜಯ್ ಕುಮಾರ್, ಸುರೇಶ್ ಕುಮಾರ್‌ಬೀಡು, ರಂಗಸ್ವಾಮಿ, ಪುಟ್ಟರಾಜು, ರವಿ, ಮಂಜುನಾಥ್, ಮೂರ್ತಿ, ಮಹದೇವು, ನಂದೀಶ್ ಪಾಲ್ಗೊಂಡಿದ್ದರು.

ದಿ. ಶ್ರೀನಿವಾಸಪ್ರಸಾದ್‌ಗೆ ನುಡಿನಮನ



ಹಿರಿಯ ಮುತ್ಸದ್ದಿ, ದಿವಂಗತ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಅಶೋಕಪುರಂನ 13ನೇ ಕ್ರಾಸ್‌ನಲ್ಲಿರುವ ದಂಡಿನಮಾರಮ್ಮ ದೇವಸ್ಥಾನದಲ್ಲಿ ನುಡಿನಮನ ಕಾರ್ಯಕ್ರಮ ನಡೆಯಿತು. ವಿ.ಶ್ರೀನಿವಾಸಪ್ರಸಾದ್ ಸಹೋದರ ವಿ.ರಾಮಸ್ವಾಮಿ ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ಮಾಜಿ ಮೇಯರ್ ಪುರುಷೋತ್ತಮ್, ಜೆ ರವಿ, ಪುನೀತ್, ಅಶೋಕ, ಶ್ರೀಧರ್, ನವೀನ್, ಮಂಜು, ನಾಗರಾಜು, ಸತ್ಯ, ಅರ್ಜುನ್ ಇನ್ನಿತರರಿದ್ದರು.

ಮಾಜಿ ಮೇಯರ್ ನಾರಾಯಣರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಲು ಮನವಿ


ನಾರಾಯಣ

ಮೈಸೂರು, ಮೇ 30(ಜಿಎ)–ಸ್ಪರ್ಧಿಸಿ ಗೆಲ್ಲಲು ಸಾಧ್ಯವಾಗದ ಸಮುದಾಯಕ್ಕೆ ಸೇರಿರುವ ಹಾಗೂ ಪೌರಕಾರ್ಮಿಕರ ಧ್ವನಿಯಾಗಲಿರುವ ಮಾಜಿ ಮೇಯರ್ ನಾರಾಯಣ ಅವರನ್ನು ಕಾಂಗ್ರೆಸ್ ಪಕ್ಷ ವಿಧಾನ ಪರಿಷತ್‌ಗೆ ಕಳುಹಿಸಿಕೊಡಬೇಕೆಂದು ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಪರವಾಗಿ ಪಾಲಿಕೆ ಮಾಜಿ ಸದಸ್ಯ ಆರ್.ಶಿವಣ್ಣ ಸಿಎಂ, ಡಿಸಿಎಂ ಹಾಗೂ ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಚ್ಛತೆಗಾಗಿ ಶ್ರಮಿಸುವ ಪೌರಕಾರ್ಮಿಕ ಸಮುದಾಯ ಅತಿ ನಿಕೃಷ್ಟ ಜೀವನ ಸಾಗಿಸುತ್ತಿದೆ. ಇವರ ಪರವಾಗಿ ಹೋರಾಟ ನಡೆಸಿರುವವರು ಅತಿ ಕಡಿಮೆ. ನಾರಾಯಣ್ ಅವರು ಪೌರಕಾರ್ಮಿಕರ ನೇರ ನೇಮಕಾತಿ ಮತ್ತು ಕಾಯಂ ಸೇರಿದಂತೆ ವಿವಿಧ ಕಾರ್ಯಕ್ಕಾಗಿ ಶ್ರಮಿಸಿರುವ ಕಾರಣ ಅವರನ್ನು ನಿಗಮ ಮಂಡಳಿ ನೇಮಕಕ್ಕೆ ಸೀಮಿತಗೊಳಿಸಲಾಗಿದೆ. ಹೀಗಾಗಿ ಇವರನ್ನು ಪರಿಷತ್‌ಗೆ ಕಳುಹಿಸಿಕೊಡುವುದರಿಂದಾಗಿ ಸದನದಲ್ಲಿ ಇವರು ಈ ಸಮುದಾಯದ ಪರ ಧ್ವನಿಯೆತ್ತಲು ನೆರವಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಯತಿರಾಜ್, ಆರ್.ದಾಸ್, ಆರ್ಟಿಸ್ಟ್ ನಾಗರಾಜ್, ಎಂ.ಡಿ. ವೆಂಕಟೇಶ್, ಕೆ. ನಾಗರತ್ನ, ಮಂಜುನಾಥ್, ಎನ್.ಪಿ. ಗುರುದತ್ ಉಪಸ್ಥಿತರಿದ್ದರು.

ಸಿದ್ದಲಿಂಗಪುರದಲ್ಲಿ ವಾಂತಿ–ಭೇದಿ; ಇಬ್ಬರಿಗೆ ಕಾಲರಾ ದೃಢ

ಮೈಸೂರು,ಮೇ 30(ಪಿಎಂ)– ಸಿದ್ದಲಿಂಗಪುರ ಗ್ರಾಮದಲ್ಲಿ ಮೇ 25ರಿಂದ 30ರವರೆಗೆ ಒಟ್ಟು 80 ಮಂದಿಗೆ ವಾಂತಿ–ಭೇದಿ ಕಾಣಿಸಿಕೊಂಡಿದ್ದು, ಈ ಪೈಕಿ ಇಬ್ಬರಿಗೆ ಕಾಲರಾ ಸೋಂಕು ದೃಢಪಟ್ಟಿದೆ.

ಮೇ 25ರಿಂದ ವಾಂತಿ–ಭೇದಿ ಕಾಣಿಸಿಕೊಂಡರೂ ಬುಧವಾರ ಒಬ್ಬರಿಗೆ ಹಾಗೂ ಗುರುವಾರ ಮತ್ತೊಬ್ಬರಿಗೆ ಕಾಲರಾ ದೃಢಪಟ್ಟಿದೆ. ಅದಾಗ್ಯೂ ಕಾಲರಾ ಸೋಂಕಿತರು ಆರೋಗ್ಯ ಸ್ಥಿರವಾಗಿರುವ ಹಿನ್ನೆಲೆಯಲ್ಲಿ ಯಾವುದೇ ತೊಂದರೆ ಇಲ್ಲವೆಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

ಒಟ್ಟು 80 ಪ್ರಕರಣಗಳಲ್ಲಿ 63 ಮಂದಿ ವಯಸ್ಕರಾದರೆ, 17 ಮಂದಿ ಮಕ್ಕಳಾಗಿದ್ದಾರೆ. ವಾಂತಿ–ಭೇದಿಯಿಂದ ಉಂಟಾಗಿದ್ದ ಹಲವರು ಈಗಾಗಲೇ ಗುಣಮುಖರಾಗಿದ್ದಾರೆ. ಕೆಲವರು ಇದೇ ಅನಾರೋಗ್ಯ ಕಾರಣಕ್ಕೆ ಚಿಕಿತ್ಸೆ ಪಡೆಯುತ್ತಿದ್ದು, ಯಾವುದೇ ಗಂಭಿರ ಸಮಸ್ಯೆ ಇಲ್ಲ ಎನ್ನಲಾಗಿದೆ.

ಸಿದ್ದಲಿಂಗಪುರದಲ್ಲಿ ಒಟ್ಟು 927 ಮನೆಗಳಿದ್ದು, 3,865 ಜನಸಂಖ್ಯೆ ಇದೆ. ಐದು ಬೋರ್‌ವೆಲ್, ಎರಡು ಆರ್‌ಓ ಪ್ಲಾಂಟ್ ಹಾಗೂ ಎರಡು ಓವರ್‌ಹೆಡ್ ಟ್ಯಾಂಕ್‌ಗಳು ಗ್ರಾಮದ ನೀರಿನ ಮೂಲಗಳಾಗಿವೆ. ಈ ಪೈಕಿ ಒಂದು ಬೋರ್‌ವೆಲ್ ನೀರು ಕುಡಿಯಲು ಯೋಗ್ಯವಾಗಿಲ್ಲಂದು ಪರೀಕ್ಷೆಯಲ್ಲಿ ದೃಢಪಟ್ಟಿದೆ. ಉಳಿದ ನೀರಿನ ಮೂಲಗಳ ಪರೀಕ್ಷಾ ವರದಿ ಇನ್ನಷ್ಟೇ ಬರಬೇಕಿದೆ ಎಂದು ಮೂಲಗಳು ತಿಳಿಸಿವೆ.

ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಗ್ರಾಮದಲ್ಲಿ ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕುವ ಜೊತೆಗೆ ಜಾಗೃತಿ ಮೂಡಿಸುತ್ತಿದ್ದಾರೆ. ನಾಗನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮತಯಾಚನೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮಾಜಿ ಶಾಸಕ ಹರ್ಷವರ್ಧನ್ ನಂಜನಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಶಾಲಾ–ಕಾಲೇಜುಗಳಿಗೆ ಭೇಟಿ ನೀಡಿ, ಮತಯಾಚಿಸಿದರು. ಈ ವೇಳೆ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ಕ್ಷೇತ್ರದ ಉಸ್ತುವಾರಿ ಎಂಪಿ ಮಂಜುನಾಥ್ ಇದ್ದರು.

ಜೂ.2, ಮೈಸೂರಲ್ಲಿ ಕವಿರತ್ನ ಕಾಳಿದಾಸ, ವೀರಬರ್ಬರಿಕ ಯಕ್ಷಗಾನ ಪ್ರದರ್ಶನ

ಮೈಸೂರು, ಮೇ 30(ಜಿಎ)–ಯಕ್ಷ ರಾಘವ ಜನ್ಸಾಲೆ ಪ್ರತಿಷ್ಠಾನದ ನೇತೃತ್ವದಲ್ಲಿ ಜನಹಿತ ಸೇವಾ ಫೌಂಡೇಷನ್ ಸಹಯೋಗದಲ್ಲಿ ಜೂ.2ರಂದು ಮಧ್ಯಾಹ್ನ 2.30ಕ್ಕೆ ನಗರದ ಕಲಾಮಂದಿರದಲ್ಲಿ ಕವಿರತ್ನ ಕಾಳಿದಾಸ ಮತ್ತು ವೀರ ಬರ್ಬರಿಕ ಎಂಬ ಯಕ್ಷಗಾನ ಪ್ರದರ್ಶನ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಫೌಂಡೇಷನ್‌ನ ಪ್ರತಿನಿಧಿ ಎಲ್.ಎನ್.ಹೆಗಡೆ ಈ ವಿಷಯ ತಿಳಿಸಿ, ಮೈಸೂರಿನಲ್ಲಿ ಈ ಹಿಂದಿನಿಂದಲೂ ಯಕ್ಷಗಾನಕ್ಕೆ ಪ್ರೋತ್ಸಾಹ ದೊರೆತಿದೆ. ಅದೇ ರೀತಿ ಈ ಬಾರಿ ಬಡ ವಿದ್ಯಾರ್ಥಿಗಳು ಹಾಗೂ ಬಡ ಕುಟುಂಬಗಳಿಗೆ ನೆರವಾಗುವ ಉದ್ದೇಶದಿಂದ ಈ ಪ್ರದರ್ಶನ ಆಯೋಜಿಸಲಾಗಿದೆ. ಎರಡೂ ಪ್ರತ್ಯೇಕ ಪ್ರಸಂಗಗಳಾಗಿದ್ದು, ರಾತ್ರಿ ಸುಮಾರು ಒಂಭತ್ತರ ವೇಳೆಗೆ ಮುಗಿಯಲಿವೆ. ಕಲಾ ಪ್ರೋತ್ಸಾಹ ಧನ 300 ರೂ. ಗಳಾಗಿವೆ ಎಂದರು. ಗೋಷ್ಠಿಯಲ್ಲಿ ಲೋಕೇಶ್ ಹೆಗಡೆ, ಚಿದಂಬರ ಹೆಗಡೆ ಇದ್ದರು.

ವಿಷವಿಕ್ಕಿ 7 ಸೀಳುನಾಯಿ ಹತ್ಯೆ ಮಾಡಿದ ವ್ಯಕ್ತಿ ಬಂಧನ



ವಿಷ ಪ್ರಾಶನದಿಂದ ಮೃತಪಟ್ಟ ಸೀಳುನಾಯಿಗಳ ಕಳೇಬರ ಪರಿಶೀಲಿಸುತ್ತಿರುವ ಅರಣ್ಯ ಸಿಬ್ಬಂದಿ.

ಕೊಳ್ಳೇಗಾಲ, ಮೇ 30(ಎಂಟಿವೈ)– ವಿಷವಿಕ್ಕಿ 7 ಸೀಳು ನಾಯಿಗಳನ್ನು ಕೊಂದಿರುವ ಅಮಾನವೀಯ ಘಟನೆ ಕೊಳ್ಳೇಗಾಲದ ಹಿತ್ತಲದೊಡ್ಡಿ ಗ್ರಾಮದ ಬಳಿ ನಡೆದಿದ್ದು, ಕೃತ್ಯ ಎಸಗಿದ ಆರೋಪಿಯನ್ನು ಅರಣ್ಯ ಸಿಬ್ಬಂದಿ ಬಂಧಿಸಿದ್ದಾರೆ.

ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಕೊಳ್ಳೇಗಾಲ ಬಫರ್ ವಲಯ ವ್ಯಾಪ್ತಿಯ ಹಿತ್ತಲದೊಡ್ಡಿ ಗ್ರಾಮದ ರಸ್ತೆ ಸಮೀಪದ ಹೊಲಗಳಲ್ಲಿ ಸೀಳುನಾಯಿ(ಕಾಡುನಾಯಿ)ಗಳ ಕಳೇಬರ ಬಿದ್ದಿರುವುದನ್ನು ಕಂಡ ಗ್ರಾಮಸ್ಥರು ಅರಣ್ಯ ಸಿಬ್ಬಂದಿ ಗಮನಕ್ಕೆ ತಂದಿದ್ದರು. ಸ್ಥಳಕ್ಕೆ ಬಂದು ಪರಿಶೀಲಿಸಿದ ಅರಣ್ಯ ಸಿಬ್ಬಂದಿಗೆ ವಿವಿಧೆಡೆ 7 ಸೀಳುನಾಯಿಗಳ ಕಳೇಬರ ಕಂಡು ಬಂದಿದೆ. ಪಶು ವೈದ್ಯರು ಸೀಳುನಾಯಿಗಳ ಮರಣೋತ್ತರ ಪರೀಕ್ಷೆ ನಡೆಸಿದಾಗ ವಿಷಪ್ರಾಶನದಿಂದ ಸಾವಿಗೀಡಾಗಿರುವುದು ಖಚಿತವಾಗಿದೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ 2(16), 3(32), 2(36), 9, 39 ಹಾಗೂ ಆರ್.ಡಬ್ಲ್ಯೂ 51ರ ನಿಯಮಾನುಸಾರ ಪ್ರಕರಣ ದಾಖಲಿಸಿಕೊಂಡು, ಮಲೆ ಮಹದೇಶ್ವರ ವನ್ಯಧಾಮದ ಡಿಸಿಎಫ್ ಜಿ.ಸಂತೋಷ್‌ಕುಮಾರ್ ಅವರ ಮಾರ್ಗದರ್ಶನದಲ್ಲಿ ತನಿಖೆ ನಡೆಸಿದಾಗ ವಿಷಪ್ರಾಶನ ಮಾಡಿದ್ದ ಹಿತ್ತಲದೊಡ್ಡಿ ಅರೇಪಾಳ್ಯದ ನಿವಾಸಿ ರಾಜಣ್ಣ ಬಿನ್ ನಿಂಗಪ್ಪ(39) ಎಂಬಾತನನ್ನು ಪತ್ತೆ ಮಾಡಿ ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮಲೆ ಮಹದೇಶ್ವರ ವನ್ಯಧಾಮದ ಡಿಸಿಎಫ್ ಜಿ.ಸಂತೋಷ್‌ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಎಸಿಎಫ್ ಬಿ.ಎಸ್.ಶಶಿಧರ್, ಆರ್‌ಎಫ್‌ಓ ಯು.ಜಿ.ಭರತ್, ಡಿಆರ್‌ಎಫ್ ಪಿ.ದೀಪಕ್ ಮಹಾಲಿಂಗಂ, ಸಿಬ್ಬಂದಿಗಳಾದ ನಿಂಗಣ್ಣ, ಭೀಮರಾವ್ ಹುಗಾರ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಕಾಶ್ಮೀರದಲ್ಲಿ ಪ್ರಪಾತಕ್ಕೆ ಉರುಳಿಬಿದ್ದ ಬಸ್, ಭೀಕರ ಅಪಘಾತದಲ್ಲಿ 21 ಮಂದಿ ಸಾವು



ಶ್ರೀನಗರ, ಮೇ 30– ಜಮ್ಮು ಜಿಲ್ಲೆಯಲ್ಲಿ ಗುರುವಾರ ಯಾತ್ರಾರ್ಥಿಗಳನ್ನು ಹೊತ್ತೊಯ್ಯುತ್ತಿದ್ದ ಬಸ್ಸೊಂದು ರಸ್ತೆಯಿಂದ ಸ್ಕಿಡ್ ಆಗಿ ಪ್ರಪಾತಕ್ಕೆ ಉರುಳಿಬಿದ್ದಿದ್ದು, ಭೀಕರ ಅಪಘಾತದಲ್ಲಿ ಕನಿಷ್ಠ 21 ಮಂದಿ ಸಾವನ್ನಪ್ಪಿದ್ದಾರೆ ಮತ್ತು 40 ಮಂದಿ ಗಾಯಗೊಂಡಿದ್ದಾರೆ.

ಪೊಲೀಸರ ಪ್ರಕಾರ, ಜಿಲ್ಲೆಯ ಚೋಕಿ ಚೋರಾ ಬೆಲ್ಟ್‌ನ ತಂಗ್ಲಿ ಮೋರ್‌ನಲ್ಲಿ ಈ ಭೀಕರ ಅಪಘಾತ ಸಂಭವಿಸಿದೆ. ಬಸ್ಸು ಸುಮಾರು 150 ಅಡಿಗಳಷ್ಟು ಆಳದ ಪ್ರಪಾತಕ್ಕೆ ಉರುಳಿ ಬಿದ್ದಿದೆ. ಈ ವಾಹನವು ಉತ್ತರ ಪ್ರದೇಶದ ಹತ್ರಾಸ್‌ನಿಂದ ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯ ಶಿವ ಖೋರಿ ಪ್ರದೇಶಕ್ಕೆ ಯಾತ್ರಾರ್ಥಿಗಳನ್ನು ಹೊತ್ತೊಯ್ಯುತ್ತಿತ್ತು ಎಂದು ಪೊಲೀಸರು ಹೇಳಿದ್ದಾರೆ. ಪೊಲೀಸರು ಮತ್ತು ಸ್ಥಳೀಯರನ್ನೊಳಗೊಂಡ ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಲಾಗಿದೆ. ಗಾಯಾಳುಗಳನ್ನು ಅಖ್ನೂರ್ ಆಸ್ಪತ್ರೆ ಮತ್ತು ಜಮ್ಮುವಿನ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ರವಾನಿಸಲಾಗಿದೆ.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ



ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಆವರಣದಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ, ಎನ್‌ಎಸ್‌ಎಸ್ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ದತ್ತಿ ಬಹುಮಾನ ಪಡೆದ ಎಂಎ, ಇತಿಹಾಸ ವಿಭಾಗದ ವಿದ್ಯಾರ್ಥಿ ಆನಂದ್, 5 ಚಿನ್ನದ ಪದಕ ಪಡೆದ ಬಿಎ, ಭೂಗೋಳಶಾಸ್ತ್ರ ವಿಭಾಗದ ವಿದ್ಯಾರ್ಥಿನಿ ಸುಮಾ, ಎಂಎ ಕನ್ನಡ ವಿಭಾಗದಲ್ಲಿ 2 ಚಿನ್ನದ ಪದಕ ಪಡೆದ ಶಶಿಧರ್ ಅವರನ್ನು ಮೈಸೂರು ವಿವಿ ಹಣಕಾಸು ಅಧಿಕಾರಿ ಕೆ.ಎಸ್.ರೇಖಾ ಸನ್ಮಾನಿಸಿದರು. ಈ ವೇಳೆ ಪ್ರಾಂಶುಪಾಲ ಪ್ರೊ.ಎಸ್.ಮಹದೇವಮೂರ್ತಿ ಹಾಗೂ ಇತರೆ ಬೋಧಕ ವರ್ಗ ಉಪಸ್ಥಿತರಿದ್ದರು.

ಸಮರ್ಥನಂ ವಿಕಲಚೇತನ ಶಾಲಾ ಪ್ರಾರಂಭೋತ್ಸವ



ಮೈಸೂರು, ಮೇ 30– ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಸಮರ್ಥನಂ ವಿಕಲಚೇತನರ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ನಡೆಯಿತು.

ಮಕ್ಕಳನ್ನು ಸ್ವಾಗತಿಸುವ ಸಲುವಾಗಿ ಬ್ಯಾನರ್, ಬಂಟಿಂಗ್ಸ್, ತೋರಣ ಹಾಗೂ ಆಕರ್ಷಕ ಸೂಚನಾ ಫಲಕಗಳನ್ನು ಹಾಕಲಾಗಿತ್ತು. ಹಿರಿಯ ವಿಜ್ಞಾನಿ ಡಾ. ಜಿ.ಎ. ರವಿಶಂಕರ್ ಅವರು ಮಕ್ಕಳಿಗೆ ಗುಲಾಬಿ ಹೂ ಕೊಡುವ ಮೂಲಕ ವಿಕಲಚೇತನ ಮಕ್ಕಳನ್ನು ಸ್ವಾಗತಿಸಿದರು. ನಂತರ ಮಾತನಾಡಿದ ಅವರು, ವಿಶೇಷ ಮಕ್ಕಳು ದೇವರ ಮಕ್ಕಳು. ಅವರಿಗೂ ಎಲ್ಲರಂತೆ ಸಮಾನವಾಗಿ ಬದುಕುವ ಹಕ್ಕಿದೆ ಎಂದರು.

ಮೈಸೂರು ವಿಭಾಗದ ಮುಖ್ಯಸ್ಥ ಶಿವರಾಜು ಮಾತನಾಡಿ, ಸಮರ್ಥನಂ ಸಂಸ್ಥೆಯು ಸ್ಮಾರ್ಟ್‌ಫೋನ್ ಮತ್ತು ಟ್ಯಾಬ್ಲೆಟ್‌ಗಳು ಸೇರಿದಂತೆ ತಂತ್ರಜ್ಞಾನ ಪೂರಕವಾದ ಸಾಮಗ್ರಿಗಳನ್ನು ಶಾಲೆಗಳಿಗೆ ವಿತರಿಸಿದ್ದು, ಮಕ್ಕಳ ಕಲಿಕೆಗೆ ತಂತ್ರಜ್ಞಾನ ಬಳಸುತ್ತಿದೆ ಎಂದು ತಿಳಿಸಿದರು.

ಮುಖ್ಯೋಪಾಧ್ಯಾಯಿನಿ ಭ್ರಮರಾಂಭ, ವಿಶೇಷ ಶಿಕ್ಷಕರಾದ ಪದ್ಮ, ವಿದ್ಯಾವತಿ, ಬೃಂದ ಬಾಯಿ, ಸಿಬ್ಬಂದಿ ಮಂಜುಳ, ಮಹದೇವ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯ ಎಲ್ಲಾ 163 ಸರ್ಕಾರಿ ಆಸ್ಪತ್ರೆಗಳಲ್ಲಿ ಅಗ್ನಿ ಸುರಕ್ಷತಾ ಕ್ರಮ

ಮೈಸೂರು, ಮೇ 30–ಮೈಸೂರು ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಅಧೀನದ ಅಡಿಯಲ್ಲಿ, 163 ಸರ್ಕಾರಿ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಆಸ್ಪತ್ರೆಗಳಲ್ಲಿ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಮೈಸೂರು ಜಿಲ್ಲೆಯ ಆರು ತಾಲೂಕು ಆಸ್ಪತ್ರೆಗಳು, ನಂಜನಗೂಡು, ಹೆಚ್.ಡಿ. ಕೋಟೆ, ಕೆ.ಆರ್‌ನಗರ, ಟಿ.ನರಸೀಪುರ ಆಸ್ಪತ್ರೆ ಹಾಗೂ 9 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಅಗ್ನಿ ಅನಾಹುತಗಳನ್ನು ತಪ್ಪಿಸುವ ಕುರಿತಂತೆ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳಿಂದ ಅಗ್ನಿ ದುರಂತಗಳ ಪರಿಶೀಲನೆ (ಆಡಿಟ್) ಮಾಡಿ ಸೂಕ್ತ ಕ್ರಮ ಕೈಗೊಳ್ಳುವ ಕುರಿತಂತೆ ವರದಿ ಪಡೆಯಲಾಗಿದೆ. 146 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಗ್ನಿ ಅವಘಡಗಳನ್ನು ತಡೆಗಟ್ಟುವ ಕುರಿತಂತೆ, ಆಸ್ಪತ್ರೆಯ ಎಲ್ಲಾ ವಿಭಾಗ ಮತ್ತು ರೋಗಿ ಆರೈಕೆ ವಿಭಾಗಗಳಲ್ಲಿ ಹಾಗೂ ತುರ್ತು ನಿರ್ವಹಣ ಘಟಕಗಳು, ಶಸ್ತ್ರಚಿಕಿತ್ಸಾ ವಿಭಾಗ, ಒಳ ಮತ್ತು ಹೊರರೋಗಿ ವಿಭಾಗಗಳಲ್ಲಿ, ಎ.ಬಿ.ಸಿ ಪ್ರಕಾರದ ಅಗ್ನಿ ನಿರೋಧಕಗಳನ್ನು ಅಳವಡಿಸಲಾಗಿದೆ.

ಜಿಲ್ಲೆಯ ಎಲ್ಲಾ ಖಾಸಗಿ ಆಸ್ಪತ್ರೆಗಳ ಅಗ್ನಿ ಸುರಕ್ಷತಾ ಕ್ರಮಗಳ ಕುರಿತಂತೆ, ಕೆಪಿಎಂಇ ನಿಯಮಗಳ ಅಡಿಯಲ್ಲಿ ಸಂಸ್ಥೆಗಳು ಪರವಾನಗಿ ಪತ್ರ ಪಡೆಯುವ ಮುನ್ನ ಮತ್ತು ಪರವಾನಗಿ ನವೀಕರಿಸುವ ಸಮಯದಲ್ಲೇ, ಅಗ್ನಿ ಸುರಕ್ಷತ ಕ್ರಮಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಕೆಪಿಎಂಇ ತಂಡವು ಮೇಲ್ವಿಚಾರಣೆ ನಡೆಸಿ ಖಾತರಿಪಡಿಸಿಕೊಂಡ ನಂತರವೇ ಪರವಾನಗಿ ನೀಡಲಾಗುತ್ತದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಮಾರಣ್ಣ ಫ್ಯಾಮಿಲಿ ರೆಸಾರ್ಟ್‌ನಲ್ಲಿ ರಿಲ್ಯಾಕ್ಸ್...!



ಬೆಂಗಳೂರು, ಮೇ 30– ಲೋಕಸಭಾ ಚುನಾವಣೆ ಹಾಗೂ ವಿಧಾನ ಪರಿಷತ್ ಚುನಾವಣಾ ಬಿಡುವಿಲ್ಲದ ಪ್ರಚಾರದಿಂದ ಬಳಲಿದ್ದ ಹಾಗೂ ಪ್ರಜ್ವಲ್ ರೇವಣ್ಣ ಪ್ರಕರಣದಿಂದಾಗಿ ಮಾನಸಿಕ ಒತ್ತಡಕ್ಕೆ ಸಿಲುಕಿದ್ದ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಇದೀಗ ಮೈಂಡ್ ರಿಲೀಫ್‌ಗಾಗಿ ಕುಟುಂಬ ಸಮೇತ ರೆಸಾರ್ಟ್‌ಗೆ ತೆರಳಿದ್ದಾರೆ.

ಇತ್ತೀಚೆಗಷ್ಟೇ ಹೃದಯದ ಚಿಕಿತ್ಸೆಗೆ ಒಳಗಾಗಿ ಚೇತರಿಸಿಕೊಂಡು ಕಳೆದ ಎರಡು ತಿಂಗಳಿನಿಂದ ಲೋಕಸಭಾ ಚುನಾವಣಾ ಪ್ರಚಾರ ಕಾರ್ಯದಲ್ಲಿದ್ದ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಸಾಕಷ್ಟು ಆಯಾಸಗೊಂಡಿದ್ದರು. ಹೀಗಿದ್ದರೂ ವಿಶ್ರಾಂತಿಗೆ ಸಮಯ ಸಿಗದಂತೆ ಪರಿಷತ್ ಚುನಾವಣೆ ಎದುರಾಯಿತು. ಶಿಕ್ಷಕರ ಮತ್ತು ಪದವೀಧರ ಕ್ಷೇತ್ರಗಳ ಚುನಾವಣಾ ಪ್ರಚಾರದ ಮೂಲಕ ಮೈತ್ರಿ ಧರ್ಮ ಪಾಲನೆ ಮಾಡಬೇಕಾದ ಅನಿವಾರ್ಯತೆಯಿಂದ ವಿಶ್ರಾಂತಿ ಬದಲು ಪ್ರಚಾರ ಕಾರ್ಯದಲ್ಲಿ ಭಾಗಿಯಾಗಿದ್ದರು. ಅದರ ನಡುವೆ ಪ್ರಜ್ವಲ್ ರೇವಣ್ಣ ಪ್ರಕರಣದಿಂದಾಗಿ ಮಾನಸಿಕ ಒತ್ತಡಕ್ಕೂ ಒಳಗಾಗಿದ್ದರು. ಆದರೆ, ಪ್ರಚಾರ ಕಾರ್ಯ ಮುಗಿಯುತ್ತಿದ್ದಂತೆ ಹೆಚ್.ಡಿ.ಕುಮಾರಸ್ವಾಮಿ ವಿಶ್ರಾಂತಿ ಮೊರೆ ಹೋಗಿದ್ದಾರೆ.

ಕುಟುಂಬದ ಸಮೇತವಾಗಿ ರಾಜ್ಯದ ರೆಸಾರ್ಟ್ ಒಂದಕ್ಕೆ ತೆರಳಿರುವ ಅವರು ವಿಶ್ರಾಂತಿ ಪಡೆಯುತ್ತಿದ್ದಾರೆ. ಪತ್ನಿ ಅನಿತಾ ಕುಮಾರಸ್ವಾಮಿ, ಪುತ್ರ ನಿಖಿಲ್ ಕುಮಾರಸ್ವಾಮಿ, ಸೊಸೆ ರೇವತಿ ಹಾಗೂ ಮೊಮ್ಮಗ ಜಿ.ಅವ್ಯಾನ್ ದೇವ್ ಜತೆ ರೆಸಾರ್ಟ್‌ನ ಪ್ರಕೃತಿ ಮಡಿಲಿನಲ್ಲಿ ಕಾಲ ಕಳೆಯುತ್ತಿದ್ದಾರೆ. ಬೋಟ್‌ನಲ್ಲಿ ವಿಹಾರ ಮಾಡಿದ ನಂತರ, ರೆಸಾರ್ಟ್‌ನ ಜೀಪ್‌ನಲ್ಲಿ ಸಫಾರಿಗೆ ತೆರಳಿ ಕಾಡು ಪ್ರಾಣಿಗಳ ವೀಕ್ಷಣೆ ಮಾಡಿ ಸಂತೋಷ ದಿಂದ ಕಾಲ ಕಳೆಯುತ್ತಿದ್ದಾರೆ. ಈ ಸಂದರ್ಭ ದಲ್ಲಿ ಎದುರಾದ ಸ್ಥಳೀಯರ ಯೋಗಕ್ಷೇಮವನ್ನು ಕುಮಾರಸ್ವಾಮಿ ವಿಚಾರಿಸಿದರು.

ಬಸ್ ನಿಲ್ದಾಣದ ಬಳಿ ಹರಿಯುತ್ತಿರುವ ಒಳಚರಂಡಿ ನೀರು

ಪ್ರಯಾಣಿಕರು ಮೂಗು ಮುಚ್ಚಿಕೊಂಡು ನಿಲ್ಲುವ ಪರಿಸ್ಥಿತಿ





ಮೈಸೂರು, ಮೇ30(ಬಿಎಲ್‌ಯು)– ನಗರದ ಕೆಆರ್‌ಎಸ್ ರಸ್ತೆಯಲ್ಲಿನ ಬಸ್ ತಂಗುದಾಣದ ಬಳಿ ಒಳಚರಂಡಿ ನೀರು ಹರಿಯುತ್ತಿದ್ದು, ಈ ದುರ್ವಾಸನೆಯತ್ತ ನಗರಪಾಲಿಕೆಯವರು ಗಮನ ಹರಿಸದಿರುವ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ದಾಸಪ್ಪ ಸರ್ಕಲ್‌ನ ಕೆಆರ್ ಎಸ್ ರಸ್ತೆಯಲ್ಲಿ ಒಳಚರಂಡಿ ನೀರನ್ನು ನೇರವಾಗಿ ರಸ್ತೆಗೆ ಬಿಡಲಾಗಿದೆ. ಅದೂ ಪ್ರಯಾಣಿಕರು ಬಸ್‌ಗಾಗಿ ಕಾಯುವ ಸ್ಥಳದಲ್ಲೇ ಬಿಡಲಾಗಿದೆ. ಒಳಚರಂಡಿ ನೀರು ಮುಂದೆ ಹೋಗಲು ಜಾಗವಿಲ್ಲದ ದುರ್ವಾಸನೆ ಬೀರುತ್ತಿದೆ. ಈ ಸ್ಥಳ ಸೊಳ್ಳೆ ಹಾಗೂ ನೊಣಗಳ ತಾಣವಾಗಿದೆ. ಬಸ್‌ಗಾಗಿ ಕಾಯುವ ಪ್ರಯಾಣಿಕರು ಅಲ್ಲೇ ಮೂಗು ಮುಚ್ಚಿಕೊಂಡು ನಿಲ್ಲುವ ಪರಿಸ್ಥಿತಿ ಬಂದಿದೆ. ಬಹಳಷ್ಟು ದಿನಗಳಿಂದ ಇದೇ ಪರಿಸ್ಥಿತಿ ಇದ್ದರೂ ನಗರಪಾಲಿಕೆಯವರು ಇತ್ತ ಗಮನ ಹರಿಸಿಲ್ಲ. ಈ ಬಗ್ಗೆ ಪ್ರಯಾಣಿಕರು ಮೈಸೂರು ಮಹಾನಗರ ಪಾಲಿಕೆಯ ಕಂಟ್ರೋಲ್ ರೂಂಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಸ್ವಚ್ಛ ಸರ್ವೇಕ್ಷಣೆಯ ಸರ್ವೆ ಆರಂಭದಲ್ಲೇ ಮೈಸೂರು ಅಗ್ರಸ್ಥಾನ ಪಡೆದಿತ್ತು. ತರುವಾಯ ಇಂತಹ ಅಶುಚಿತ್ವದ ವಾತಾವರಣದ ಕಾರಣ ಮೈಸೂರು ಸ್ವಚ್ಛ ನಗರಿ ಸರ್ವೇಕ್ಷಣೆಯಲ್ಲಿ ಇಳಿಮುಖವಾಗಿದೆ.

ಮೈಸೂರು ಮಿತ್ರ

ಶುಕ್ರವಾರ 31 ಮೇ 2024

ನೂತನ ನ್ಯಾಯಾಧೀಶರಿಗೆ ಸನ್ಮಾನ



ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾಗಿ ಬಂದಿರುವ ನ್ಯಾಯಾಧೀಶರಾದ ರವೀಂದ್ರ ಹೆಗಡೆ ಅವರನ್ನು ಮೈಸೂರು ನಗರ ವಕೀಲರ ವಿವಿಧೋದ್ದೇಶ ಸಹಕಾರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಚಿತ್ರದಲ್ಲಿ ಸಂಘದ ಅಧ್ಯಕ್ಷ ಬಿ.ಎಸ್.ಚಂದ್ರಶೇಖರ, ಉಪಾಧ್ಯಕ್ಷ ಚಿನ್ನನಾಯಕ, ನಿರ್ದೇಶಕರಾದ ಬಸವರಾಜು, ಗಂಗರತ್ನ, ಚಿನ್ನಸ್ವಾಮಿ ಮತ್ತಿತರರಿದ್ದರು.

ಡಾ.ಯತೀಂದ್ರರ ಎಂಎಲ್‌ಸಿ ಮಾಡಿ

ಮೈಸೂರು, ಮೇ 30– ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರುಣ ಕ್ಷೇತ್ರವನ್ನು ತ್ಯಾಗ ಮಾಡಿದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಬೇಕೆಂದು ಕಾಂಗ್ರೆಸ್ ಮುಖಂಡ ಕೃಷ್ಣಕುಮಾರ್ ಸಾಗರ್ ಆಗ್ರಹಿಸಿದರು.



ಕೃಷ್ಣಕುಮಾರ್ ಸಾಗರ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಜೂನ್‌ನಲ್ಲಿ ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಕೊಟ್ಟ ಮಾತಿನಂತೆ ಎಂಎಲ್‌ಸಿ ಮಾಡಬೇಕು. ಏಕೆಂದರೆ ಡಾ.ಯತೀಂದ್ರ ಅವರು ವರುಣ ಕ್ಷೇತ್ರ ತ್ಯಾಗ ಮಾಡಿರುವುದರ ಜೊತೆಗೆ ಕಳೆದ ವಿಧಾನಸಭಾ ಚುನಾವಣೆ, ಲೋಕಸಭಾ ಚುನಾವಣೆಗಳಲ್ಲಿಯೂ ಸಕ್ರಿಯರಾಗಿ ರಾಜ್ಯಾದ್ಯಂತ ಸಂಚರಿಸಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ಮಾಡಿ ಸರ್ಕಾರ ಅಧಿಕಾರಕ್ಕೆ ಬರಲು ಕಾರಣರಾಗಿದ್ದಾರೆ. ಅದಲ್ಲದೇ ಈಗಲೂ ವರುಣ ಕ್ಷೇತ್ರದ ಜೊತೆಗೆ ಜಿಲ್ಲೆಯ ಜನರ ಕಷ್ಟಸುಖಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ರಾಜ್ಯಾಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೈಕಮಾಂಡ್ ಮೇಲೆ ಒತ್ತಡ ತಂದು ಡಾ.ಯತೀಂದ್ರರನ್ನು ಎಂಎಲ್‌ಸಿ ಮಾಡುವಂತೆ ಮನವಿ ಮಾಡಿದ್ದಾರೆ.

ಮೈಸೂರಲ್ಲಿ ಯುವಕನ ಹತ್ಯೆ

ಮೈಸೂರು, ಮೇ 30–ಮೈಸೂರಿನ ಶಾಂತಿನಗರದಲ್ಲಿ ಗುರುವಾರ ರಾತ್ರಿ ಯುವಕನನ್ನು ಹತ್ಯೆ ಮಾಡಲಾಗಿದೆ. ರಾಜೀವ್‌ನಗರದ 20 ವರ್ಷದ ಯುವಕನನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಲಾಗಿದೆ. ಇರಿತದಿಂದ ತೀವ್ರವಾಗಿ ಗಾಯಗೊಂಡಿದ್ದ ಈತನನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾನೆ ಎಂದು ತಿಳಿದು ಬಂದಿದೆ. ರಾತ್ರಿ 11 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ಹತ್ಯೆ ಮಾಡಿದವರ ಬಗ್ಗೆ ಇನ್ನೂ ಮಾಹಿತಿ ಲಭ್ಯವಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಅಕ್ರಮವಾಗಿ ಸಾಗಿಸುತ್ತಿದ್ದ 30 ಜಾನುವಾರು ರಕ್ಷಣೆ; ವಾಹನವೂ ವಶಕ್ಕೆ

ಮೇಟಗಳ್ಳಿ ಪೊಲೀಸರ ಕಾರ್ಯಾಚರಣೆ

ಮೈಸೂರು, ಮೇ 30–ಅಕ್ರಮವಾಗಿ ಸಾಗಿಸುತ್ತಿದ್ದ ಸುಮಾರು 30 ಜಾನುವಾರುಗಳನ್ನು ರಕ್ಷಿಸಿರುವ ಮೇಟಗಳ್ಳಿ ಠಾಣೆ ಪೊಲೀಸರು ಐಷರ್ ವಾಹನವನ್ನು ವಶಪಡಿಸಿಕೊಂಡು ಅದರ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮೇಟಗಳ್ಳಿ ಠಾಣೆಯ ಮುಖ್ಯಪೇದೆ ಶಿವಲಿಂಗೇಗೌಡರು ಮೇ 29ರಂದು ಮಧ್ಯಾಹ್ನ ಗರುಡ ವಾಹನದಲ್ಲಿ ಗಸ್ತು ತಿರುಗುತ್ತಿದ್ದ ವೇಳೆ 'ಕೆಆರ್‌ಎಸ್ ರಸ್ತೆಯ ಸುನಂದ ಚೆಕ್‌ಪೋಸ್ಟ್ ಬಳಿಯಿಂದ ಐಷರ್ ವಾಹನ ಸಂಖ್ಯೆ ಕೆ.ಎ.06 ಎಎ 7227 ಬರುತ್ತಿದ್ದು, ಆ ವಾಹನವನ್ನು ನಿಲ್ಲಿಸಿ ತಪಾಸಣೆ ಮಾಡಿ' ಎಂದು ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಕಂಟ್ರೋಲ್ ರೂಂನಿಂದ ವೈರ್‌ಲೆಸ್ ಸಂದೇಶ ಬಂದ ಹಿನ್ನೆಲೆಯಲ್ಲಿ ಅವರು ಕೆಆರ್‌ಎಸ್ ರಸ್ತೆಯಲ್ಲಿರುವ ರೈಲ್ವೆ ಟ್ರ್ಯಾಕ್ ಮತ್ತು ರಾಯಲ್ ಇನ್ ಮಧ್ಯೆ ಗರುಡ ವಾಹನವನ್ನು ನಿಲ್ಲಿಸಿಕೊಂಡು ವಾಹನ ತಪಾಸಣೆಯಲ್ಲಿ ತೊಡಗಿದ್ದ ವೇಳೆ ಸದರಿ ಐಷರ್ ವಾಹನ ಬಂದಿದ್ದು, ಅದರಲ್ಲಿದ್ದ ಚಾಲಕ ಹಾಗೂ ಮತ್ತೊಬ್ಬ ವಾಹನವನ್ನು ನಿಲ್ಲಿಸಿ ಇಳಿದು ಪರಾರಿಯಾಗಿದ್ದಾರೆ. ಆ್ಯಪ್ ಮೂಲಕ ವಾಹನದ ಸಂಖ್ಯೆ ಆಧರಿಸಿ ಪರಿಶೀಲಿಸಲಾಗಿ ಈ ವಾಹನವು ಮೈಸೂರಿನ ಮಹಮ್ಮದ್ ಸೇಠ್ ಬ್ಲಾಕ್ ನಿವಾಸಿ ಸುಹೇಲ್ ಪಾಷ ಎಂಬಾತನಿಗೆ ಸೇರಿದ್ದು ಎಂಬುದು ಪತ್ತೆಯಾಗಿದೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮೂರನೇ ಪುಟದಿಂದ

ಇಂದಿನಿಂದ ಶಾಲೆ ಆರಂಭ

ಪಾಯಸ ಸಹಿತ ಬಿಸಿಯೂಟ ಆರಂಭಿಸಲಾಗುತ್ತಿದೆ. ಕಳೆದ ಸಾಲಿನಲ್ಲಿ ಅರ್ಧಕ್ಕೆ ಶಾಲೆಯಿಂದ ದೂರ ಉಳಿದ ಮಕ್ಕಳು, ಶಾಲೆಗೆ ಬಾರದ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಗ್ರಾಮಗಳಲ್ಲಿ ಜಾಥಾ ನಡೆಸಿ ಜಾಗೃತಿ ಮೂಡಿಸಲು ಸೂಚನೆ ನೀಡಲಾಗಿದೆ ಎಂದು ಮೈಸೂರು ಡಿಡಿಪಿಐ ಹೆಚ್.ಕೆ.ಪಾಂಡು ತಿಳಿಸಿದ್ದಾರೆ.

ಶೀಘ್ರವೇ ಸಮವಸ್ತ್ರ: ಈಗಾಗಲೇ ಶೇ.73ರಷ್ಟು ಪಠ್ಯ ಪುಸ್ತಕಗಳನ್ನು ಶಾಲೆಗಳಿಗೆ ಪೂರೈಕೆ ಮಾಡಲಾಗಿದ್ದು, ಮೊದಲ ದಿನವೇ ಮಕ್ಕಳಿಗೆ ವಿತರಿಸಲಾಗುತ್ತದೆ. ಸಮವಸ್ತ್ರ ಹಾಗೂ ಬಾಕಿ ಪಠ್ಯ ಪುಸ್ತಕಗಳು ಶೀಘ್ರವೇ ಬರಲಿವೆ. ಶೂ ಖರೀದಿಸಿ, ಮಕ್ಕಳಿಗೆ ನೀಡಲು ಮುಖ್ಯಶಿಕ್ಷಕರ ಖಾತೆಗೆ ಹಣ ಸಂದಾಯ ಆಗಿದೆ. ಒಟ್ಟಾರೆ ಜೂ.15ರೊಳಗೆ ಎಲ್ಲಾ ಮಕ್ಕಳಿಗೂ ಪಠ್ಯಪುಸ್ತಕ, ಸಮವಸ್ತ್ರ, ಶೂ ನೀಡಲಾಗುವುದು ಎಂದರು.

ನಿಯೋಜನೆಗೆ ಸೂಚಿಸಲಾಗಿದೆ...

ಮೈಸೂರು ಜಿಲ್ಲೆಗೆ 259 ಪ್ರೌಢಶಾಲೆ ಹಾಗೂ 1142 ಪ್ರಾಥಮಿಕ ಶಾಲೆ ಅತಿಥಿ ಶಿಕ್ಷಕರ ಅಗತ್ಯವಿದೆ ಎಂದು ಈಗಾಗಲೇ ಶಿಕ್ಷಣ ಇಲಾಖೆ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಶುಕ್ರವಾರ ಈ ಸಂಬಂಧ ಆದೇಶ ಆಗಬಹುದು. ಅಲ್ಲದೆ ಸಂದರ್ಶನ ಮಾಡಿ, ಸೂಕ್ತ ಅಭ್ಯರ್ಥಿಗಳನ್ನು ಅತಿಥಿ ಶಿಕ್ಷಕರಾಗಿ ನಿಯೋಜಿಸಿಕೊಳ್ಳುವಂತೆ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಸೂಚನೆ ನೀಡಲಾಗಿದೆ. –ಹೆಚ್.ಕೆ.ಪಾಂಡು, ಡಿಡಿಪಿಐ

ಪ್ರಜ್ವಲ್ ರೇವಣ್ಣ SIT ವಶಕ್ಕೆ

ಪ್ರತಿಗಳನ್ನು ಇಮಿಗ್ರೇಷನ್ ಅಧಿಕಾರಿ ಗಳಿಗೆ ಎಸ್‌ಐಟಿ ಅಧಿಕಾರಿಗಳು ನೀಡಿದ್ದರು. ರಾಜ್ಯದಲ್ಲಿ ಮೊದಲ ಹಂತದಲ್ಲಿ ನಡೆದ ಹಾಸನ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯೂ ಆಗಿದ್ದ ಪ್ರಜ್ವಲ್ ಮತದಾನ ಮುಗಿಸಿಕೊಂಡು ಅಂದು ರಾತ್ರಿಯೇ ವಿದೇಶಕ್ಕೆ ತೆರಳಿದ್ದರು. ಅವರು ವಿದೇಶಕ್ಕೆ ತೆರಳಿದ ಎರಡು ದಿನಗಳ ನಂತರ ಲೈಂಗಿಕ ದೌರ್ಜನ್ಯ, ಅಪಹರಣ, ಬೆದರಿಕೆ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಎಸ್‌ಐಟಿ ರಚನೆ ಮಾಡಲಾಯಿತು. ಎಸ್‌ಐಟಿ ನೋಟಿಸ್ ಜಾರಿಗೊಳಿಸಿದ ನಂತರ ತಮ್ಮ ವಕೀಲರ ಮೂಲಕ ಪ್ರಜ್ವಲ್ 7 ದಿನ ಕಾಲಾವಕಾಶ ಕೇಳಿದ್ದರಾದರೂ ಅದರ ಮುಂದೆ ಅವರು ಹಾಜರಾಗಲಿಲ್ಲ. ಹಾಗಾಗಿ ಪ್ರಜ್ವಲ್ ವಿರುದ್ದ ಬ್ಲೂ ಕಾರ್ನರ್ ನೋಟೀಸ್ ಜಾರಿಗೊಳಿಸಲಾಯಿತು. ಅಲ್ಲದೇ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಈ ಹಿನ್ನಲೆಯಲ್ಲಿ ವಿದೇಶಾಂಗ ಸಚಿವಾಲಯವು ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸುವ ಕುರಿತು ಪ್ರಜ್ವಲ್‌ಗೆ ನೋಟೀಸ್ ಜಾರಿ ಮಾಡಿತ್ತು. ತಾತ, ದೇವೇಗೌಡರು ಮಾಡಿದ ಮನವಿ ಹಾಗೂ ವಕೀಲರ ಸಲಹೆಯಂತೆ ಪ್ರಜ್ವಲ್ ರಾಷ್ಟ್ರಕ್ಕೆ ಹಿಂತಿರುಗುವ ಹಾಗೂ ಎಸ್‌ಐಟಿ ಮುಂದೆ ಹಾಜರಾಗುವ ತೀರ್ಮಾನವನ್ನು ವಿಡಿಯೊ ಸಂದೇಶದ ಮೂಲಕ ತಿಳಿಸಿದರು. ರಾಷ್ಟ್ರಕ್ಕೆ ಹಿಂತಿರುಗುತ್ತಿದ್ದಂತೆ ತಮ್ಮನ್ನು ಎಸ್‌ಐಟಿ ಬಂಧಿಸಬಹುದೆಂಬ ಆಲೋಚನೆಯಿಂದ ಪ್ರಜ್ವಲ್, ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ತಮ್ಮ ವಿರುದ್ಧದ ಮೂರು ಪ್ರಕರಣಗಳಿಗೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು. ಪ್ರಜ್ವಲ್ ಪರ ವಕೀಲರು ಬುಧವಾರವೇ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳುವಂತೆ ಮನವಿ ಮಾಡಿದರೂ ನ್ಯಾಯಾಲಯ ಮೇ 31ಕ್ಕೆ ವಿಚಾರಣೆ ಕೈಗೆತ್ತಿ ಕೊಳ್ಳುವುದಾಗಿ ತಿಳಿಸಿತ್ತು. ಪ್ರಜ್ವಲ್ ನಗರಕ್ಕೆ ಹಿಂತಿರುಗುವುದು ಖಚಿತವಾಗುತ್ತಿದ್ದಂತೆ ಎಸ್‌ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್, ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ಸಮಾಲೋಚನಾ ಸಭೆ ಮುಗಿಯುತ್ತಿದ್ದಂತೆ ಹಿರಿಯ ಅಧಿಕಾರಿಗಳ ತಂಡ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಬೀಡುಬಿಟ್ಟು, ವಿಮಾನ ನಿಲ್ದಾಣದ ಅಧಿಕಾರಿಗಳು, ಭದ್ರತಾ ಹಾಗೂ ವಲಸೆ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದರು.

ಸ್ವಸ್ಥ ಸಮಾಜ ನಿರ್ಮಾಣಕ್ಕೆ ಭಗವದ್ಗೀತೆ ಶ್ರೀಕೃಷ್ಣ ನೀಡಿದ ಸಿದ್ಧಾಂತ

ಗೀತಾ ಮನೀಷಿ ಮಹಾಮಂಡಲೇಶ್ವರ ಸ್ವಾಮಿ ಜ್ಞಾನಾನಂದ ಜೀ ಅಭಿಮತ

ಮೈಸೂರು, ಮೇ 30(ಎಂಕೆ)– ಸ್ವಸ್ಥ ಸಮಾಜವನ್ನು ನಿರ್ಮಾಣಕ್ಕೆ ಭಗವಾನ್ ಶ್ರೀಕೃಷ್ಣರೇ ನೀಡಿರುವ ಒಂದು ಸಿದ್ಧಾಂತ ಅಥವಾ ಪರಿಹಾರಗಳ ಗಂಟು ಭಗವದ್ಗೀತೆಯಾಗಿದೆ ಎಂದು ಗೀತಾ ಮನೀಷಿ ಮಹಾಮಂಡಲೇಶ್ವರ ಸ್ವಾಮಿ ಜ್ಞಾನಾನಂದ ಜೀ ತಿಳಿಸಿದರು.

ಮೈಸೂರಿನ ಪುರಭ'ವನ'ದಲ್ಲಿ ಪುಷ್ಪಾಂಜಲಿ ಮತ್ತು ಅಗರ್ವಾಲ್ ಸಮಾಜದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ದಿವ್ಯ ಗೀತಾ ಸತ್ಸಂಗ ಪ್ರವಚನ' ನೀಡಿದ ಅವರು, ಭಗವದ್ಗೀತೆ ಒಂದು ಧರ್ಮ, ಜಾತಿ ಹಾಗೂ ಉಪಾಸನ ಪದ್ಧತಿಯನ್ನು ಮೀರಿ ಚರಾಚರ ಸೃಷ್ಟಿಯ ಬಗ್ಗೆ ಪ್ರಪಂಚದ ಎಲ್ಲಾ ಜೀವಿಗಳ ಬಗ್ಗೆ ಚಿಂತನೆ ಮಾಡಿರುವ ಒಂದು ಸಿದ್ಧಾಂತ ಅಥವಾ ಪರಿಹಾರಗಳ ಗಂಟಾಗಿದೆ ಎಂದರು.

ಭಗವದ್ಗೀತೆಯಲ್ಲಿ ವ್ಯಕ್ತಿ, ತನ್ನಲ್ಲಿರುವ ದೋಷಗಳನ್ನು ಮೀರಿ, ತನ್ನಲ್ಲಿ ಉತ್ತಮ ಗುಣಗಳಿಂದಾಗಿ ಸಮಾಜದಲ್ಲಿ ತನ್ನನ್ನು ಗುರ್ತಿಸಿಕೊಳ್ಳುವ ಪ್ರಯತ್ನ ಮಾಡುವ ಬಗ್ಗೆ ಶ್ರೀ ಕೃಷ್ಣರು ತಿಳಿಸಿದ್ದಾರೆ. ಅರ್ಜುನ ಕೃಷ್ಣನನ್ನು ಕೇಳಿರುವ ಅನೇಕ ಪ್ರಶ್ನೆಗಳು ಮನುಷ್ಯನ ವಿಕಾಸದ ಹಾದಿಯನ್ನು ಹುಡುಕುವ ಒಂದು ವೈಜ್ಞಾನಿಕ ಪ್ರಯೋಗವೇ ಆಗಿದೆ. ವ್ಯಾಪಾರಿ, ವಿಜ್ಞಾನಿ, ವೈದ್ಯ, ಇಂಜಿನಿಯರ್, ರಾಜಕಾರಣಿ ಸೇರಿದಂತೆ ಸಮಾಜದ ಎಲ್ಲಾ ವರ್ಗದ ಜನರಿಗೆ ನಿರಂತರ ಮಾರ್ಗದರ್ಶನ ನೀಡುತ್ತಿರುವ ಒಂದು ಮನೋವೈಜ್ಞಾನಿಕ ಸಿದ್ಧಾಂತವೂ ಆಗಿದೆ ಎಂದು ಹೇಳಿದರು.



ಮೈಸೂರಿನ ಪುರಭವನದಲ್ಲಿ 'ದಿವ್ಯ ಗೀತಾ ಸತ್ಸಂಗ ಪ್ರವಚನ' ನೀಡಿದ ಮಹಾಮಂಡಲೇಶ್ವರ ಸ್ವಾಮಿ ಜ್ಞಾನಾನಂದ ಜೀ ಅವರನ್ನು ವಿವಿಧ ಸಮಾಜಗಳಿಂದ ಸನ್ಮಾನಿಸಲಾಯಿತು. ಚಿಂತಾಮಣಿ ಮಾತೃಪುರಿ ಆಶ್ರಮದ ಚೈತನ್ಯಮಯಿ ದೇವಿ, ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್, ಅಖಿಲ ಭಾರತ ಅಗರ್‌ವಾಲ್ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಪ್ರದೀಪ್ ಮಿತ್ತಲ್, ಡಾ.ಮಿತ್ತಲ್ ಮತ್ತಿತರರಿದ್ದರು.

ವ್ಯಕ್ತಿ ತನಗೇನು ದೊರೆಯಿತು ಎಂದು ಯೋಚನೆ ಮಾಡುವ ಬದಲಾಗಿ, ನಾನು ಸಮಾಜಕ್ಕೆ, ದೇಶಕ್ಕೆ ಏನೂ ಕೊಡಬಲ್ಲೆ ಎಂಬ ಬಗ್ಗೆ ನಿರಂತರವಾಗಿ ಚಿಂತಿಸುವ ಒಂದು ಪ್ರೇರಣೆ ಭಗವದ್ಗೀತೆಯಲ್ಲಿನ ಭಗವಂತನ ಮಾತುಗಳಿಂದ ನಿರಂತರವಾಗಿ ದೊರಕುತ್ತದೆ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲಾ ಸ್ವಾತಂತ್ರ್ಯದ ಹೋರಾಟಗಾರರಿಗೂ ಭಗವದ್ಗೀತೆಯೇ ಪ್ರೇರಣೆ. ತಿಲಕರು ಗೀತಾ ರಹಸ್ಯ ಎಂಬ ಪುಸ್ತಕವನ್ನು ಬರೆದರೆ, ಲಾಲಾ ಲಜಪತರಾಯರು ಸಹ ಭಗವದ್ಗೀತೆಯ ವಿಶ್ಲೇಷಣೆಯುಳ್ಳ ಒಂದು ಪುಸ್ತಕವನ್ನು ಬರೆದಿದ್ದಾರೆ. ಉಳಿದಂತೆ ಭಗತ್‌ಸಿಂಗ್, ರಾಮ್ ಪ್ರಸಾದ್ ಬಿಸ್ಮಿಲ್ ಮುಂದಾದ ಅನೇಕ ಹೋರಾಟಗಾರರು ತಮ್ಮ ಕೈಯಲ್ಲಿ ಭಗವದ್ಗೀತೆಯನ್ನು ಹಿಡಿದುಕೊಂಡೇ ನೇಣುಗಂಬವನ್ನೇರಿದ್ದನ್ನು ನಾವು ಕಂಡಿದ್ದೇವೆ ಎಂದರು.

ಇಡೀ ಪ್ರಪಂಚದಲ್ಲಿ ಎಲ್ಲಾ ಕಡೇ ಯುದ್ಧದ ವಾತಾವರಣ ನೋಡುತ್ತಿರುವ ನಾವುಗಳು ಭಗವದ್ಗೀತೆಯಿಂದ ಪರಿಹಾರವನ್ನು ಕಂಡು ಕೊಳ್ಳಬಹುದಾಗಿದೆ. ಒಂದು ರಾಮ ಮಂದಿರದ ನಿರ್ಮಾಣದಿಂದ ಈ ದೇಶದಲ್ಲಿ ಸ್ವಾಭಿಮಾನದ ವಾತಾವರಣ ಪ್ರಾರಂಭವಾಗಿದೆ. ಇದು ಮುಂದುವರೆಯಬೇಕು. ಅದಕ್ಕಾಗಿ ಎಲ್ಲರೂ ಕೃಷ್ಣ ಭಕ್ತರಾಗೋಣ ಎಂದು ಆಶಿಸಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್, ಚಿಂತಾಮಣಿ ಮಾತೃಪುರಿ ಆಶ್ರಮದ ಚೈತನ್ಯಮಯಿ ದೇವಿ, ಅಖಿಲ ಭಾರತ ಅಗರ್‌ವಾಲ್ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಪ್ರದೀಪ್ ಮಿತ್ತಲ್, ಡಾ.ಮಿತ್ತಲ್, ಮೈಸೂರು ಅಗರ್‌ವಾಲ್ ಸಮಾಜದ ಅಧ್ಯಕ್ಷ ಕೃಷ್ಣ ಮಿತ್ತಲ್ ಮತ್ತಿತರರು ಉಪಸ್ಥಿತರಿದ್ದರು.

ಅಂತರರಾಷ್ಟ್ರೀಯ ಭಗವದ್ಗೀತಾ ಅಧ್ಯಯನ ಕೇಂದ್ರ...

ಮಹಾಭಾರತದ ಕುರುಕ್ಷೇತ್ರ ಯುದ್ಧ ಸಂಭವಿಸಿದ ಸ್ಥಳದಲ್ಲಿಯೇ ಅಂತರ್‌ರಾಷ್ಟ್ರೀಯ ಮಟ್ಟದ ಭಗವದ್ಗೀತಾ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರ ಸ್ಥಾಪನೆಗೆ ನಿರಂತರ ಪ್ರಯತ್ನಗಳು ನಡೆಯುತ್ತಿದ್ದು, ಸದ್ಯದಲ್ಲಿಯೇ ಸಫಲಗೊಳ್ಳಲಿದೆ ಎಂದು ಗೀತಾ ಮನೀಷಿ ಮಹಾಮಂಡಲೇಶ್ವರ ಸ್ವಾಮಿ ಜ್ಞಾನಾನಂದ ಜೀ ತಿಳಿಸಿದರು.

'ದಿವ್ಯ ಗೀತಾ ಸತ್ಸಂಗ ಪ್ರವಚನ'ಕ್ಕೂ ಮುನ್ನ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಭಗವದ್ಗೀತೆ ಹಿಂದೂಗಳ ಗ್ರಂಥವಾದರೂ ಪ್ರಪಂಚದ ಎಲ್ಲಾ ಜೀವಿಗಳ ಬಗ್ಗೆ ಚಿಂತನೆ ಮಾಡುವ ಗ್ರಂಥ. ಈ ಗ್ರಂಥವನ್ನು ಪ್ರಪಂಚದ ಎಲ್ಲಾ ಭಾಗದ ಜನರು ಓದಿ, ಅರಿತುಕೊಳ್ಳಬೇಕು. ಭಗವದ್ಗೀತೆಯನ್ನು ಅರ್ಥಮಾಡಿಸುವ ಮೂಲಕ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಮೂಡಿಸಬೇಕಿದೆ. ಪರಸ್ಪರ ದ್ವೇಷ, ಯುದ್ಧ ಸನ್ನಿವೇಶದಲ್ಲಿ ಜಗತ್ತಿನಲ್ಲಿ ಎಲ್ಲರ ಹೃದಯವನ್ನು ಒಂದಾಗಿಸಲು ಇರುವ ಏಕಮಾರ್ಗ ಭಗವದ್ಗೀತೆಯಾಗಿದೆ. ಹಾಗಾಗಿ ಭಗವದ್ಗೀತಾ ಅಧ್ಯಯನ ಅಂತರರಾಷ್ಟ್ರೀಯ ಮಟ್ಟದಲ್ಲಾಗಬೇಕು ಎಂದು ಹೇಳಿದರು.

ಶಿಕ್ಷಕರ, ವಿದ್ಯಾರ್ಥಿಗಳ ಸಮಸ್ಯೆ ನಿವಾರಿಸಲು ಮರಿತಿಬ್ಬೇಗೌಡರಿಗೆ ಮತ ನೀಡಿ

ಮೈಸೂರು, ಮೇ 30(ಜಿಎ)–ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ಈಗಾಗಲೇ ನಾಲ್ಕು ಬಾರಿ ವಿಧಾನಪರಿಷತ್‌ಗೆ ಆಯ್ಕೆಯಾಗಿ ಶಿಕ್ಷಕರು, ವಿದ್ಯಾರ್ಥಿಗಳ ಅನೇಕ ಸಮಸ್ಯೆ ಬಗೆಹರಿಸಲು ಶ್ರಮಿಸಿದ್ದಾರೆ. ಸರಸ್ವತಿ ಪುತ್ರರಾದ ಮರಿತಿಬ್ಬೇಗೌಡರಿಗೆ ಮೊದಲ ಪ್ರಾಶಸ್ತ್ಯ ಮತ ನೀಡುವ ಮೂಲಕ ಮತ್ತೊಮ್ಮೆ ಸೇವೆ ಸಲ್ಲಿಸಲು ಬೆಂಬಲಿಸುವಂತೆ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮರಿತಿಬ್ಬೇಗೌಡರು ಪಕ್ಷದ ಎಲ್ಲಾ ನಾಯಕರ ಒಮ್ಮತದ ಅಭ್ಯರ್ಥಿಯೂ ಆಗಿದ್ದಾರೆ. ಇದೇ ವೇಳೆ ಮೈತ್ರಿ ಅಭ್ಯರ್ಥಿ ವಿವೇಕಾನಂದ ಅವರು ಕೇವಲ ಲಕ್ಷ್ಮಿ ಪುತ್ರರಾಗಿರುವ ಉದ್ಯಮಿ ಮಾತ್ರ, ಶಿಕ್ಷಣ ಕ್ಷೇತ್ರಕ್ಕೂ ಇವರಿಗೂ ಯಾವುದೇ ಸಂಬಂಧವಿಲ್ಲ. ಹೀಗಾಗಿ ಮತದಾರರು ಮರಿತಿಬ್ಬೇಗೌಡರನ್ನು ಆಯ್ಕೆ ಮಾಡಿ ಎಂದರು.



ಕೋಟೆ ಎಂ.ಶಿವಣ್ಣ

ಉತ್ತಮ ನಾಗರಿಕರನ್ನು ಸೃಷ್ಟಿಸುವ ಶಿಕ್ಷಕರ ಒಂದೊಂದು ಮತವೂ ಮಹತ್ವದ್ದಾಗಿದೆ. ಹೀಗಾಗಿ ಪರಿಷತ್ ಉಪ ಸಭಾಪತಿಯಾಗಿಯೂ ಉತ್ತಮವಾಗಿ ಸೇವೆ ಸಲ್ಲಿಸಿರುವ ಮರಿತಿಬ್ಬೇಗೌಡ ಅರ್ಹ ಅಭ್ಯರ್ಥಿಯಾಗಿದ್ದಾರೆ. ಮೈತ್ರಿ ಪಕ್ಷಗಳಲ್ಲಿ ತಮ್ಮ ಅಭ್ಯರ್ಥಿ ಬಗ್ಗೆಯೇ ಗೊಂದಲಗಳಿದ್ದವು. ಇಬ್ಬರು ಆಕಾಂಕ್ಷಿಗಳು ಬಲವಂತವಾಗಿ ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಮಾಡಿದ್ದಾರೆ. ಆದರೆ ಮರಿತಿಬ್ಬೇಗೌಡರ ವಿಷಯದಲ್ಲಿ ಈ ರೀತಿಯಿಲ್ಲ. ಇದರೊಡನೆ ಇವರು ವೈಯಕ್ತಿಕ ವರ್ಚಸ್ಸು ಸಹಾ ಹೊಂದಿದ್ದ ಕಾರಣ ಮತದಾರರು ಇದುವರೆಗೂ ಇವರನ್ನು ಗೆಲ್ಲಿಸುತ್ತಿದ್ದಾರೆ. ಹೀಗಾಗಿ ಈ ಬಾರಿಯೂ ಇವರು ಜಯಗಳಿಸುವ ವಿಶ್ವಾಸವಿದೆ ಎಂದು ತಿಳಿಸಿದರು.

ಸಾಧನೆ ಹೇಳಿಕೊಳ್ಳಲು ಮೈತ್ರಿ ಪಕ್ಷ ಹಾಗೂ ಅಭ್ಯರ್ಥಿ ಬಳಿ ಯಾವುದೇ ವಿಷಯವಿಲ್ಲ. ಆದರೆ ಕಾಂಗ್ರೆಸ್ ನುಡಿದಂತೆ ನಡೆದಿದೆ. ಇದೇ ರೀತಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಪಕ್ಷದ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಡಾ.ಸುನೀಲ್ ಕುಮಾರ್, ರಮೇಶ್, ಗಿರೀಶ್ ಉಪಸ್ಥಿತರಿದ್ದರು.

ಡಾ.ಯತೀಂದ್ರರಿಗೆ ಪರಿಷತ್‌ಗೆ ಅವಕಾಶ ಕಲ್ಪಿಸಿ

ಮೈಸೂರು, ಮೇ 30(ಜಿಎ)–ಕಳೆದ ವಿಧಾನಸಭಾ ಚುನಾವಣೆ ವೇಳೆ ತಮ್ಮ ತಂದೆಗೆ ವರುಣ ಕ್ಷೇತ್ರ ಬಿಟ್ಟುಕೊಟ್ಟು ಅವರು ಜಯ ಗಳಿಸಲು ನೆರವಾದ ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಈಗಲೂ ಶ್ರಮಿಸುತ್ತಿರುವ ಮಾಜಿ ಶಾಸಕ ಡಾ.ಯತೀಂದ್ರ ಅವರನ್ನು ವಿಧಾನಪರಿಷತ್‌ಗೆ ಕಾಂಗ್ರೆಸ್ ಪಕ್ಷ ಕಳುಹಿಸಿಕೊಡಬೇಕೆಂದು ನಗರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಮನವಿ ಮಾಡಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಂ.ಎಸ್.ಶಶಾಂಕ್ ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸದಿದ್ದರೂ ಡಾ.ಯತೀಂದ್ರ ಸುಮ್ಮನೆ ಕೂರಲಿಲ್ಲ. ಕಳೆದ ವಿಧಾನಸಭಾ, ಲೋಕಸಭಾ ಚುನಾವಣೆಯಲ್ಲಿಯೂ ಪಕ್ಷಕ್ಕಾಗಿ ಶ್ರಮಿಸಿದ್ದಾರೆ. ಇದರಿಂದಾಗಿ ಪಕ್ಷದ ಸಂಘಟನೆ ಬಲವಾಗಿದೆ. ಆದ್ದರಿಂದ ಪಕ್ಷದ ವರಿಷ್ಠರು ಇವರು ವಿಧಾನ ಪರಿಷತ್ ಪ್ರವೇಶಿಸುವಂತೆ ಮಾಡಿ, ನಂತರ ಸಚಿವ ಸ್ಥಾನ ನೀಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಮಜೀದ್ ಇನಾಯತ್, ಕುಮಾರ್, ದಿಲೀಪ್ ಮತ್ತಿತರರಿದ್ದರು.



ಡಾ.ಯತೀಂದ್ರ

ಕಿಕ್ ಬಾಕ್ಸಿಂಗ್‌ನಲ್ಲಿ ಮೈಸೂರು ವಿವಿ ವಿದ್ಯಾರ್ಥಿಗಳಿಗೆ ಪದಕ



2023–24ನೇ ಸಾಲಿನ ಅಖಿಲ ಭಾರತ ಅಂತರ ವಿವಿ ಪುರುಷ ಮತ್ತು ಮಹಿಳೆಯರ ಕಿಕ್ ಬಾಕ್ಸಿಂಗ್ ಪಂದ್ಯಾವಳಿಯು ಇತ್ತೀಚೆಗೆ ಸ್ವಾಮಿ ವಿವೇಕಾನಂದ ಶಬರಮತಿ ವಿಶ್ವವಿದ್ಯಾನಿಲಯದಲ್ಲಿ ನಡೆಯಿತು. ಈ ಪಂದ್ಯಾವಳಿಗಳಲ್ಲಿ ಮೈಸೂರು ವಿವಿ ಮಹಿಳೆಯರ ತಂಡವು 01 ಚಿನ್ನ, 02 ಬೆಳ್ಳಿ, 01 ಕಂಚಿನ ಪದಕವನ್ನು ಮತ್ತು ಪುರುಷರ ತಂಡವು 01 ಚಿನ್ನ, 04 ಬೆಳ್ಳಿ, 01 ಕಂಚಿನ ಪದಕ ಪಡೆದುಕೊಂಡಿದೆ. ಇವರಿಗೆ ಮೈಸೂರು ವಿವಿ ಕುಲಪತಿ ಪ್ರೊ. ಲೋಕನಾಥ್ ಎನ್.ಕೆ, ಕುಲಸಚಿವ (ಪರೀಕ್ಷಾಂಗ) ಪ್ರೊ.ಬಸಪ್ಪ, ಹಣಕಾಸು ಅಧಿಕಾರಿ ರೇಖಾ ಕೆ.ಎಸ್ ಅಭಿನಂದಿಸಿದರು. ಚಿತ್ರದಲ್ಲಿ (ನಿಂತಿರುವವರು: ಎಡದಿಂದ ಬಲ) ಗೋಪಿ ಚಂದನ್, ಗಿರೀಶ್, ಶಶಾಂಕ್, ವಿನಿತ್‌ರಾಜ್, ಉಲ್ಲಾಸ್ ಗೌಡ, ರೋಷನಿ ಮುತ್ತಣ್ಣ, ಸ್ಫೂರ್ತಿ ಮಲ್ಲಿಕ್.ಎಂ, ಪುಷ್ಪಲತಾ ಹೆಚ್.ಎನ್. (ಕುಳಿತಿರುವವರು :) ಪ್ರೀತಂ.ಎಂ.ಎಸ್ (ನಾಯಕ), ರಮೇಶ್.ಆರ್. (ವ್ಯವಸ್ಥಾಪಕರು), ಪ್ರೊ.ಬಸಪ್ಪ ಕುಲಸಚಿವರು(ಪರೀಕ್ಷಾಂಗ), ಡಾ.ಸಿ.ವೆಂಕಟೇಶ್ ನಿರ್ದೇಶಕರು, ಜಸ್ವಂತ್.ಎಸ್ (ತರಬೇತುದಾರರು) ಸಹನಾ.ಎಂ (ನಾಯಕಿ) ಅವರನ್ನು ಕಾಣಬಹುದು.

ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮತಯಾಚನೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ. ವಿವೇಕಾನಂದ ಪರ ಮೈಸೂರಿನ ಸಿಪಿಸಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಬಿಜೆಪಿ ಮುಖಂಡ ಸಂದೇಶ್ ಸ್ವಾಮಿ ಮತ ಯಾಚಿಸಿದರು. ಈ ವೇಳೆ ಗಿರಿಧರ್, ಕ್ಷೇತ್ರದ ಅಧ್ಯಕ್ಷ ಮಂಜುನಾಥ್, ಮಾಜಿ ಅಧ್ಯಕ್ಷ ಭಾನುಪ್ರಕಾಶ್, ಸು.ಮುರುಳಿ, ಪ್ರಧಾನ ಕಾರ್ಯದರ್ಶಿ ಪದ್ಮನಾಭ, ಮಂಜು ಸಿ.ಗೌಡ, ವೇಲು, ಜಗದೀಶ್ ಇನ್ನಿತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 30(ಜಿಎ)– ಜಿಲ್ಲಾ ಗಾಣಿಗರ ಸಂಘದ ವತಿಯಿಂದ ಸರಸ್ವತಿಪುರಂನಲ್ಲಿರುವ ಗಾಣಿಗ ವಿದ್ಯಾರ್ಥಿ ನಿಲಯದಲ್ಲಿ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಎನ್.ಸಿ.ಉಮೇಶ್ ವಿಷಯ ತಿಳಿಸಿ, ಅರ್ಜಿ ಸಲ್ಲಿಸಲು ಜೂ.25 ಕೊನೆ ದಿನ. ಇದಲ್ಲದೆ, ಪ್ರಥಮ ಬಾರಿಗೆ ಶಿವ ಜ್ಯೋತಿ ಪಣ ವಧು–ವರರ ಸಮಾವೇಶವನ್ನು ಸಹ ಆಯೋಜಿಸಲು ನಿರ್ಧರಿಸಲಾಗಿದೆ ಹೀಗಾಗಿ ಈ ಎರಡೂ ವಿಷಯಗಳ ಬಗ್ಗೆ ಮಾಹಿತಿ ಪಡೆಯಲು ದೂ. 98860 28262 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಪಾರ್ಥಸಾರಥಿ, ಯದುಕುಮಾರ್, ವಿಜಯಕುಮಾರ್ ಉಪಸ್ಥಿತರಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಕೆ.ಮರಿಗೌಡರಿಂದ ಬಿರುಸಿನ ಪ್ರಚಾರ

ಮೈಸೂರು, ಮೇ 30– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬೆಳವಾಡಿ, ಇಲವಾಲ, ಗುಂಗ್ರಾಲ್ ಛತ್ರ, ಕಲ್ಲೂರು ನಾಗನಹಳ್ಳಿ, ಹೂಟಗಳ್ಳಿ, ಎಸ್‌ಎಲ್‌ಡಿ ಶಾಲೆ ಮಹಿಳಾ ಪ್ರಥಮ ದರ್ಜೆ ಕಾಲೇಜು ಹಾಗೂ ಇನ್ನಿತರೆ ಶಾಲಾ–ಕಾಲೇಜುಗಳಲ್ಲಿ ಆಯಾ ಭಾಗದ ಮುಖಂಡರ ಜೊತೆಗೂಡಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮುಡಾ ಅಧ್ಯಕ್ಷ ಕೆ.ಮರೀಗೌಡ ಪ್ರಚಾರ ನಡೆಸಿದರು.



ಸುಮಾರು 25 ವರ್ಷಗಳಿಂದ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದರ ಜೊತೆಗೆ ಹಳೆ ಪಿಂಚಣಿ ವ್ಯವಸ್ಥೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮೇಲೆ ಒತ್ತಡ ಹಾಕಿ ಮರುಜಾರಿಗೊಳಿಸುವುದು, ಏಳನೇ ವೇತನ ಆಯೋಗದಲ್ಲಿ ಶಿಕ್ಷಕರ ಸಮಸ್ಯೆಗಳನ್ನು ನಿವಾರಿಸಲು ಶ್ರಮಿಸುತ್ತಿದ್ದಾರೆ. ಹಾಗಾಗಿ ಶಿಕ್ಷಕರ ಪಾಲಿನ ಬಂಧುವೇ ಆದ ಮರಿತಿಬ್ಬೇಗೌಡರಿಗೆ ಮೊದಲನೇ ಪ್ರಾಶಸ್ತ್ಯದ ಮತವನ್ನು ನೀಡಿ ಜಯಶೀಲರನ್ನಾಗಿ ಮಾಡಬೇಕೆಂದು ಮನವಿ ಮಾಡಿದರು. ಈ ವೇಳೆ ಬ್ಲಾಕ್ ಅಧ್ಯಕ್ಷರಾದ ಗುರುಸ್ವಾಮಿ, ಸತೀಶ್‌ಕುಮಾರ್, ಅರುಣ್‌ಕುಮಾರ್, 58ನೇ ವಾರ್ಡಿನ ರವಿ, ಸುರೇಶ್, ವೈ.ಸಿ. ಸ್ವಾಮಿ, ಹಳೆ ಕಾಮನಕೊಪ್ಪಲು ಸ್ವಾಮಿ, ಕರಿಗೌಡ, ಬೆಳವಾಡಿ ಲೋಕೇಶ್, ಬೆಟ್ಟಪ್ಪ ಆನಂದೂರು, ರಾಮೇಗೌಡ, ಯದುಕುಮಾರ್ ಇನ್ನು ಹಲವಾರು ಮುಖಂಡರು ಮರೀಗೌಡರೊಂದಿಗೆ ಮತಯಾಚನೆ ಮಾಡಿದರು.

ಎಂಎಂಕೆ–ಎಸ್‌ಡಿಎಂ ಕಾಲೇಜಿನಲ್ಲಿ ಅಭಿವಿನ್ಯಾಸ ಕಾರ್ಯಕ್ರಮ

ಮೈಸೂರು, ಮೇ 30– ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ 2024–25ನೇ ಸಾಲಿನಲ್ಲಿ ಪ್ರಥಮ ಪಿಯುಸಿಗೆ ದಾಖಲಾದ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯರಿಗೆ ಹಾಗೂ ಪೋಷಕರಿಗೆ ಅಭಿವಿನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಶ್ರೀಮತಿ ನಯನಕುಮಾರಿ ಮಾತನಾಡಿ, ಪೋಷಕರ ಜವಾಬ್ದಾರಿಗಳು ಹಾಗೂ ವಿದ್ಯಾರ್ಥಿಗಳ ಕರ್ತವ್ಯಗಳ ಬಗ್ಗೆ ತಿಳಿಸಿದರು. ವಿದ್ಯಾರ್ಥಿಗಳು ಕಾಲೇಜಿನಲ್ಲಿ ಅನುಸರಿಸಬೇಕಾದ ರೀತಿ ನೀತಿಗಳನ್ನು ವಿವರಿಸಿದರು.

ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು ಮಾತನಾಡಿ, ವಿದ್ಯಾರ್ಥಿಗಳಿಗೆ ಇರುವ ವಿಪುಲ ಅವಕಾಶಗಳ ಬಗ್ಗೆ ತಿಳಿಸಿದರು. ಎಸ್‌ಡಿಎಮ್‌ಇ ಸಂಸ್ಥೆಯು ಸಾಮಾನ್ಯ ವಿದ್ಯಾರ್ಥಿನಿಯರನ್ನು ಹೇಗೆ ಸಮರ್ಥ ಮಹಿಳೆಯಾಗಿ ರೂಪುಗೊಳಿಸಬಲ್ಲದು ಎಂಬುದನ್ನು ತಿಳಿಸಿದರು. ವಿದ್ಯಾರ್ಥಿನಿಯರ ಸರ್ವತೋಮುಖ ಏಳಿಗೆಗೆ ಉಪನ್ಯಾಸಕ ವೃಂದವು ಸಮರ್ಥವಾಗಿ ಕಾರ್ಯನಿರ್ವಹಿಸುವುದಾಗಿ ತಿಳಿಸಿದರು. ಜೀವಶಾಸ್ತ್ರ ವಿಭಾಗದ ಮುಖ್ಯಸ್ಥರು, ಹಿರಿಯ ಉಪನ್ಯಾಸಕರೂ ಆದ ಜೆ.ಎಸ್.ವಿಜಯಶ್ರೀ, ಜೀವಶಾಸ್ತ್ರ ವಿಭಾಗದ ಉಪನ್ಯಾಸಕರಾದ ಬಿ.ಟಿ. ನಂದಿನಿ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶೋಭಾ ಶೈಕ್ಷಣಿಕ ಮಾಹಿತಿಗಳನ್ನು ನೀಡಿದರು. ಜೀವಶಾಸ್ತ್ರ ಉಪನ್ಯಾಸಕರು, ವಿದ್ಯಾರ್ಥಿ ಕ್ಷೇಮ ಪಾಲನ ಅಧಿಕಾರಿ ಡಾ. ಓ.ಎಲ್.ಸುಮಾ ಹಾಗೂ ವಾಣಿಜ್ಯ ವಿಭಾಗದ ಮುಖ್ಯಸ್ಥೆ ಶ್ರೀಮತಿ ಜಯಲಕ್ಷ್ಮಿ ವೇದಿಕೆಯಲ್ಲಿದ್ದರು. ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿ ಕಾಲೇಜಿಗೆ ದಾಖಲಾಗಿರುವ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ಕಾಲೇಜಿನ ವಿದ್ಯಾರ್ಥಿನಿಯರಿಗೆ ಪ್ರಾಂಶುಪಾಲರು ವಿಶೇಷವಾಗಿ ಬಹುಮಾನವನ್ನು ನೀಡಿದರು.



ವಿದ್ಯಾರ್ಥಿನಿಯರಾದ ಗುಣ ಮತ್ತು ಹರ್ಷಿತ ಪ್ರಾರ್ಥಿಸಿದರು. ಕನ್ನಡ ಭಾಷಾ ವಿಭಾಗದ ಮುಖ್ಯಸ್ಥೆ ಪ್ರತಿಮಾ ಸ್ವಾಗತಿಸಿದರು. ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥೆ ಆಶಾ ಎನ್.ಎಸ್. ವಂದನಾರ್ಪಣೆ ಸಲ್ಲಿಸಿದರು. ಕನ್ನಡ ಭಾಷಾ ಉಪನ್ಯಾಸಕಿ ರೇಖಾ ಎನ್. ಕಾರ್ಯಕ್ರಮ ನಿರೂಪಿಸಿದರು.

ಗುಂಡು ಹಾರಿಸಿ ಕಾಡಾನೆಯಿಂದ ವ್ಯಕ್ತಿ ರಕ್ಷಣೆ

ಪಾಲಿಬೆಟ್ಟದ ಕಾಫಿ ತೋಟದಲ್ಲಿ ವಾಹನ ಚಾಲಕನ ಮೇಲೆ ದಾಳಿ





ಸಿದ್ದಾಪುರ, ಮೇ 30–ಗಾಳಿಯಲ್ಲಿ ಗುಂಡು ಹಾರಿಸಿ ಕಾಡಾನೆಯಿಂದ ವ್ಯಕ್ತಿಯನ್ನು ಬೆಳೆಗಾರರೊಬ್ಬರು ರಕ್ಷಿಸಿರುವ ಘಟನೆ ವಿರಾಜಪೇಟೆ ತಾಲೂಕಿನ ಪಾಲಿಬೆಟ್ಟದಲ್ಲಿ ಬುಧವಾರ ರಾತ್ರಿ ನಡೆದಿದೆ.

ಪಾಲಿಬೆಟ್ಟದಿಂದ ಲೂರ್ಡ್ಸ್ ಶಾಲೆಯ ಬಳಿಯ ವಾಹನ ಚಾಲಕ ಚಂದ್ರ ಕಾಡಾನೆ ದಾಳಿಯಿಂದ ಗಾಯಗೊಂಡ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಚಾಲಕ ಚಂದ್ರ ರಾತ್ರಿ ಮನೆಗೆ ಹೋಗುತ್ತಿದ್ದರು. ಈ ವೇಳೆ ಕಾಫಿ ತೋಟದಿಂದ ದಿಢೀರ್ ಬಂದ ಕಾಡಾನೆ ಚಂದ್ರ ಅವರ ಮೇಲೆ ದಾಳಿಗೆ ಮುಂದಾಗಿದೆ. ದಾಳಿಯಿಂದ ತಪ್ಪಿಸಿಕೊಳ್ಳಲು ತೋಟದ ಗೇಟ್‌ನೊಳಗೆ ನುಸುಳಲು ಯತ್ನಿಸಿದ್ದಾರೆ. ಆದರೂ ಕಾಡಾನೆ ಗೇಟ್ ಮುರಿದು ಮತ್ತೆ ದಾಳಿ ಮಾಡಿದೆ. ಈತನ ಕಿರುಚಾಟ ಕೇಳಿದ ಸಮೀಪದ ಮನೆಯಲ್ಲೇ ಇದ್ದ ಬೆಳೆಗಾರರ ಕುಟ್ಟಂಡ ಶ್ಯಾಮ್ ಸೋಮಣ್ಣ ಕೋವಿಯೊಂದಿಗೆ ಓಡಿ ಬಂದು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಇದರಿಂದ ಆನೆ ಕಾಫಿ ತೋಟದೊಳಗೆ ಓಡಿ ಹೋಗಿದೆ.

ಬಳಿಕ ಗಾಯಗೊಂಡ ಚಂದ್ರನನ್ನು ಪಾಲಿಬೆಟ್ಟದ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು. ಆಸ್ಪತ್ರೆಗೆ ಉಪ ವಲಯ ಅರಣ್ಯಾಧಿಕಾರಿ ಶ್ರೀನಿವಾಸ್ ಹಾಗೂ ಸಿಬ್ಬಂದಿ ಭೇಟಿ ಚಂದ್ರ ಅವರ ಆರೋಗ್ಯ ವಿಚಾರಿಸಿ, ಪರಿಶೀಲನೆ ನಡೆಸಿದರು. ಗುರುವಾರ ಬೆಳಗ್ಗೆ ಮತ್ತೆ ಅದೇ ಸ್ಥಳದಲ್ಲಿ ಕಾಣಿಸಿಕೊಂಡ ಕಾಡಾನೆಯನ್ನು ಅರಣ್ಯ ಸಿಬ್ಬಂದಿ ಅಲ್ಲಿಂದ ಓಡಿಸಿದರು.

ಪ್ರತಿಭಟನೆ ಎಚ್ಚರಿಕೆ: ಪಾಲಿಬೆಟ್ಟ ವ್ಯಾಪ್ತಿಯಲ್ಲಿ ನಿರಂತರವಾಗಿ ಕಾಡಾನೆಹಾವಳಿ ಮಿತಿಮೀರಿದ್ದು, ಶಾಶ್ವತವಾಗಿ ತಡೆಗಟ್ಟಲು ಅರಣ್ಯ ಇಲಾಖೆ ವಿಫಲವಾಗಿದೆ. ಕೃಷಿಯನ್ನೇ ನಂಬಿ ಜೀವನ ನಡೆಸುತ್ತಿರುವ ಬೆಳೆಗಾರರು, ಕಾರ್ಮಿಕರು ಹಾಗೂ ವಿದ್ಯಾರ್ಥಿಗಳು ಮನೆಯಿಂದ ಹೊರ ಬರಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅರಣ್ಯ ಇಲಾಖೆ ಕಾಡಾನೆಗಳನ್ನು ಕಾಡಿಗಟ್ಟಲು ಮಾತ್ರ ಸೀಮಿತವಾಗಿದ್ದು, ಒಂದು ತೋಟದಿಂದ ಮತ್ತೊಂದು ತೋಟಕ್ಕೆ ಕಾಡಾನೆಯನ್ನು ಓಡಿಸಿದ್ದಾರೆ. ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ, ರೈತರು ಹಾಗೂ ಕಾರ್ಮಿಕರು ಒಗ್ಗೂಡಿ ಬೃಹತ್ ಪ್ರತಿಭಟನೆ ನಡೆಸುವುದಾಗಿ ಎಂದು ಜಿಪಂ ಮಾಜಿ ಸದಸ್ಯ ಮಹೇಂದ್ರ ವಿಜು ಸುಬ್ರಮಣಿ ಎಚ್ಚರಿಸಿದ್ದಾರೆ.

ಪೊಲೀಸರ ಮನೆಯಲ್ಲೇ ಹಣ, ಚಿನ್ನಾಭರಣ ಕಳವು



ಕುಶಾಲನಗರ, ಮೇ 30– ಹಾಡಹಗಲೇ ಪೊಲೀಸ್ ಸಿಬ್ಬಂದಿ ಮನೆಗೆ ಕಳ್ಳರು ನುಗ್ಗಿ ನಗದು ಮತ್ತು ಚಿನ್ನಾಭರಣ ದೋಚಿದ ಪ್ರಕರಣ ಸಮೀಪದ ಮಾದಪಟ್ಟಣ ಗ್ರಾಮದಲ್ಲಿ ಗುರುವಾರ ನಡೆದಿದೆ.

ಕುಶಾಲನಗರ ಪೊಲೀಸ್ ಠಾಣೆಯ ಸಿಬ್ಬಂದಿ ಪಿ.ಸಿ.ಸುನೀಲ್ ಕುಮಾರ್ ಅವರ ಮನೆಯಲ್ಲಿ ಕಳ್ಳತನವಾಗಿದ್ದು, ಮನೆಯ ಹಿಂಬಾಗಿಲು ಒಡೆದು ನುಗ್ಗಿದ ಕಳ್ಳರು 15 ಸಾವಿರ ರೂ. ನಗದು ಮತ್ತು 40 ಗ್ರಾಂ ಚಿನ್ನಾಭರಣ ಕಳವು ಮಾಡಿದ್ದಾರೆ.

ಸಮೀಪದ ಮನೆಯಲ್ಲಿ ಕೂಡ ಕಳ್ಳತನಕ್ಕೆ ವಿಫಲ ಯತ್ನ ನಡೆದಿದೆ. ಸ್ಥಳಕ್ಕೆ ಬೆರಳಚ್ಚು ತಜ್ಞರು ಹಾಗೂ ಶ್ವಾನದಳ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಘಟನೆಗೆ ಸಂಬಂಧಿಸಿದಂತೆ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇದೇ ವೇಳೆ ಸುನೀಲ್‌ಕುಮಾರ್ ಅವರ ಹಿಂದಿನ ಮನೆಯಲ್ಲೂ ಕಳ್ಳತನ ನಡೆಸಲು ವಿಫಲಯತ್ನ ನಡೆದಿದೆ.

ಸ್ಥಳಕ್ಕೆ ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸ್ ಶ್ವಾನದಳದೊಂದಿಗೆ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬುರ್ಖಾ ಧರಿಸಿ ಚಿನ್ನಾಭರಣ ದೋಚಿದ್ದವನ ಬಂಧನ

ವಿರಾಜಪೇಟೆ: ಬುರ್ಖಾ ಧರಿಸಿ ಚಿನ್ನಾಭರಣ ಕಳವು ಮಾಡಿದ ಆರೋಪಿಯನ್ನು ವಿರಾಜಪೇಟೆ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸಮೀಪದ ಬಿಟ್ಟಂಗಾಲ ಗ್ರಾಮದ ಕೊಮ್ಮೆ ತೋಡುವಿನಲ್ಲಿ ಟೀ ಅಂಗಡಿ ನಡೆಸುತ್ತಿದ್ದ ಹ್ಯಾರಿಸ್ ಬಂಧಿತ ಆರೋಪಿ. ಈತ ಮೇ 20ರಂದು ರಾತ್ರಿ ಮಹಿಳೆಯಂತೆ ಬುರ್ಖಾ ವೇಷ ಧರಿಸಿ, ವಿರಾಜಪೇಟೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮುಂಭಾಗದ ತನ್ನ ಸಂಬಂಧಿಕರ ಮನೆಯಲ್ಲಿ 90 ವರ್ಷದ ವೃದ್ಧೆಯ ಕುತ್ತಿಗೆಯಿಂದ ಸುಮಾರು 16 ಗ್ರಾಂ ಚಿನ್ನಾಭರಣ ಕಸಿದುಕೊಂಡು ಪರಾರಿಯಾಗಿದ್ದ. ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರ ಕಾರ್ಯಾಚರಣೆ ನಡೆಸಿದ ಪೊಲೀಸರು ಈತನನ್ನು ಪತ್ತೆಹಚ್ಚಿ ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ವ್ಯಾನ್ ಡಿಕ್ಕಿ: ಸ್ಕೂಟರ್ ಸವಾರನಿಗೆ ಗಾಯ

ನಾಪೋಕ್ಲು: ಸ್ಕೂಟರ್ ಮತ್ತು ವ್ಯಾನ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಸ್ಕೂಟರ್ ಸವಾರನಿಗೆ ಗಂಭೀರ ಗಾಯವಾಗಿರುವ ಘಟನೆ ಸಮೀಪದ ಚೇರಂಬಾಣೆಯ ಕಾರುಗುಂದದ ಗೌಡ ಸಮಾಜ ಬಳಿ ಗುರುವಾರ ನಡೆದಿದೆ.



ಕಕ್ಕಬೆಯವಕಪಾಡಿ ನಿವಾಸಿ ಸಂತೋಷ್(29) ಗಾಯಗೊಂಡು ಮಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದಾರೆ. ಸಂತೋಷ್ ಸ್ಕೂಟರ್‌ನಲ್ಲಿ ಬೆಟ್ಟಗೇರಿಯಿಂದ ಚೇರಂಬಾಣೆ ಕಡೆಗೆ ಹೋಗುತ್ತಿದ್ದರು. ಇದೇ ವೇಳೆ ಚೇರಂಬಾಣೆಯಿಂದ ಬೆಟ್ಟಗೇರಿಯತ್ತ ಕರ್ತಮ್ಮಯ್ಯ ಅವರು ವ್ಯಾನ್‌ನಲ್ಲಿ ಬರುತ್ತಿದ್ದರು. ಈ ವೇಳೆ ಸ್ಕೂಟರ್ ಮತ್ತು ವ್ಯಾನ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಪರಿಣಾಮ ಸಂತೋಷ್ ಗಂಭೀರವಾಗಿ ಗಾಯಗೊಂಡಿದ್ದರು. ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಬಳಿಕ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಸಂಬಂಧ ಭಾಗಮಂಡಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೆಲಜಿ ಗ್ರಾಮದ ತೋಟಗಳಲ್ಲಿ ಬೆಳೆ ನಾಶ



ನಾಪೋಕ್ಲು, ಮೇ 30–ಸಮೀಪದ ನೆಲಜಿ ಗ್ರಾಮದಲ್ಲಿ ಕಾಡಾನೆಗಳ ಹಿಂಡು ತೋಟಗಳಿಗೆ ನುಗ್ಗಿ ದಾಳಿ ಮಾಡಿ, ಅಪಾರ ಬೆಳೆ ನಾಶಪಡಿಸಿದೆ.

ಬಲ್ಲಮಾವಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಳಪಟ್ಟ ನೆಲಜಿ ಗ್ರಾಮದ ಮೊಣ್ಣಂಡ ಸೀತಮ್ಮ ಮತ್ತು ಅಪ್ಪಯ್ಯ ಅವರ ತೋಟದಲ್ಲಿ ಬುಧವಾರ ರಾತ್ರಿ ಕಾಡಾನೆಗಳು ಬಾಳೆ, ತೆಂಗು, ಅಡಕೆ ಸೇರಿದಂತೆ ವಿವಿಧ ಫಸಲನ್ನು ನಾಶಪಡಿಸಿವೆ. ಈ ವ್ಯಾಪ್ತಿಯಲ್ಲಿ 3–4 ಕಾಡಾನೆಗಳ ಹಿಂಡು ನಿರಂತರವಾಗಿ ಅಡ್ಡಾಡುತ್ತಿವೆ. ಆನೆಗಳನ್ನು ಕಾಡಿಗಟ್ಟಲು ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಚೆಕ್ ಬೌನ್ಸ್: ವ್ಯಕ್ತಿಗೆ 6 ತಿಂಗಳು ಜೈಲು

ವಿರಾಜಪೇಟೆ: ಚೆಕ್ ಬೌನ್ಸ್ ಪ್ರಕರಣ ಸಂಬಂಧ ವ್ಯಕ್ತಿಗೆ ವಿರಾಜಪೇಟೆ ನ್ಯಾಯಾಲಯ 6 ತಿಂಗಳು ಜೈಲು ಶಿಕ್ಷೆ ಹಾಗೂ 3.35 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದೆ. ಪಟ್ಟಣದ ನಿಸರ್ಗ ಲೇಔಟ್ ನಿವಾಸಿ ಟಿ.ಆರ್.ರಿನಿಶ್ ಶಿಕ್ಷೆಗೆ ಗುರಿಯಾಗಿದ್ದು, ಈತ 2018ರಲ್ಲಿ ವಿಆರ್ ಫೈನಾನ್ಸ್‌ನಿಂದ ಚೆಕ್ ನೀಡಿ 2.5 ಲಕ್ಷ ರೂ. ಸಾಲ ಪಡೆದಿದ್ದರು. ನಂತರ ಸಾಲ ಹಿಂದಿರುಗಿಸಿರಲಿಲ್ಲ. ಇದರಿಂದ ಫೈನಾನ್ಸ್‌ನವರು ಚೆಕ್ ಅನ್ನು ಬ್ಯಾಂಕ್‌ಗೆ ಸಲ್ಲಿಸಿದಾಗ ಚೆಕ್ ಅಮಾನ್ಯಗೊಂಡಿದೆ.

ಬಳಿಕ ಟಿ.ಆರ್.ರಿನಿಶ್ ವಿರುದ್ಧ ನ್ಯಾಯಾಲಯದಲ್ಲಿ ಚೆಕ್ ಬೌನ್ಸ್ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ವಿಚಾರಣೆ ನಡೆಸಿದ ನ್ಯಾಯಾಧೀಶ ಸಂತೋಷ್ ಕೊಠಾರಿ ಅವರು ಟಿ.ಆರ್.ರಿನಿಶ್‌ಗೆ 6 ತಿಂಗಳು ಶಿಕ್ಷೆ ಹಾಗೂ 3.35 ಲಕ್ಷ ರೂ. ದಂಡ ವಿಧಿಸಿ, ವಿಆರ್ ಫೈನಾನ್ಸ್‌ಗೆ ಹಣ ಪಾವತಿಸುವಂತೆ ಆದೇಶ ನೀಡಿದ್ದಾರೆ. ವಿಆರ್ ಫೈನಾನ್ಸ್ ಮಾಲೀಕ ವಿನೂಪ್ ಕುಮಾರ್ ಪರವಾಗಿ ವಕೀಲ ಡಿ.ಸಿ.ಧ್ರುವ ಕುಮಾರ್ ವಾದ ಮಂಡಿಸಿದರು.

ಮರಿತಿಬ್ಬೇಗೌಡರಿಗೆ ಮತ ನೀಡಿ

ಮಂಡ್ಯ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮನವಿ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ .

ಮಂಡ್ಯ: ಜೂನ್ 3ರಂದು ನಡೆಯಲಿರುವ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮರಿತಿಬ್ಬೇಗೌಡ ಅವರಿಗೆ ಶಿಕ್ಷಕ ಬಂಧುಗಳು ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಬೆಂಬಲಿಸಬೇಕೆಂದು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮನವಿ ಮಾಡಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮರಿತಿಬ್ಬೇಗೌಡರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ಮೈಸೂರು–ಚಾಮರಾಜನಗರದಲ್ಲಿ ಸಚಿವ ಮಹದೇವಪ್ಪ ಅವರ ನೇತೃತ್ವ, ಹಾಸನದಲ್ಲಿ ರಾಜಣ್ಣ ನೇತೃತ್ವ ಮಂಡ್ಯದಲ್ಲಿ ಎಲ್ಲರ ಸಹಕಾರದೊಂದಿಗೆ ಪ್ರಚಾರ ಕಾರ್ಯ ನಡೆಯುತ್ತಿದೆ ಎಂದು ಸುದ್ದಿ ಗೋಷ್ಠಿಯಲ್ಲಿ ವಿವರಿಸಿದರು.

ಮರಿತಿಬ್ಬೇಗೌಡರು ಈಗಾಗಲೇ ನಾಲ್ಕು ಬಾರಿ ವಿಧಾನಪರಿಷತ್‌ಗೆ ಆಯ್ಕೆಯಾಗಿದ್ದಾರೆ. ಶಿಕ್ಷಕರ ಸಮಸ್ಯೆ ಬಗ್ಗೆ ಅರಿವಿದೆ. ಶಿಕ್ಷಕರ ಸಮಸ್ಯೆ ಸಂಬಂಧ ಅವರು ಸದನದ ಒಳಗೆ ಸಾಕಷ್ಟು ಹೋರಾಟ ನಡೆಸಿದ್ದಾರೆ. ಹಾಗಾಗಿ ಅವರಿಗೆ ಶಿಕ್ಷಕ ಬಂಧುಗಳು ಪ್ರಥಮ ಪ್ರಾಶಸ್ತ್ಯದ ಮತ ಕೊಟ್ಟು ಜಯ ಶೀಲರನ್ನಾಗಿ ಮಾಡಬೇಕೆಂದರು.

ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ವಿವೇಕ್ ಕ್ಷೇತ್ರದಲ್ಲಿ ಪರಿಚಯವಿಲ್ಲದ ವ್ಯಕ್ತಿ. ಉದ್ಯಮಿ, ಹಣವುಳ್ಳವರು ಎಂದು ಟಿಕೆಟ್ ನೀಡಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಗೆಲುವು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯಾವುದೇ ಒಂದು ಸಣ್ಣ ಭಿನ್ನಾಭಿಪ್ರಾಯ ಇಲ್ಲದಂತೆ ಪಕ್ಷ ಈ ಚುನಾವಣೆಯನ್ನು ನಡೆಸುತ್ತಿದೆ. ಈಗಾಗಲೇ ಹಳೆ ಪಿಂಚಣಿ ಯೋಜನೆ ಮತ್ತು ನೂತನ ಪಿಂಚಣಿ ಯೋಜನೆ ಸಮಸ್ಯೆಯನ್ನು ಬಗೆಹರಿಸುವುದಾಗಿ ಭರವಸೆ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಈ ಸಮಸ್ಯೆಯನ್ನು ನಿವಾರಿಸಲಾಗುವುದು ಎಂದರು. ಐದು ಗ್ಯಾರಂಟಿಗಳ ಜೊತೆಗೆ ಸರ್ಕಾರ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡುತ್ತಿದೆ. ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲು ಚಿಂತನೆ ನಡೆಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕ ರವಿಕುಮಾರ್ ಗೌಡ, ಮಾಜಿ ಶಾಸಕ ಎಂ.ಶ್ರೀನಿವಾಸ್, ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿಡಿ ಗಂಗಾಧರ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಅಂಜನ ಶ್ರೀಕಾಂತ್, ಹಿರಿಯ ಕಾಂಗ್ರೆಸ್ ಮುಖಂಡ ರುದ್ರಪ್ಪ, ಶ್ರೀಧರ್ ಉಪಸ್ಥಿತರಿದ್ದರು.

ಜಿಲ್ಲೆಯಲ್ಲಿ ಕುಡಿಯುವ ನೀರಿನ ಪರೀಕ್ಷೆ ಕಡ್ಡಾಯ

ಮಂಡ್ಯ, ಮೇ 30– ಜಿಲ್ಲೆಯ ಸಾರ್ವಜನಿಕರಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಮುನ್ನ ನಿಯಮಿತವಾಗಿ ನೀರಿನ ಪರೀಕ್ಷೆ ನಡೆಸಿ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ತಮ್ಮ ಕಚೇರಿಯ ಸಭಾಂಗಣದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕರಿಗೆ ಸರಬರಾಜು ಮಾಡುತ್ತಿರುವ ಕುಡಿಯುವ ನೀರಿನ ಗುಣಮಟ್ಟ ಪರಿಶೀಲನೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕುರಿತು ಸಭೆ ನಡೆಸಿ ಮಾತನಾಡಿದ ಅವರು, ಕಲುಷಿತ ನೀರು ಸೇವನೆಯಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಕುಡಿಯುವ ನೀರಿಗೆ ಯಾವುದೇ ಕಲುಷಿತ ನೀರು ಸೇರ್ಪಡೆಯಾಗದಂತೆ ಎಚ್ಚರವಹಿಸಿ ಎಂದರು.

ಜಾಕ್ವೆಲ್ ಪಾಯಿಂಟ್‌ಗೆ ನೀರು ಸೇರ್ಪಡೆಯಾಗುವ ನದಿಗಳು ಯಾವುದು ಎಂಬುದನ್ನು ತಿಳಿದು, ನೀರನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಬೇಕು. ಪರೀಕ್ಷೆ ನಡೆಸದೆ ಕುಡಿಯುವ ನೀರು ಸರಬರಾಜು ಮಾಡಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ತೊಂದರೆ ಉಂಟಾದಲ್ಲಿ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಇಂದಿನಿಂದ ಭಾರತೀಪುರದ ಶ್ರೀಲಕ್ಷ್ಮೀದೇವಿ ಅಮ್ಮನವರ ಮಹಾ ರಥೋತ್ಸವ

ಕೆ.ಆರ್.ಪೇಟೆ, ಮೇ 30– ತಾಲೂಕಿನ ಸಂತೇಬಾಚಹಳ್ಳಿ ಹೋಬಳಿ ಭಾರತೀಪುರ ಗ್ರಾಮ ದೇವತೆ ಶ್ರೀ ಲಕ್ಷ್ಮೀದೇವಮ್ಮನವರ ಜಾತ್ರಾ ಮಹೋತ್ಸವ ಹಾಗೂ ಮಹಾ ರಥೋತ್ಸವ ಮೇ 31ರಿಂದ ಜೂ.3 ವರೆಗೆ ನಡೆಯಲಿದೆ.

ಮೇ 31ರಂದು ಶುಕ್ರವಾರ ರಾತ್ರಿ 8 ಗಂಟೆಗೆ ಸಿಡಿ, ಬಾಯಿಬೀಗ, ಕೊಂಡೋತ್ಸವ, ಎಡೆಮಡೆ ಉತ್ಸವ ನಡೆಯಲಿವೆ. ಜೂ.1ರಂದು ಶನಿವಾರ ಮಧ್ಯಾಹ್ನ 3ಗಂಟೆಗೆ (ಭಾರತೀಪುರದಮ್ಮ) ಶ್ರೀಲಕ್ಷ್ಮೀದೇವಿಯ ಮಹಾರಥೋತ್ಸವ ಮತ್ತು ಅನ್ನದಾನ ಕಾರ್ಯಕ್ರಮ ನಡೆಯಲಿದೆ. ಜೂ.2ರಂದು ಭಾನುವಾರ ರಂಗದ ಹಬ್ಬ, ಕೋಲಾಟ, ಜಾತ್ರೆ, ಹಣ್ಣು–ಕಾಯಿ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಜೂ.3ರಂದು ಸೋಮವಾರ ಓಕಳಿಯಾಟ, ಸೋಮನ ಕುಣಿತ, ಮಹಾಮಂಗಳಾರತಿ ಕಾರ್ಯಕ್ರಮಗಳು ಜಾನಪದ ಶೈಲಿಯಲ್ಲಿ ನಡೆಯಲಿವೆ.

ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ತಮ್ಮ ವ್ಯಾಪ್ತಿಯೊಳಗಿನ ಕಬ್ಬನ್ನು ಮಾತ್ರ ಖರೀದಿಸಬೇಕು



ಅಧಿಕಾರಿಗಳ ಸಭೆ ನಡೆಸುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ.

ಮಂಡ್ಯ, ಮೇ 30– ಜಿಲ್ಲೆಯಲ್ಲಿರುವ 5 ಸಕ್ಕರೆ ಕಾರ್ಖಾನೆಗಳು ತಮಗೆ ನಿಗದಿ ಮಾಡಿರುವ ವ್ಯಾಪ್ತಿಯಲ್ಲಿ ಮಾತ್ರ ರೈತರಿಂದ ಕಬ್ಬನ್ನು ಖರೀದಿಸಬೇಕು. ಅನಧಿಕೃತವಾಗಿ ಬೇರೆ ಸಕ್ಕರೆ ಕಾರ್ಖಾನೆ ವ್ಯಾಪ್ತಿಯ ರೈತರಿಂದ ಕಬ್ಬು ಖರೀದಿಸಿದರೆ ಅಂತಹ ಸಕ್ಕರೆ ಕಾರ್ಖಾನೆಯ ಪರವಾನಿಗೆ ರದ್ದುಪಡಿಸಲು ಜಿಲ್ಲಾಧಿಕಾರಿ ಡಾ.ಕುಮಾರ ಎಚ್ಚರಿಕೆ ನೀಡಿದರು.

ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶುಗರ್ ಫ್ಯಾಕ್ಟರಿ ಸಂಬಂಧ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಬಾರಿ ಬರದ ಹಿನ್ನೆಲೆಯಲ್ಲಿ ಕಬ್ಬಿನ ಇಳುವರಿ ಸಹ ಕಡಿಮೆ ಇರುತ್ತದೆ. ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವಿಕೆಗೆ ಸ್ಪರ್ಧೆ ಉಂಟಾಗುವ ಸಾಧ್ಯತೆಯಿದ್ದು, ಸಕ್ಕರೆ ಕಾರ್ಖಾನೆಗಳು ಲಾಭ/ನಷ್ಟ ಯಾವುದೇ ಉಂಟಾದರು ತಮ್ಮ ವ್ಯಾಪ್ತಿಗೆ ನಿಗದಿಪಡಿಸಿದ ಕಬ್ಬನ್ನು ಮಾತ್ರ ಅರೆಯಬೇಕು ಎಂದರು.

ಏಕ ಕಾಲದಲ್ಲಿ ಕಬ್ಬು ಅರೆಯುವಿಕೆಗೆ ಪ್ರಸ್ತಾವನೆ 2024–25ನೇ ಸಾಲಿನ ಹಂಗಾಮಿನ ಕಬ್ಬು ಅರೆಯುವಿಕೆ ಸಂಬಂಧಿಸಿದಂತೆ ಯಾವುದಾದರು ಒಂದು ಸಕ್ಕರೆ ಕಾರ್ಖಾನೆ ಬೇರೆ ಸಕ್ಕರೆ ಕಾರ್ಖಾನೆಗಿಂತ ಮೊದಲು ಅರೆಯುವಿಕೆ ಪ್ರಾರಂಭಿಸಿದರೆ ಎಲ್ಲಾ ರೈತರು ತಮ್ಮ ಕಬ್ಬು ಖರೀದಿಸುವಂತೆ ಸಕ್ಕರೆ ಕಾರ್ಖಾನೆಗೆ ಮುಗಿಬೀಳುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿರುವ 5 ಸಕ್ಕರೆ ಕಾರ್ಖಾನೆಗಳು ಏಕಕಾಲದಲ್ಲಿ ಕಬ್ಬು ಅರೆಯಲು ಜುಲೈ 15 ರಿಂದ 30 ರವರೆಗೆ ಯಾವುದಾದರು ಒಂದು ದಿನಾಂಕವನ್ನು ನಿಗದಿಪಡಿಸಿಕೊಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಹೆಚ್.ಎಲ್.ನಾಗರಾಜು, ಜಂಟಿ ಕೃಷಿ ನಿರ್ದೇಶಕ ಅಶೋಕ್, ಆಹಾರ ಇಲಾಖೆಯ ಜಂಟಿ ನಿರ್ದೇಶಕರು ಎಂ.ಪಿ.ಕೃಷ್ಣಕುಮಾರ್ ಸೇರಿದಂತೆ ವಿವಿಧ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕರುಗಳು ಉಪಸ್ಥಿತರಿದ್ದರು.

ವಿಶ್ವ ಪರಿಸರ ದಿನದ ನಿಮಿತ್ತ ಜಾಗೃತಿ ಕಾರ್ಯಕ್ರಮ

ಮಂಡ್ಯ: ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ವತಿಯಿಂದ 'ನಮ್ಮ ಭೂಮಿ ನಮ್ಮ ಭವಿಷ್ಯ' ಎಂಬ ಘೋಷ ವಾಕ್ಯದಡಿ ವಿಶ್ವ ಪರಿಸರ ದಿನ–2024 ನಿಮಿತ್ತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮೇ 31 ಬೆಳಗ್ಗೆ 10 ಗಂಟೆಗೆ ಶ್ರೀರಂಗಪಟ್ಟಣ ತಾಲೂಕು ಪಶ್ಚಿಮವಾಹಿನಿಯ ಮಹಾತ್ಮಾಗಾಂಧಿ ಚಿತಾಭಸ್ಮ ಸ್ಮಾರಕದ ಬಳಿ ಕಾವೇರಿ ನದಿ ತಪ್ಪಲಿನ ಪ್ರದೇಶವನ್ನು ಶ್ರಮದಾನ ಹಮ್ಮಿಕೊಳ್ಳಲಾಗಿದೆ. ಜೂ.1ರಂದು ಬೆಳಗ್ಗೆ 9.30 ಗಂಟೆಗೆ ಮಂಡ್ಯ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕಾವೇರಿ ಉದ್ಯಾನದಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ.

ಜೂ.5ರಂದು ಮಂಡ್ಯ ಜಿಲ್ಲಾಧಿಕಾರಿ ಆವರಣದಿಂದ ಪರಿಸರ ಜಾಗೃತಿ ಕುರಿತು ಬೆಳಿಗ್ಗೆ 9.30 ಗಂಟೆಗೆ ಸೈಕಲ್ ಜಾಥಾ ಹಾಗೂ ಬೆಳಗ್ಗೆ 10.30 ಗಂಟೆಗೆ ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ಸಸ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ತರುವಾರ ಬೆಳಿಗ್ಗೆ 11.00 ಗಂಟೆಗೆ ಮಂಡ್ಯ ವಿಶ್ವವಿದ್ಯಾಲಯದ ಶಾರದಾ ಮಂದಿರದಲ್ಲಿ ಬಹುಮಾನ ವಿತರಣೆ ಮತ್ತು ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮತ ಎಣಿಕಾ ಕೇಂದ್ರಕ್ಕೆ ಭೇಟಿ...



ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಜೂನ್ 4 ರಂದು ಮಂಡ್ಯ ವಿಶ್ವವಿದ್ಯಾಲಯದಲ್ಲಿ ನಡೆಯುವ ಲೋಕಸಭಾ ಸಾರ್ವತ್ರಿಕ ಚುನಾವಣೆಯ ಮತ ಎಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಚುನಾವಣಾ ತಹಸೀಲ್ದಾರ್ ಮೆಕಟಾಚಲಪತಿ, ದೀಪಕ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಜಾಗರೂಕತೆಯಿಂದ ಮತ ಎಣಿಕೆ ನಡೆಸಿ

ತರಬೇತಿ ಕಾರ್ಯಾಗಾರದಲ್ಲಿ ಅಧಿಕಾರಿಗಳಿಗೆ ಎಡಿಸಿ ಗೀತಾ ಹುಡೇದ ಸೂಚನೆ



ಚಾ.ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನಡೆದ ಕಾರ್ಯಾಗಾರದಲ್ಲಿ ಎಡಿಸಿ ಗೀತಾ ಹುಡೇದ ಅಧಿಕಾರಿಗಳಿಗೆ ಎಣಿಕೆ ಕುರಿತು ಸೂಚನೆ ನೀಡಿದರು.

ಚಾಮರಾಜನಗರ, ಮೇ 30–ನಗರದಲ್ಲಿ ಜೂ.4ರಂದು ನಡೆಯುವ ಚಾಮರಾಜನಗರ ಲೋಕಸಭಾ ಕ್ಷೇತ್ರದ ಚುನಾವಣೆ ಮತ ಎಣಿಕೆಯನ್ನು ಜಾಗರೂಕತೆ ಹಾಗೂ ಜವಾಬ್ದಾರಿಯಿಂದ ನಿರ್ವಹಿಸಬೇಕು ಎಂದು ಜಿಲ್ಲಾ ಸಹಾಯಕ ಚುನಾವಣಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಎಣಿಕೆ ಅಧಿಕಾರಿ ಹಾಗೂ ಸಿಬ್ಬಂದಿಗೆ ಸೂಚಿಸಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಗುರುವಾರ ಮತ ಎಣಿಕೆ ಹಿನ್ನೆಲೆಯಲ್ಲಿ ಸೂಕ್ಷ್ಮ ವೀಕ್ಷಕರು ಹಾಗೂ ಮತ ಎಣಿಕೆ ಅಧಿಕಾರಿಗಳಿಗೆ ಆಯೋಜಿಸಿದ್ದ ಎಣಿಕೆ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಎಣಿಕೆ ಕಾರ್ಯ ನಗರದ ನಂಜನಗೂಡು ರಸ್ತೆಯ ಬೇಡರಪುರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಲಿದೆ. ಅಧಿಕಾರಿ ಹಾಗೂ ಸಿಬ್ಬಂದಿ ಕಡ್ಡಾಯವಾಗಿ ನಿಗದಿತ ಸಮಯಕ್ಕೆ ಸರಿಯಾಗಿ ಚುನಾವಣಾಧಿಕಾರಿ ಕಚೇರಿಯಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ಎಣಿಕೆ ಕೇಂದ್ರಕ್ಕೆ ಹಾಜರಾಗಬೇಕು. ಎಲೆಕ್ಟ್ರಾನಿಕ್ ವಸ್ತುಗಳು, ಮೊಬೈಲ್ ಹಾಗೂ ಸ್ಮಾರ್ಟ್ ವಾಚ್‌ಗಳನ್ನು ತರುವಂತಿಲ್ಲ ಎಂದರು.

ಎಣಿಕೆ ಕಾರ್ಯನಿರ್ವಹಣೆಗೆ ನಿಯೋಜಿಸಿರುವ ಮಾಸ್ಟರ್ ಟ್ರೈನರ್‌ಗಳು, ಅಧಿಕಾರಿಗಳು, ಸಿಬ್ಬಂದಿ ಎಣಿಕೆ ಕಾರ್ಯವನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸಬೇಕು. ಯಾವುದೇ ಗೊಂದಲಗಳಿಗೆ ಅವಕಾಶವಾಗದಂತೆ ಸುಸೂತ್ರವಾಗಿ ಎಣಿಕೆ ನಡೆಯಲು ಕಾರ್ಯೋನ್ಮುಖರಾಗಬೇಕು ಎಂದು ಸೂಚಿಸಿದರು.

ತರಬೇತಿ ನೋಡಲ್ ಅಧಿಕಾರಿ ಲಿಂಗರಾಜೇ ಅರಸ್, ಪವರ್ ಪಾಯಿಂಟ್ ಮೂಲಕ ಎಣಿಕೆ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿದರು. ವಿದ್ಯುನ್ಮಾನ ಮತ ಯಂತ್ರದ ಎಣಿಕೆ ಕಾರ್ಯ ಬೆಳಗ್ಗೆ 8 ಗಂಟೆಗೆ ಪ್ರಾರಂಭವಾಗಲಿದೆ. ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ತರಬೇತಿಯಲ್ಲಿ ಸರಿಯಾದ ಸಲಹೆ ಹಾಗೂ ಮಾರ್ಗದರ್ಶನವನ್ನು ಪಡೆದು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು. ಚುನಾವಣೆಯಲ್ಲಿ ಮತದಾನ ಮತ್ತು ಎಣಿಕೆ ಕಾರ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಯಾವುದೇ ಲೋಪಗಳಿಗೆ ಆಸ್ಪದ ನೀಡದಂತೆ ಕರ್ತವ್ಯ ನಿರ್ವಹಿಸಬೇಕು ಎಂದರು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿ ಸವೀನ, ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕರು, ಮಾಸ್ಟರ್ ಟ್ರೈನರ್‌ಗಳು, ಅಧಿಕಾರಿಗಳು ಇತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಸಮಯ ಪ್ರಜ್ಞೆ ಪಾಲಿಸಬೇಕು



ಚಾಮರಾಜನಗರದ ಅಂಬೇಡ್ಕರ್ ಭವನದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳ ಸಮಾರೋಪವನ್ನು ಪ್ರೊ.ಜೆ.ಸೋಮಶೇಖರ್ ಉದ್ಘಾಟಿಸಿದರು.

ಚಾಮರಾಜನಗರ: ವಿದ್ಯಾರ್ಥಿಗಳು ಶೈಕ್ಷಣಿಕ ಅವಧಿಯಲ್ಲಿ ಶಿಸ್ತು ಹಾಗೂ ಸಮಯ ಪ್ರಜ್ಞೆಯನ್ನು ಪಾಲಿಸಿ ಮುನ್ನಡೆಯಬೇಕು ಎಂದು ಮೈಸೂರಿನ ಮಾನಸಗಂಗೋತ್ರಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ. ಸೋಮಶೇಖರ್ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಗುರುವಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಆಯೋಜಿಸಿದ್ದ ಸಾಂಸ್ಕೃತಿಕ, ಕ್ರೀಡೆ, ಅಭಿವ್ಯಕ್ತಿ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳ ಸಮಾರೋಪ ಉದ್ಘಾಟಿಸಿ ಮಾತನಾಡಿದ ಅವರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಪಠ್ಯ ಪುಸ್ತಕಗಳ ಅಧ್ಯಯನದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಕಲೆ, ಸಂಸ್ಕೃತಿ, ಕ್ರೀಡೆ ಮತ್ತು ಶಿಸ್ತು, ಸಂಯಮವನ್ನು ರೂಢಿಸಿಕೊಳ್ಳಬೇಕು ಎಂದರು.

ಕಾಲೇಜಿನಲ್ಲಿ ನಡೆಯುವ ವಿಚಾರ ಸಂಕಿರಣಗಳು, ಉಪನ್ಯಾಸ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮಾಹಿತಿಗಳನ್ನು ಅರಿಯುವ ಅಭಿರುಚಿ ಗಳಿಸಿಕೊಂಡಾಗ ಮಾತ್ರ ಉತ್ತಮ ಜ್ಞಾನವುಳ್ಳ ವಿದ್ಯಾರ್ಥಿಯಾಗಿ ಹೊರಹೊಮ್ಮಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಪ್ರೊ.ಎಸ್.ಚಂದ್ರಮ್ಮ, ಉಪನ್ಯಾಸಕರಾದ ಡಾ.ಪಿ.ದೇವರಾಜು, ಐಕ್ಯೂಎಸಿ ಸಮಿತಿ ಸಂಚಾಲಕ ಡಾ.ಚಿನ್ಮಯ್ ಭಟ್, ಸಾಂಸ್ಕೃತಿಕ ಸಮಿತಿ ಸಂಚಾಲಕ ಡಾ.ಪಿ.ಎಂ.ನಾಗೇಂದ್ರ ಕುಮಾರ್, ಕ್ರೀಡೆ ಮತ್ತು ಅಭಿವ್ಯಕ್ತಿ ಸಮಿತಿ ಸಂಚಾಲಕಿ ರಾಧಾ ಲೋಕೇಶ್, ಎನ್‌ಎಸ್‌ಎಸ್ ಸಂಚಾಲಕರಾದ ಡಾ.ಜಿ.ಮಲ್ಲೇಶ್, ಎಂ.ಕೆ.ಮಂಜುನಾಥ್, ಉಪನ್ಯಾಸಕರು, ವಿದ್ಯಾರ್ಥಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಇದ್ದರು.

ಶಾಸಕ ಗಣೇಶ್ ಪ್ರಸಾದ್ ಮತಯಾಚನೆ



ಜಿಪಂ ಮಾಜಿ ಉಪಾಧ್ಯಕ್ಷ ಕೆ.ಎಸ್.ಮಹೇಶ್, ಮಾಜಿ ಸದಸ್ಯ ಕೆರೆಹಳ್ಳಿ ನವೀನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಬಿ.ರಾಜ ಶೇಖರ್, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಬಸವರಾಜು ಇದ್ದರು.

ಗುಂಡ್ಲುಪೇಟೆ, ಮೇ 30– ವಿಧಾನಪರಿಷತ್‌ನ ದಕ್ಷಿಣ ಪದವೀಧರ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಪರ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಪಟ್ಟಣದ ವಿವಿಧ ಶಾಲಾ–ಕಾಲೇಜುಗಳಲ್ಲಿ ಮತಯಾಚಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ರಾಜ್ಯದ ಶಿಕ್ಷಕರ ಪ್ರತಿನಿಧಿ ಯಾಗಿ ಶಿಕ್ಷಣ ಕ್ಷೇತ್ರದ ಘನತೆ ಮತ್ತು ಶಿಕ್ಷಕರ ಗೌರವಕ್ಕೆ ಕಿಂಚಿತ್ತು ತೊಂದರೆಯಾಗದಂತೆ ದುಡಿಯುತ್ತಿರುವ ಮರಿತಿಬ್ಬೇಗೌಡರನ್ನು ಮೊದಲ ಪ್ರಾಶಸ್ತ್ಯ ಮತ ನೀಡಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಸಂಸದ ಎ.ಸಿದ್ದ ರಾಜು, ಕಾಡಾ ಮಾಜಿ ಅಧ್ಯಕ್ಷ ನಂಜಪ್ಪ, ಚಾಮುಲ್ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜುಂಡ ಪ್ರಸಾದ್,

ಉಪಕಾರ್ಯದರ್ಶಿಯಾಗಿ ಎಂ.ಶ್ರೀಧರ ನೇಮಕ



ಚಾಮರಾಜನಗರ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ.ಶ್ರೀಧರ ಅವರನ್ನು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಉಪಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ಕಳೆದ ಮೂರು ವರ್ಷಗಳಿಂದ ನ್ಯಾಯಾಧೀಶರಾಗಿದ್ದ ಎಂ.ಶ್ರೀಧರ ಅವರು ಜಿಲ್ಲೆ, ತಾಲೂಕು ಹಾಗೂ ಗ್ರಾಮೀಣ ಭಾಗದಲ್ಲಿ ಸಾರ್ವಜನಿಕರಿಗೆ ಉಚಿತ ಮತ್ತು ತ್ವರಿತ ಕಾನೂನು ನೆರವು ತಲುಪಿಸುವ ನಿಟ್ಟಿನಲ್ಲಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಮೂಲಕ ಸಕ್ರಿಯರಾಗಿ ಕರ್ತವ್ಯ ನಿರ್ವಹಿಸಿದ್ದರು. ಪ್ರಸ್ತುತ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಉಪಕಾರ್ಯದರ್ಶಿ ಹುದ್ದೆಗೆ ಎಂ.ಶ್ರೀಧರ ಅವರು ನೇಮಕಗೊಳಿಸಲಾಗಿದೆ.

ವರ್ಗಾವಣೆಗೊಂಡ ನ್ಯಾಯಾಧೀಶರಾದ ಎಂ.ಶ್ರೀಧರ ಅವರಿಗೆ ಸನ್ಮಾನಿಸಲಾಯಿತು. ಚಾಮರಾಜನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾಗಿ ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ್ ಅಧಿಕಾರ ಸ್ವೀಕರಿಸಿದರು.

ಮೂರನೇ ಪುಟದಿಂದ

ಶೀಘ್ರವೇ ಅಮರನಾಥದಲ್ಲಿ ಪ್ರತಿಷ್ಠಾಪನೆ



ನಂದಿ ವಿಗ್ರಹ ಕೆತ್ತನೆ ಕಾರ್ಯ ಪೂರ್ಣಗೊಂಡು ಮೈಸೂರಿನಿಂದ ಅಮರನಾಥ ದೇವಾಲಯಕ್ಕೆ ತೆರಳಲು ಸಿದ್ಧವಾಗಿರುವುದು.

ಸುಭಾಷ್ ಚಂದ್ರಬೋಸ್ ಪ್ರತಿಮೆ ನಂತರ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅಯೋಧ್ಯೆಯ ಬಾಲರಾಮನ ಮೂರ್ತಿ ಕೆತ್ತನೆ ಮಾಡಿ ಪ್ರಸಿದ್ಧರಾಗಿದ್ದರು. ನಂತರ ಅವರಿಗೆ ಅಮರನಾಥ್ ಬೋರ್ಡ್ ವತಿಯಿಂದ ನಂದಿ ವಿಗ್ರಹ ಕೆತ್ತಿಕೊಡುವಂತೆ ಮನವಿ ಬಂದಿತ್ತು. ಈಗಾಗಲೇ ನಂದಿ ವಿಗ್ರಹದ ಕೆತ್ತನೆ ಕಾರ್ಯ ಮುಗಿಸಿ, ಮೇ 29ರ ಸಂಜೆ ಮೈಸೂರಿನಿಂದ ಕಳುಹಿಸಿಕೊಟ್ಟಿದ್ದಾರೆ. ಅರುಣ್ ಯೋಗರಾಜ್ ಕೆತ್ತನೆಯ ನಂದಿ ವಿಗ್ರಹ, ಮೂರು ಅಡಿ ಎತ್ತರದ ಕೃಷ್ಣ ಶಿಲೆಯದ್ದಾಗಿದ್ದು, ಅಮರನಾಥದ ಹಿಮದ ಉದ್ಭವ ಲಿಂಗದ ಮುಂದೆ ಪ್ರತಿಷ್ಠಾಪನೆಯಾಗಲಿರುವ ಕಪ್ಪು ವರ್ಣದ ಈ ನಂದಿ ನೋಡಲು ಆಕರ್ಷಕವಾಗಿದೆ. ಅಮರನಾಥ ಹಿಂದೂಗಳ ಪವಿತ್ರ ಯಾತ್ರೆ. ಪ್ರತಿ ವರ್ಷ ಉದ್ಭವ ಲಿಂಗ ದರ್ಶನಕ್ಕೆ ಭಾರೀ ಪ್ರಮಾಣದ ಜನ ತೆರಳುತ್ತಾರೆ. ಇದೀಗ ಶಿವಲಿಂಗದ ಮುಂಭಾಗ ನಂದಿ ಪ್ರತಿಷ್ಠಾಪನೆಗೊಳ್ಳುತ್ತಿದ್ದು, ಇದು ಮತ್ತೊಂದು ಆಕರ್ಷಣೆಯಾಗಲಿದೆ. ಜೂನ್ ಅಂತ್ಯದಲ್ಲಿ ನಂದಿ ಪ್ರತಿಷ್ಠಾಪನೆ ಆಗೋ ಸಾಧ್ಯತೆ ಇದೆ. ಮೈಸೂರು ತಾಲೂಕು ಗುಜ್ಜೆಗೌಡನಪುರ ಬಳಿ ಅಯೋಧ್ಯೆಯ ಬಲರಾಮನಿಗೆ ಬಳಸಿರುವ ಕೃಷ್ಣಶಿಲೆಯಲ್ಲೆ 3 ಅಡಿ ಎತ್ತರ 4 ಅಡಿ ಅಗಲ ಮತ್ತು ಬರೊಬ್ಬರಿ ಒಂದೂವರೆ ಟನ್‌ನಷ್ಟು ತೂಕವಿರುವ ನಂದಿ ವಿಗ್ರಹ ರಚನೆಯಾಗಿದೆ. ಈ ವಿಗ್ರಹ ಮಂಜಿಗೂ ಕೆಂದದು. ಎರಡೂವರೆ ತಿಂಗಳ ನಿರಂತರ ಶ್ರಮದಿಂದ ನಂದಿ ವಿಗ್ರಹ ರೂಪಿತವಾಗಿದೆ. ಈಗಾಗಲೇ ಮೈಸೂರಿನಿಂದ ದೂರದ ಕಾಶ್ಮೀರದ ಅಮರನಾಥಗೆ ಕಳುಹಿಸಿ ಕೊಡಲಾಗಿದೆ.

ಡಿ.ದೇವರಾಜ ಅರಸು ಪ್ರತಿಮೆ: ಅರುಣ್ ಯೋಗಿರಾಜ್ ಸ್ಪಷ್ಟನೆ

ಮೈಸೂರು ಸಿದ್ದಾರ್ಥನಗರದಲ್ಲಿನ ಜಿಲ್ಲಾ ಕಚೇರಿಗಳ ಸಂಕೀರ್ಣದ ಆವರಣದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಪ್ರತಿಮೆ ರೂಪಿಸುವ ಯೋಜನೆಯಲ್ಲಿ ನಾನಿಲ್ಲ. ಈ ಪ್ರತಿಮೆ ಕೆತ್ತನೆ ಪ್ರಸ್ತಾಪ ನನ್ನ ಬಳಿ ಬಂದಿಲ್ಲ ಎಂದು ಅರುಣ್ ಯೋಗಿರಾಜ್ ಸ್ಪಷ್ಟಪಡಿಸಿದ್ದಾರೆ. ಈ ಸಂಬಂಧ 'ಮೈಸೂರು ಮಿತ್ರ'ನಲ್ಲಿ ಬಂದ ವರದಿಗೆ ಪ್ರತಿಕ್ರಿಯಿಸಿರುವ ಅರುಣ್ ಯೋಗಿರಾಜ್, ಮೈಸೂರು ಜಿಲ್ಲಾಡಳಿತವಾಗಲೀ, ಸಂಬಂಧಿಸಿದ ಫೌಂಡೇಷನ್ ಆಗಲೀ ನನಗೆ ಈ ಪ್ರಸ್ತಾಪ ಸಲ್ಲಿಸಿಲ್ಲ. ಹಾಗೂ ನಾನು ಯೋಜನೆಯಲ್ಲಿ ತೊಡಗಿಸಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮಹಿಳಾ ಸಬ್‌ಇನ್ಸ್‌ಪೆಕ್ಟರ್ ಲೋಕಾಯುಕ್ತ ಬಲೆಗೆ

ಕುವೆಂಪುನಗರ ಠಾಣೆಯಲ್ಲಿ ಕಾನೂನು–ಸುವ್ಯವಸ್ಥೆ ಸಬ್‌ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ರಾಧಾ, ಇಂದು ಬೆಳಿಗ್ಗೆ 11.30ಗಂಟೆಗೆ ಮೈಸೂರಿನ ಕೆಆರ್ ಮೊಹಲ್ಲಾ ನಿವಾಸಿ ಕೆ.ಬಿ.ಮಹೇಶ್ ಎಂಬುವರಿಂದ 50,000ರೂ ಲಂಚ ಸ್ವೀಕರಿಸುತ್ತಿದ್ದಾಗ ಠಾಣೆಯಲ್ಲಿ ಹಣದ ಸಮೇತ ಸಿಕ್ಕಿಬಿದ್ದರು.

ರಿಯಲ್ ಎಸ್ಟೇಟ್ ಉದ್ಯಮಿಯೂ ಆದ ಪಿಡಬ್ಲ್ಯೂಡಿ ಸಿವಿಲ್ ಕಂಟ್ರಾಕ್ಟರ್ ಕೆ.ಬಿ.ಮಹೇಶ್ ವಿರುದ್ಧ 6 ತಿಂಗಳ ಹಿಂದೆ ವಂಚನೆ ಪ್ರಕರಣ ದಾಖಲಿಸಿದ್ದ ರಾಧಾ, ಅತನನ್ನು ಬಂಧಿಸಿದ್ದರು. ಪ್ರಕರಣದ ತನಿಖೆ ವೇಳೆ ಆರೋಪಿಯಿಂದ ಚಿನ್ನಾಭರಣ, ಆಸ್ತಿಗೆ ಸಂಬಂಧಿಸಿದ ದಾಖಲೆ ಪತ್ರಗಳು, ಬ್ಯಾಂಕ್ ಪಾಸ್‌ಬುಕ್, ಎಟಿಎಂ ಕಾರ್ಡ್, ಫೆಡರಲ್ ಬ್ಯಾಂಕ್ ಲಾಕರ್ ಕೀ, ಮೊಬೈಲ್ ಫೋನ್, ಕಾರು(ಕೆಎ41 9936 ಮತ್ತು ಕೆಎ05 ಎಂಜಡ್9329)ಗಳನ್ನು ವಶಕ್ಕೆ ಪಡೆದಿದ್ದರು.

ಈಗಾಗಲೇ ತನಿಖೆ ನಡೆಸಿ ನ್ಯಾಯಾಲಯಕ್ಕೆ ಮಹೇಶ್ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ. ವಶಪಡಿಸಿಕೊಂಡಿರುವ ವಸ್ತುಗಳನ್ನು ಬಿಡುಗಡೆ ಮಾಡುವಂತೆ ನ್ಯಾಯಾಲಯ ಆದೇಶಿಸಿದ್ದರೂ, ಅವುಗಳನ್ನು ವಾಪಸ್ ಕೊಡಲು ಸಬ್‌ಇನ್ಸ್‌ಪೆಕ್ಟರ್ ರಾಧಾ 2 ಲಕ್ಷ ರೂಗಳಿಗೆ ಬೇಡಿಕೆ ಇಟ್ಟಿದ್ದರು.

ಹಣಕ್ಕಾಗಿ ಪೀಡಿಸುತ್ತಿದ್ದ ಹಿನ್ನಲೆಯಲ್ಲಿ ಮಹೇಶ ಮೈಸೂರಿನ ಲೋಕಾಯುಕ್ತ ಎಸ್ಪಿ ಕಚೇರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದು, ಎಸ್ಪಿ ವಿ.ಜೆ.ಸಜಿತ್ ಅವರು ಕಾರ್ಯಾಚರಣೆಗೆ ಸೂಚನೆ ನೀಡಿದ್ದರು. ಇಂದು ಬೆಳಿಗ್ಗೆ 11.30ಗಂಟೆಗೆ ಮಹೇಶ್‌ರಿಂದ 50,000 ರೂ ಹಣ ಪಡೆಯುತ್ತಿದ್ದಾಗ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ರಾಧಾರನ್ನು ನಗದು ಸಮೇತ ಬಂಧಿಸಿದರು. ಮಹಜರು ನಡೆಸಿದ ಬಳಿಕ ಲೋಕಾಯುಕ್ತ ಕಚೇರಿಗೆ ಕರೆತಂದು ವಿಚಾರಣೆ ನಡೆಸಿ ಇಂದು ಸಂಜೆ ಅರೋಪಿಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ, ಆವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್‌ಕುಮಾರ್ ಠಾಕೂರ್, ಪೊಲೀಸ್ ಮಹಾನಿರೀಕ್ಷಕ ಸುಬ್ರಹ್ಮಣ್ಯೇಶ್ವರ ರಾವ್ ಅವರ ಮಾರ್ಗದರ್ಶನದಲ್ಲಿ ಎಸ್‌ಪಿ ವಿ.ಜೆ.ಸಜೀತ್ ಅವರ ನಿರ್ದೇಶನದಂತೆ ನಡೆದ ಕಾರ್ಯಾಚರಣೆಯಲ್ಲಿ ಡಿವೈಎಸ್ಪಿಗಳಾದ ಕೃಷ್ಣಯ್ಯ, ಮಾಲತೇಶ್, ಲೋಕಾಯುಕ್ತ ಠಾಣೆ ಇನ್ಸ್‌ಪೆಕ್ಟರ್‌ಗಳಾದ ಉಮೇಶ್ ಜಯರತ್ನ, ರೂಪಶ್ರೀ, ರವಿಕುಮಾರ್ ಸಿಬ್ಬಂದಿಗಳಾದ ರಮೇಶ್, ಗೋಪಿ, ಕಾಂತರಾಜು, ಪ್ರಕಾಶ, ಮೋಹನಗೌಡ, ವೀಣಾ ಪುಷ್ಪಲತಾ, ದಿವ್ಯಶ್ರೀ, ನೇತ್ರಾವತಿ, ಪ್ರದೀಪ, ಪರಶುರಾಮ, ಮೋಹನ, ಲೋಕೇಶ ಪಾಲ್ಗೊಂಡಿದ್ದರು.

ಎಣಿಕಾ ಕೇಂದ್ರದಲ್ಲಿ ಸಿದ್ಧತೆಗಳ ಪರಿಶೀಲನೆ

ಅವರೊಂದಿಗೆ ಮತ ಎಣಿಕಾ ಕೇಂದ್ರಕ್ಕೆ ಭೇಟಿ ನೀಡಿದ ಅವರು, ಬಂದೋಬಸ್ತ್ ವ್ಯವಸ್ಥೆ, ಮಾಧ್ಯಮ ಕೊಠಡಿ, ವೀಕ್ಷಕರ ಕೊಠಡಿ, ಮತ ಎಣಿಕೆಗೆ ಸಿದ್ಧಪಡಿಸಿರುವ ಸ್ಥಳ, ಅಗತ್ಯವಿರುವ ಟೇಬಲ್‌ಗಳು, ಅಭ್ಯರ್ಥಿಗಳ ಚುನಾವಣಾ ಏಜೆಂಟರಿಗೆ ಮಾಡಿರುವ ಆಸನ ವ್ಯವಸ್ಥೆ, ಇವಿಎಂ, ವಿವಿಪ್ಯಾಟ್ ಇರಿಸಿರುವ ಸ್ಟ್ರಾಂಗ್ ರೂ ಭದ್ರತೆ, ಪ್ರತೀ ಸುತ್ತಿನ ಫಲಿತಾಂಶ ಪ್ರಕಟಿಸಲು ಮಾಡಿರುವ ಧ್ವನಿವರ್ಧಕ ಸೌಲಭ್ಯ, ಅಧಿಕಾರಿಗಳು, ಸಿಬ್ಬಂದಿ, ಪೊಲೀಸ್ ಸಿಬ್ಬಂದಿಗೆ ಕುಡಿಯುವ ನೀರು, ತಿಂಡಿ, ಊಟ, ಶೌಚಾಲಯ ವ್ಯವಸ್ಥೆಗಳನ್ನು ಜಿಲ್ಲಾಧಿಕಾರಿಗಳು ವೀಕ್ಷಿಸಿದರು. ಮತ ಎಣಿಕೆ ಕೇಂದ್ರದ ಎಲ್ಲಾ ಮಹಡಿಗಳು, ಹೊರಾವರಣದಲ್ಲಿ ವಿದ್ಯುತ್ ದೀಪ, ಸ್ವಚ್ಛತೆ, ಅಗ್ನಿಶಾಮಕ ದಳದ ವಾಹನ, ಆಂಬುಲೆನ್ಸ್ ವ್ಯವಸ್ಥೆ, ಪ್ರವೇಶದ್ವಾರದಲ್ಲಿ ಮೆಟಲ್ ಡೋರ್ ಡಿಟೆಕ್ಟರ್, ಸಿಸಿ ಕ್ಯಾಮರಾ ಅಳವಡಿಸಿ ಕಟ್ಟೆಚ್ಚರಕ್ಕೆ ಸಿದ್ಧತೆ ಮಾಡಿರುವ ಬಗ್ಗೆ ಪರಿಶೀಲಿಸಿದ ಡಾ.ರಾಜೇಂದ್ರ ಅವರು, ಮತ ಎಣಿಕಾ ಮಾರ್ಗಸೂಚಿಯಂತೆ ಜೂನ್ 4ರಂದು ಕಟ್ಟುನಿಟ್ಟಾಗಿ ಕಾರ್ಯನಿರ್ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಎರಡ್ಮೂರು ದಿನದಲ್ಲಿ ಕರ್ನಾಟಕ ಪ್ರವೇಶ

ಮಳೆಯಾಗಬೇಕಿತ್ತು. ಆದರೆ 210 ಮಿಲಿ ಮೀಟರ್ ಮಳೆಯಾಗಿದ್ದು, ಇದೂ ಸಹ ಶೇಕಡ 29ರಷ್ಟು ಅಧಿಕವಾಗಿದೆ. ಇನ್ನು ಚಾಮರಾಜನಗರ ಜಿಲ್ಲೆಯಲ್ಲಿ 199 ಮಿಲಿ ಮೀಟರ್ ಮಳೆ ಯಾಗಬೇಕು, ಆದರೆ ಈ ಬಾರಿ 204 ಮಿಲಿ ಮೀಟರ್ ಮಳೆಯಾಗಿದ್ದು, ಶೇಕಡ 3ರಷ್ಟು ಹೆಚ್ಚಾಗಿದೆ. ಪೂರ್ವ ಮುಂಗಾರಿ ನಲ್ಲೇ ವರುಣ ಆರ್ಭಟಿಸಿದ್ದಾನೆ. ಇದ ರಿಂದ ಈಗಾಗಲೇ ಕೃಷಿ ಚಟುವಟಿಕೆ ಆರಂಭವಾಗಿದೆ. ನೈರುತ್ಯ ಮುಂಗಾರಿನಲ್ಲಿ ಕೂಡ ಈ ಬಾರಿ ಅಧಿಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಜೂನ್ 2 ಅಥವಾ 3ರಂದು ನೈರುತ್ಯ ಮುಂಗಾರು ಕರ್ನಾಟಕ ಪ್ರವೇಶಿಸಲಿದ್ದು, ವರುಣ ಅಬ್ಬರಿಸಲಿದ್ದಾನೆ. ಇದರಿಂದ ಈ ತಿಂಗಳಾಂತ್ಯಕ್ಕೆ ಮಂಡ್ಯದ ಕೆಆರ್‌ಎಸ್ ನೀರಿನ ಮಟ್ಟ 100 ಅಡಿ ದಾಟುವ ಸಾಧ್ಯತೆ ಇದೆ. ಕೇರಳದ ವೈನಾಡು ಪ್ರದೇಶದಲ್ಲಿ ನಿರಂತರವಾಗಿ ಮಳೆಯಾದರೆ ಸಾಕು ಮೈಸೂರು ಜಿಲ್ಲೆಯ ಕಬಿನಿ ಜಲಾಶಯ 15 ದಿನದಲ್ಲಿ ತುಂಬಿ ತುಳುಕಲಿದೆ.

ಸೌಹಾರ್ದ ಸಹಕಾರಿ ಅಧ್ಯಕ್ಷ–ಉಪಾಧ್ಯಕ್ಷ, ನಿರ್ದೇಶಕರಿಗೆ ತರಬೇತಿ ಕಾರ್ಯಾಗಾರ

ಸದಾ ಎಚ್ಚರ ವಹಿಸಿದರೆ ಹಣ ದುರುಪಯೋಗ ತಪ್ಪಿಸಬಹುದು; ಸಹಕಾರಿ ಅಧ್ಯಕ್ಷ ನಂಜನಗೌಡ ಅಭಿಮತ

ಮೈಸೂರು, ಮೇ 30(ಎಂಟಿವೈ)– ಸೌಹಾರ್ದ ಸಹಕಾರಿ ಸಂಘಗಳ ನಿರ್ದೇಶಕರು ತಮ್ಮ ಹಕ್ಕು, ಕರ್ತವ್ಯ ಹಾಗೂ ಹೊಣೆಗಾರಿಕೆ ಅರಿತು ಹಣಕಾಸಿನ ವ್ಯವಹಾರ ಪಾರದರ್ಶಕವಾಗಿ ನಡೆಯುವಂತೆ ನೋಡಿಕೊಂಡಾಗ ಮಾತ್ರ ಸಹಕಾರಿ ಸಂಘಗಳನ್ನು ಇನ್ನಷ್ಟು ಮೇಲ್ಮಟ್ಟಕ್ಕೆ ಕೊಂಡೊಯ್ಯಬಹುದು ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷ ಜಿ.ನಂಜನಗೌಡ ಸಲಹೆ ನೀಡಿದ್ದಾರೆ.



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ವತಿಯಿಂದ ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸಹಕಾರಿ ಸೌಹಾರ್ದ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರಿಗಾಗಿ ಆಯೋಜಿಸಿದ್ದ ಆಡಳಿತ ತರಬೇತಿ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷ ಜಿ.ನಂಜನಗೌಡ ಉದ್ಘಾಟಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಸಂಸ್ಥೆ ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸಹಕಾರಿ ಸೌಹಾರ್ದ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರಿಗಾಗಿ ಆಯೋಜಿಸಿದ್ದ ಆಡಳಿತ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸೌಹಾರ್ದ ಸಹಕಾರಿ ಸಂಘಗಳ ನಿರ್ದೇಶಕರು ಸಹಕಾರಿ ನಿಯಮಗಳು, ಬದಲಾಗುವ ಕಾನೂನು, ತಂತ್ರಜ್ಞಾನಕ್ಕೆ ಸಂಬಂಧಪಟ್ಟಂತೆ ಕಾಲ ಕಾಲಕ್ಕೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಉತ್ತಮ ಆಡಳಿತ ನಡೆಸುವುದಕ್ಕೆ ಆಗುವುದಿಲ್ಲ. ಆಡಳಿತ ಮಂಡಳಿಯಲ್ಲಿರುವ ನಿರ್ದೇಶಕರು ತಮ್ಮ ಹಕ್ಕು, ಕರ್ತವ್ಯದ ಬಗ್ಗೆ ತಿಳಿದುಕೊಳ್ಳಬೇಕು. ಅದಕ್ಕಾಗಿ ತರಬೇತಿ ಕಾರ್ಯಾಗಾರ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಸೌಹಾರ್ದ ಸಂಘಗಳಲ್ಲಿರುವ ಅನೇಕ ನಿರ್ದೇಶಕರು ಅನುಭವವುಳ್ಳವರಾಗಿದ್ದಾರೆ. ಆದರೂ ಅವರಿಗೆ ತರಬೇತಿ ನೀಡಲೇಬೇಕಾಗಿದೆ. ಕೆಲವರು ಪ್ರತಿಷ್ಠೆ, ನಾಮಕಾವಸ್ಥೆ, ಗೌರವಕ್ಕಾಗಿ ಸೌಹಾರ್ದ ಸಂಘಗಳಿಗೆ ನಿರ್ದೇಶಕರಾಗುತ್ತಾರೆ. ಆಡಳಿತದಲ್ಲಿ ಆಸಕ್ತಿ ಇಲ್ಲದಿದ್ದರೆ ಹಣ ದುರುಪಯೋಗ, ಭ್ರಷ್ಟಾಚಾರದ ಪ್ರಕರಣಗಳು ನಡೆಯಬಹುದು. ಸಣ್ಣ ಪ್ರಮಾಣದ ತಪ್ಪುಗಳನ್ನು ಆರಂಭದಲ್ಲಿಯೇ ಪತ್ತೆ ಮಾಡಿ, ಸರಿಪಡಿಸಲು ನಿರ್ದೇಶಕರು ಪ್ರಯತ್ನ ಮಾಡದಿದ್ದರೆ, ಮುಂದಿನ ದಿನಗಳಲ್ಲಿ ಸಣ್ಣ ತಪ್ಪು ದೊಡ್ಡದಾಗಿ ಬೆಳೆದು ಆಡಳಿತ ಮಂಡಳಿಯನ್ನೇ ಸಂಕಷ್ಟಕ್ಕೆ ಸಿಲುಕಿಸುವ ಸಾಧ್ಯತೆ ಇರುತ್ತದೆ ಎಂದರು.

ಹಣ ದುರುಪಯೋಗವಾದಾಗ ಸಹಕಾರಿ ಸಂಘಗಳ ಸಿಇಒ ಹಾಗೂ ಕೆಲ ಅಧಿಕಾರಿಗಳ ಮೇಲೆ ಆರೋಪ ಬರುವುದು ಸಹಜ. ಕೆಲವೊಮ್ಮೆ ಸಾಲ ನೀಡುವಾಗ ವ್ಯಕ್ತಿಗಳ ಪೂರ್ವಾಪರ ಪರಿಶೀಲಿಸದೇ, ಯಾವುದೋ ಒಬ್ಬ ನಿರ್ದೇಶಕರು ಒತ್ತಡ ಹೇರಿದರು ಎಂದ ಮಾತ್ರಕ್ಕೆ ಸಾಲ ಮಂಜೂರು ಮಾಡುವುದರಿಂದಲೂ ಸಹಕಾರಿ ಸಂಸ್ಥೆಗಳು ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುವ ಸಾಧ್ಯತೆ ಹೆಚ್ಚಾಗಿದೆ. ಇದರಿಂದ ಕಾನೂನು ಕ್ರಮಕ್ಕೆ ಒಳಗಾಗಬೇಕಾದ ಸ್ಥಿತಿ ಎದುರಾಗುತ್ತದೆ. ಈ ಕಾರಣದಿಂದ ನಿರ್ದೇಶಕರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಬೇಕು. ಲೆಕ್ಕಪತ್ರ ಅವಲೋಕನ ಮಾಡಿ, ಆಡಳಿತ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು.

ಮೀಟರ್ ಬಡ್ಡಿ ವ್ಯವಹಾರಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿ ಸಂಘಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಆದರೆ, ಸಂಘಗಳು ತಮ್ಮ ಉದ್ದೇಶವನ್ನು ಗಾಳಿಗೆ ತೂರಿ, ಶೇ.24, 30ರಷ್ಟು ಬಡ್ಡಿ ದರದಲ್ಲಿ ಸಾಲ ನೀಡಿವೆ. ಅಲ್ಲದೆ, ಡಿಪಾಸಿಟ್ ಹಣವನ್ನು ದುರುಪಯೋಗ ಮಾಡಿಕೊಂಡಿರುವುದು ಪತ್ತೆಯಾಗಿದೆ. ಈ ಕುರಿತು ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಸರ್ಕಾರ ಸೌಹಾರ್ದ ಸಹಕಾರಿ ಸಂಘಗಳ ನಿಯಂತ್ರಣಕ್ಕೆ ನಿಯಮ ರೂಪಿಸಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಾಲ್ಕು ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮೂರು ವಿಭಾಗದಲ್ಲೂ ಸ್ವತಃ ಕಟ್ಟಡವಿದೆ. ಮೈಸೂರು ವಿಭಾಗಕ್ಕೆ ಸ್ವಂತ ಕಟ್ಟಡವಿಲ್ಲ. 5 ಸಾವಿರ ಚ.ಅಡಿ ನಿವೇಶನ ಖರೀದಿಸಿದ್ದು, 5.50 ಕೋಟಿ ರೂ ವೆಚ್ಚದಲ್ಲಿ ಸುಸಜ್ಜಿತ ಕಟ್ಟಡ ನಿರ್ಮಿಸಲಾಗುತ್ತದೆ. ಆ ಕಟ್ಟಡದಲ್ಲಿ ತರಬೇತಿ ಕಾರ್ಯಾಗಾರ ನಡೆಸುವುದಕ್ಕೂ ಸಭಾಂಗಣವನ್ನು ನಿರ್ಮಿಸಲಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಕಟಪೂರ್ವ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಸೌಹಾರ್ದ ಸಹಕಾರಿ ಸಂಘಗಳಿಗೆ ಆಯ್ಕೆಯಾದ ನಿರ್ದೇಶಕರಲ್ಲಿನ ನಿರಾಸಕ್ತಿ, ಕೆಲವರ ಹಿಡಿತದಲ್ಲಿ ಇದ್ದಾಗ ಮಾತ್ರ ಸಂಘದ ಚಟುವಟಿಕೆಗಳಲ್ಲಿ ವ್ಯತ್ಯಾಸ ಉಂಟಾಗುವ ಸಾಧ್ಯತೆ ಇದೆ. ಚುನಾವಣೆಯಲ್ಲಿ ನಿಲ್ಲುವ ಹಾಗೂ ಚುನಾವಣೆ ಎದುರಿಸುವ ವೇಳೆ ಇರುವ ಆಸಕ್ತಿ, ಆಯ್ಕೆಯಾದ ನಂತರ ಕಡಿಮೆಯಾಗುತ್ತದೆ. ಪ್ರತಿಷ್ಠೆ ಹಾಗೂ ಕೀರ್ತಿಗಾಗಿ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಹಂಬಲಿಸುತ್ತಾರೆ. ಆಡಳಿತ ಮಂಡಳಿಯ ಸಭೆಯಲ್ಲಿ ನಡೆಯುವ ಚರ್ಚೆಯಲ್ಲಿ ಪಾಲ್ಗೊಳ್ಳುವುದೇ ಇಲ್ಲ. ಇದರೊಂದಿಗೆ ಅತಿಯಾದ ಆತ್ಮವಿಶ್ವಾಸ ಹಣ ದುರುಪಯೋಗದಂತಹ ಪ್ರಮಾದಕ್ಕೆ ಕಾರಣವಾಗುತ್ತದೆ.

ಕಾರ್ಯಾಗಾರದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕ ಶರಣಗೌಡ ಜಿ.ಪಾಟೀಲ್, ನಿರ್ದೇಶಕರಾದ ಎಸ್.ಕೆ.ಮಂಜುನಾಥ್, ಭಾರತಿ ಜಿ.ಭಟ್, ಮೈಸೂರು, ಮಂಡ್ಯ, ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷ ಎಸ್.ಆರ್.ನಾರಾಯಣರಾವ್, ಸಹಕಾರ ಸಂಘಗಳ ನಿವೃತ್ತ ಲೆಕ್ಕ ಪರಿಶೋಧನಾ ಉಪನಿರ್ದೇಶಕ ರಾಮಪ್ಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

'ಹಾಸನ ಚಲೋ'; ವಿಮಾನ ನಿಲ್ದಾಣದಲ್ಲೇ ಸಂಸದ ಪ್ರಜ್ವಲ್ ರೇವಣ್ಣ ಬಂಧನಕ್ಕೆ ಆಗ್ರಹ!



ಹಾಸನದಲ್ಲಿ ಪ್ರಜ್ವಲ್ ರೇವಣ್ಣ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಹಾಸನ, ಮೇ 30– 'ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣರನ್ನು ವಿಮಾನ ನಿಲ್ದಾಣದಲ್ಲೇ ಬಂಧಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಜನಪರ ಚಳವಳಿಗಳ ಒಕ್ಕೂಟ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದೆ.

ಹಾಸನದಲ್ಲಿ ಹಾಸನ ಚಲೋ ಪ್ರತಿಭಟನಾ ಮೆರವಣಿಗೆ ನಡೆಸಲಾಗಿದ್ದು, ರಾಜ್ಯದ ಹಲವೆಡೆಗಳಿಂದ 113 ಸಂಘಟನೆಗಳ ಸುಮಾರು 10 ಸಾವಿರ ಪ್ರತಿನಿಧಿಗಳು ಭಾಗವಹಿಸಿದ್ದರು. ಹಾಸನದ ಹೇಮಾವತಿ ಪ್ರತಿಮೆಯ ಬಳಿಯಿಂದ ಮೆರವಣಿಗೆ ಆರಂಭವಾಗಿದ್ದು, ಜಿಲ್ಲಾಧಿಕಾರಿ ಕಚೇರಿ ಬಳಿಯ ಹೊಸ ಬಸ್‌ನಿಲ್ದಾಣ ರಸ್ತೆಯಲ್ಲಿ ಬಹಿರಂಗ ಸಭೆ ನಡೆಸಿದ್ದಾರೆ. ಸಿಪಿಎಂ ನಾಯಕಿ ಸುಭಾಷಿಣಿ ಅಲಿ, ಜನವಾದಿ ಮಹಿಳಾ ಸಂಘಟನೆ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಲೇಖಕಿಯರಾದ ಬಾನು ಮುಷ್ತಾಕ್, ರೂಪ ಹಾಸನ ಸೇರಿದಂತೆ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಮಹಿಳೆಯರು, ರೈತರು, ವಿದ್ಯಾರ್ಥಿಗಳು, ಲಿಂಗ ಅಲ್ಪಸಂಖ್ಯಾತರು, ಸಾಹಿತಿಗಳು, ಬುದ್ಧಿಜೀವಿಗಳು, ಕಲಾವಿದರು ಮತ್ತು ನಿವೃತ್ತ ಸರ್ಕಾರಿ ಅಧಿಕಾರಿಗಳನ್ನು ಒಳಗೊಂಡ ಹಲವಾರು ಸಂಘಟನೆಗಳು ಪ್ರಜ್ವಲ್ ರೇವಣ್ಣ ವಿರುದ್ಧ ಪ್ರತಿಭಟನೆಗೆ ಆಗಮಿಸಿದ್ದರು.

ಕೆಲವು ಸಂಘಟನೆಗಳು ಸಂಸದ ಪ್ರಜ್ವಲ್ ಬಂಧನಕ್ಕೆ ಆಗ್ರಹಿಸಿದಾಗ ಅದಕ್ಕೆ ಆಕ್ಷೇಪ ವ್ಯಕ್ತವಾಗಿತ್ತು. ಪೆನ್‌ಡ್ರೈವ್ ಹಂಚಿ ಮಹಿಳೆಯರ ಮಾನ ಹರಾಜು ಮಾಡಿದವರನ್ನೂ ಬಂಧಿಸುವಂತೆ ಆಗ್ರಹಿಸಬೇಕು ಎಂಬ ಚರ್ಚೆಯಾಗಿದ್ದರಿಂದ ಪ್ರಜ್ವಲ್ ಬಂಧನ ಹಾಗೂ ಪೆನ್‌ಡ್ರೈವ್ ಹಂಚಿದವರ ಮೇಲೆ ಕ್ರಮಕ್ಕೆ ಆಗ್ರಹಿಸಿ ಹಾಸನ ಚಲೋ ನಡೆಸಲು ನಿರ್ಧರಿಸಲಾಯಿತು ಎಂದು ಸಂಘಟನೆಗಳ ಪ್ರಮುಖರು ತಿಳಿಸಿದ್ದಾರೆ.

ಮೈಸೂರು ಚರ್ಮರೋಗ ತಜ್ಞರ ರಜತ ಮಹೋತ್ಸವ



ಮೈಸೂರು ಚರ್ಮರೋಗ ತಜ್ಞರ ಸಂಘದ ರಜತ ಮಹೋತ್ಸವ ಆಚರಣೆ

ಮೈಸೂರು, ಮೇ 30(ಎಂಕೆ)– ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ಚರ್ಮರೋಗ ತಜ್ಞರ ಸಂಘದ ರಜತ ಮಹೋತ್ಸವ ಅದ್ಧೂರಿಯಾಗಿ ನೆರವೇರಿತು.

ಇಂಡಿಯನ್ ಅಸೋಸಿಯೇಷನ್ ಆಫ್ ಡರ್ಮಟಾಲಜಿಸ್ಟ್, ವೆನೆರಿಯೊಲೊಜಿಸ್ಟ್ ಅಂಡ್ ಲೆಪ್ರೊಲೊಜಿಸ್ಟ್ (ಐಎಡಿವಿಎಲ್) ರಾಜ್ಯಾಧ್ಯಕ್ಷರಾದ ಹೆಚ್.ಮಿತಾಕ್ಷರಿ ರಜತ ಮಹೋತ್ಸವವನ್ನು ಉದ್ಘಾಟಿಸಿ, ಸಂಘದ ಕಾರ್ಯಕ್ರಮಗಳ ಕುರಿತು ಶ್ಲಾಘನೆ ವ್ಯಕ್ತಪಡಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರಾಜೀವ್ ಗಾಂಧಿ ವಿವಿ ವಿಶ್ರಾಂತ ಕುಲಪತಿಗಳೂ ಆದ ಸಿದ್ದಗಂಗಾ ವೈದ್ಯಕೀಯ ಕಾಲೇಜಿನ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎಸ್.ಸಚ್ಚಿದಾನಂದ, ಚರ್ಮರೋಗ ಕುರಿತು ಅಧ್ಯಯನ ನಡೆಸುತ್ತಿರುವ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಧ್ಯಯನ ಕುರಿತು ಸಲಹೆಗಳನ್ನು ನೀಡಿದರು.

ಬಳಿಕ ಹಿರಿಯ ಚರ್ಮರೋಗ ತಜ್ಞರು ನೂತನ ಆವಿಷ್ಕಾರಗಳ ಕುರಿತು ಉಪನ್ಯಾಸ ನೀಡಿದರು. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ರಸಪ್ರಶ್ನೆ ಸ್ಪರ್ಧೆಯಲ್ಲಿ ಮಂಡ್ಯದ ಎಂಐಎಂಎಸ್ ಕಾಲೇಜಿನ ಸ್ನಾತಕೋತ್ತರ ವಿದ್ಯಾರ್ಥಿಗಳು ಮೊದಲ ಸ್ಥಾನ ಗಳಿಸಿದರು. ನಂತರ ಸಂಘದ ಸದಸ್ಯರನ್ನು ಸನ್ಮಾನಿಸಲಾಯಿತು.

ಐಎಡಿವಿಎಲ್ ರಾಜ್ಯ ಕಾರ್ಯದರ್ಶಿ ಡಾ.ಮಹೇಶ್‌ಕುಮಾರ್, ಸಂಘಟನಾ ಅಧ್ಯಕ್ಷ ಡಾ.ಬಿ.ಎಲ್.ನಂಜುಂಡಸ್ವಾಮಿ, ಸಂಘಟನಾ ಕಾರ್ಯದರ್ಶಿ ಡಾ.ವೈ.ಎಂ.ಶಿವಕುಮಾರ್, ಮೈಸೂರು ಚರ್ಮರೋಗ ತಜ್ಞರ ಸಂಘದ ಅಧ್ಯಕ್ಷ ಡಾ.ಹೆಚ್. ಬಂಗಾರು, ಕಾರ್ಯದರ್ಶಿ ಡಾ.ಎಸ್. ಸತೀಶ್, ಖಜಾಂಚಿ ಡಾ.ಕೆ.ಆರ್. ರಾಘವೇಂದ್ರ ಹಾಗೂ ರಾಜ್ಯದ ಹಲವೆಡೆಯಿಂದ ಆಗಮಿಸಿದ್ದ ಚರ್ಮರೋಗ ತಜ್ಞರು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ರಂಗನತಿಟ್ಟು ಪಕ್ಷಿಧಾಮದಲ್ಲಿ ವಿಶ್ವ ನೀರು ನಾಯಿ ದಿನಾಚರಣೆ



ಮೈಸೂರು,ಮೇ 30(ಪಿಎಂ)– ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮದಲ್ಲಿ ಅರಣ್ಯ ಇಲಾಖೆ ವತಿಯಿಂದ ಬುಧವಾರ ವಿಶ್ವ ನೀರುನಾಯಿ ದಿನ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಅರಣ್ಯ ಇಲಾಖೆಯ ಮೈಸೂರು ವನ್ಯಜೀವಿ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಬಿ.ಎಂ.ಶರಣ ಬಸಪ್ಪ ಮಾತನಾಡಿ, ವಿಶ್ವ ನೀರು ನಾಯಿ ದಿನಾಚರಣೆಯನ್ನು ವಿಶ್ವದಾದ್ಯಂತ ಪ್ರತಿವರ್ಷ ಮೇ 29ರಂದು ಆಚರಿಸಲಾಗುತ್ತದೆ. ವಿವಿಧ ಬಗೆಯ ನೀರುನಾಯಿ ಪ್ರಭೇಧದ ಸಂರಕ್ಷಣೆ ಬಗ್ಗೆ ಅರಿವು ಮೂಡಿಸುವುದು ಈ ದಿನಾಚರಣೆಯ ಹಿಂದಿನ ಉದ್ದೇಶವಾಗಿದೆ ಎಂದರು.

ರಂಗನತಿಟ್ಟು ಪಕ್ಷಿಧಾಮವು ನೀರು ನಾಯಿಗಳ ಉತ್ತಮ ಆವಾಸಸ್ಥಾನವಾಗಿದೆ ಎಂದು ತಿಳಿಸಿದರಲ್ಲದೆ, ನೀರುನಾಯಿ ಮತ್ತು ಅದರ ಪ್ರಭೇದಗಳ ಬಗ್ಗೆ ವಿವರವನ್ನು ನೀಡಿದರು. ಕೊಯಂಬತ್ತೂರು ಸಲೀಂ ಅಲಿ ಪಕ್ಷಿ ವಿಜ್ಞಾನ ಮತ್ತು ನೈಸರ್ಗಿಕ ಇತಿಹಾಸ ಕೇಂದ್ರದ ಲ್ಯಾಂಡ್‌ಸ್ಕೇಪ್ ಎಕೋಲಜಿ ವಿಭಾಗ ವಿಜ್ಞಾನಿ ಡಾ.ವಿದ್ಯಾಧರ್ ಅಟ್‌ಕೋರೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ನೀರುನಾಯಿ ಸಂರಕ್ಷಣೆ ಕುರಿತು ವಿಚಾರ ಮಂಡಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶ್ರೀರಂಗಪಟ್ಟಣ ತಾಲೂಕಿನ ಕೇಂಬ್ರಿಡ್ಜ್ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳಿಗಾಗಿ ದೋಣಿ ವಿಹಾರ, ಪ್ರಕೃತಿ ನಡಿಗೆ, ಸಸಿಗಳನ್ನು ನೆಡುವುದು, ಚಿತ್ರಕಲಾ ಸ್ಪರ್ಧೆ ನಡೆಸಲಾಯಿತು. ನಾಗರಿಕ ಸೇವಾ ಪರೀಕ್ಷೆಯ ಸಿದ್ಧತೆ ಕುರಿತು ಸಹ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಅರಣ್ಯ ಇಲಾಖೆಯ ವನ್ಯಜೀವಿ ವಲಯ (ಪ್ರಭಾರ) ವಲಯ ಅರಣ್ಯಾಧಿಕಾರಿ ಎಂ.ಆರ್.ಧನ್ಯಶ್ರೀ, ಡಿಆರ್‌ಎಫ್‌ಓ ಪುಟ್ಟಮಾದೇಗೌಡ ಸೇರಿದಂತೆ ಶಾಲೆಯ ಶಿಕ್ಷಕರು ಪಾಲ್ಗೊಂಡಿದ್ದರು.

ಬಿಸಿಲ ತಾಪಕ್ಕೆ ರಾಜಸ್ಥಾನ ತತ್ತರ: 5 ದಿನಗಳಲ್ಲಿ 55 ಮಂದಿ ಸಾವು


ಹೊಸದಿಲ್ಲಿ, ಮೇ 30– ಮೇ ಅಂತ್ಯವಾಗಿ ಜೂನ್ ಆರಂಭವಾಗುವ 9 ದಿನಗಳ ಅವಧಿಯಾದ 'ನೌತಾಪ'ದ ಮೊದಲ ಐದು ದಿನಗಳಲ್ಲಿ ರಾಜಸ್ಥಾನದಲ್ಲಿ 55 ಮಂದಿ ಬಲಿಯಾಗಿದ್ದಾರೆ. ಉತ್ತರ ಭಾರತದಲ್ಲಿ ತಾಪಮಾನ ಮಿತಿ ಮೀರಿ ಮಾರಣಾಂತಿಕ ಎನಿಸಿದೆ.

ಗುರುವಾರ ರಾಜ್ಯದ ವಿವಿಧೆಡೆ ಅತಿಯಾದ ಬಿಸಿಲಿನ ಶಾಖಕ್ಕೆ 6 ತಿಂಗಳ ಮಗು ಹಾಗೂ ಒಬ್ಬ ಸರಪಂಚ ಸೇರಿ ನಾಲ್ವರು ಬಲಿಯಾಗಿದ್ದಾರೆ. ಒಟ್ಟಾರೆ ರಾಜ್ಯದಲ್ಲಿಉಷ್ಣ ಹವೆಗೆ ಮೃತಪಟ್ಟವರ ಸಂಖ್ಯೆ 122ಕ್ಕೆ ಏರಿಕೆಯಾಗಿದೆ.

ಕಳೆದ 24 ಗಂಟೆ ಅವಧಿಯಲ್ಲಿ ರಾಜಸ್ಥಾನದ ಚುರು ಜಿಲ್ಲೆಯಲ್ಲಿ ಗರಿಷ್ಠ ತಾಪಮಾನ 50.5 ಡಿ. ಸೆಲ್ಸಿಯಸ್ ದಾಖಲಾಗಿದೆ. ಗಂಗಾನಗರ, ಫಲೋಡಿ. ಪಿಲಾನಿಯಲ್ಲಿ ತಾಪಮಾನ 49 ಡಿ.ಸೆಲ್ಸಿಯಸ್ ದಾಟಿದ್ದು, ಸಾಮಾನ್ಯಕ್ಕಿಂತ 7.5 ಡಿ.ಸೆ.ಹೆಚ್ಚಳವಾಗಿದೆ. ಹೆಚ್ಚಿನ ಬಿಸಿಲು, ಉಷ್ಣ ಹವೆಯಿಂದ ಬಳಲಿಕೆ, ನಿರ್ಜಲೀಕರಣದಿಂದ ಮಕ್ಕಳು, ವೃದ್ಧರು ಹೆಚ್ಚಿನ ಪ್ರಮಾಣದಲ್ಲಿ ಸಾವಿಗೀಡಾಗಿದ್ದಾರೆ.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ 'ರೋಟರಿ ಗಾಯತ್ರಿ ಶೈಕ್ಷಣಿಕ ಪ್ರಶಸ್ತಿ' ಪ್ರದಾನ

ಮೈಸೂರು, ಮೇ 30(ಎಂಕೆ)– ರೋಟರಿ ಮೈಸೂರು ಸಹಯೋಗದೊಂದಿಗೆ ರೊ.ದಿವಂಗತ ಎಂ.ಟಿ.ರಾಮಚಂದ್ರ ಮತ್ತು ಕುಟುಂಬದ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು 10ನೇ ತರಗತಿ(ಸಿಬಿಎಸ್‌ಇ ಪಠ್ಯಕ್ರಮ)ಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ 'ರೋಟರಿ ಗಾಯತ್ರಿ ಶೈಕ್ಷಣಿಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು.



ರೋಟರಿ ಗಾಯತ್ರಿ ಶೈಕ್ಷಣಿಕ ಪ್ರಶಸ್ತಿ ಸ್ವೀಕರಿಸಿದ ವಿದ್ಯಾರ್ಥಿಗಳೊಂದಿಗೆ ಗಣ್ಯರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಭಾರತೀಯ ವಿದ್ಯಾಭವನದ ಎಸ್.ಜಾಹ್ನವಿ, ಸದ್ವಿದ್ಯಾ ಪ್ರೌಢಶಾಲೆಯ ಡಿ.ಎಸ್.ಧನ್ವಿ, ವಿಜಯ ವಿಠಲ ವಿದ್ಯಾಶಾಲೆಯ ಪ್ರಥಮ್ ಎಸ್ ಭಾರದ್ವಾಜ್ ಮತ್ತು ಬಿ.ಸುದೀಪ್ತಾ, ಸದ್ವಿದ್ಯಾ ಪ್ರೌಢಶಾಲೆಯ ಎ.ಕಾವ್ಯಶ್ರೀ, ಭಾರತೀಯ ವಿದ್ಯಾಭವನದ ಎಸ್.ಪ್ರಗತಿ, ಸಾವಿತ್ರಿ ಕಾನ್ವೆಂಟ್‌ನ ಅನ್ವಿತಾ ಆರ್ ಭಟ್, ವಿಜಯ ವಿಠಲ ವಿದ್ಯಾಶಾಲೆಯ ಎಂ.ಡಿ.ಸುದೀಕ್ಷಾ ಹಾಗೂ ಸಿಬಿಎಸ್‌ಇ ಪಠ್ಯಕ್ರಮದ 10ನೇ ತರಗತಿಯಲ್ಲಿ ಸೆಂಟ್ ಜೋಸೆಫ್ ಕೇಂದ್ರೀಯ ಶಾಲೆಯ ವಂಶಿಕಾ ಡಿ.ಅಗರ್‌ವಾಲ್, ಸೆಂಟ್ ಜೋಸೆಫ್ ಶಾಲೆ ಬಿ.ಕೆ.ಸುಧನ್ವ ಅವರಿಗೆ 'ರೋಟರಿ ಗಾಯತ್ರಿ ಶೈಕ್ಷಣಿಕ ಪ್ರಶಸ್ತಿ' ನೀಡಿ ಅಭಿನಂದಿಸಲಾಯಿತು.

ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದ ಹಿರಿಯ ಶಿಕ್ಷಣ ತಜ್ಞ ಸಿ.ಜಿ.ನಾಗರಾಜ ಮಾತನಾಡಿ, ಪೋಷಕರ ಒತ್ತಡ ಮಕ್ಕಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಾಗಿರಲಿದೆ. ಹಾಗಾಗಿ ಪೋಷಕರು ತಮ್ಮ ಮೇಲಿನ ಒತ್ತಡ ಕಡಿಮೆ ಮಾಡಿಕೊಂಡು ಮಕ್ಕಳ ಓದಿಗೆ ಸಹಕರಿಸಿದರೆ ಮಕ್ಕಳು ಸಹ ಉತ್ತಮ ಅಂಕಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಹಾಗೆಯೇ ಮುಂದಿನ 2 ವರ್ಷದ ವಿದ್ಯಾಭ್ಯಾಸ ಬಹಳ ಮುಖ್ಯವಾಗಿದ್ದು, ಪೋಷಕರು ಉತ್ತಮ ಕಾಲೇಜುಗಳಿಗೆ ಸೇರಿಸುವುದು, ಓದಿಗೆ ಅನುಕೂಲಕರ ವಾತಾವರಣ ರೂಪಿಸುವುದು ಅವಶ್ಯವಾಗಿದೆ ಎಂದರು.

ವಿದ್ಯಾರ್ಥಿಗಳು ಮುಖ್ಯವಾಗಿ ಟೈಂ ಮ್ಯಾನೇಜ್‌ಮೆಂಟ್(ಸಮಯ ನಿರ್ವಹಣೆ), ಕಂಟೆಂಟ್ ಮ್ಯಾನೇಜ್‌ಮೆಂಟ್ ಹಾಗೂ ಇಂಟರ್‌ನೆಟ್ ಮ್ಯಾನೇಜ್‌ಮೆಂಟ್ ಕುರಿತು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಓದಿನಲ್ಲಿ ಸಮಯದ ಸದ್ಬಳಕೆ ಮತ್ತು ವಿಷಯವನ್ನು ಅಧ್ಯಯನ ಮಾಡುವ ರೀತಿ ಬಹಳ ಮುಖ್ಯವಾಗುತ್ತದೆ. ಹಾಗೆಯೇ ಇಂಟರ್‌ನೆಟ್ ಬಳಕೆಯನ್ನು ಯಾವ ರೀತಿಯಲ್ಲಿ ಮಾಡಬೇಕು ಎಂಬುದರ ಬಗ್ಗೆ ಎಚ್ಚರಿಕೆ ವಹಿಸಬೇಕು. ಇಂಟರ್‌ನೆಟ್‌ನಿಂದ ಅನುಕೂಲ ಇರುವಷ್ಟೇ ಅನಾನುಕೂಲವೂ ಇದೆ. ಯೂಟ್ಯೂಬ್‌ನಲ್ಲಿ ಓದಿನ ಕುರಿತು ಮಾಹಿತಿಗಳು ದೊರೆತರೂ ಮನರಂಜನೆಗೆ ಬಳಕೆ ಮಾಡುವುದೇ ಹೆಚ್ಚು. ಹಾಗಾಗಿ ಇಂಟರ್‌ನೆಟ್ ಬಳಕೆಯಲ್ಲಿ ಬಹಳ ಎಚ್ಚರಿಕೆ ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಆಧ್ಯಾತ್ಮ ಶಿಕ್ಷಣ ಅವಶ್ಯ: ವಿದ್ಯಾರ್ಥಿಗಳಲ್ಲಿ ಕರುಣೆ, ಮಮತೆ, ನಮ್ರತೆ, ಸಂತೃಪ್ತಿ ಹಾಗೂ ಧೈರ್ಯ ಗುಣಗಳು ಬರಬೇಕಾದರೆ ಪಠ್ಯದ ಜೊತೆಗೆ ಆಧ್ಯಾತ್ಮ ಶಿಕ್ಷಣವನ್ನು ನೀಡಬೇಕು. ಪ್ರತಿನಿತ್ಯ ಒಂದು ತರಗತಿಯ ಅವಧಿಯಲ್ಲಿ ಯೋಗ, ಧ್ಯಾನ ಇನ್ನಿತರೆ ತರಗತಿಗಳು ನಡೆಯಬೇಕು. ಇದರಿಂದ ಮಕ್ಕಳಲ್ಲಿ ಓದುವ ಆಸಕ್ತಿಯೂ ಹೆಚ್ಚುತ್ತದೆ ಎಂದು ಸಲಹೆ ನೀಡಿದರು.

ಸಾಧಕರಾಗಿ: ರೊ.ದಿವಂಗತ ಎಂ.ಟಿ.ರಾಮಚಂದ್ರ ಕುಟುಂಬಸ್ಥರೂ ಆದ ರೋಟರಿ ಮೈಸೂರ್‌ನ ಮಾಜಿ ಅಧ್ಯಕ್ಷ ಎಂ.ಆರ್.ರಾಜಾರಾಂ ಮಾತನಾಡಿ, ಎಸ್‌ಎಸ್‌ಎಲ್‌ಸಿ ಹಾಗೂ 10ನೇ ತರಗತಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುವ ನಿಮ್ಮ ಮುಂದಿನ ಜೀವನ ಉಜ್ವಲವಾಗಿರಲಿ ಎಂದು ಆಶಿಸಿದರಲ್ಲದೆ ಸಾಧಕರಾಗಿ, ಸಮಾಜಕ್ಕೆ ತಮ್ಮದೆ ಆದ ಕೊಡುಗೆ ನೀಡುವಂತೆ ಪ್ರೇರೇಪಿಸಿದರು. ರೋಟರಿ ಮೈಸೂರು ಅಧ್ಯಕ್ಷ ಅರುಣ್ ರಾಮಚಂದ್ರ, ಕಾರ್ಯದರ್ಶಿ ವೆಂಕಟೇಶ್, ಸೀಮಾ ರಾಜಾರಾಂ ಮತ್ತಿತರರು ಉಪಸ್ಥಿತರಿದ್ದರು.

ಅಮೃತಾ ಉಪ್ಪಾರ್



ಎಂಟು ನಾಯಕಿಯರೊಂದಿಗೆ ಗಣೇಶ್ ಡ್ಯುಯೆಟ್



ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ 41ನೇ ಚಿತ್ರ ಕೃಷ್ಣಂ ಪ್ರಣಯ ಸಖಿ, ಕಥೆ-ಚಿತ್ರಕಥೆ ನಿರ್ದೇಶನ ಪುಟ್ಟಣ್ಣ, ಶಿವಂ, ದಂಡುಪಾಳ್ಯ, ಹುಬ್ಬಳ್ಳಿ ಡಾಬಾ ಸೇರಿದಂತೆ ಹಲವಾರು ಕನ್ನಡ ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದ ಶ್ರೀನಿವಾಸರಾಜು ಅವರ ನಿರ್ದೇಶನದ ಚಿತ್ರ ಇದಾಗಿದ್ದು, ಕೌಟುಂಬಿಕ ಹಿನ್ನೆಲೆಯ ಪ್ರೇಮಕಥೆಯನ್ನು ಈ ಮೂಲಕ ಹೇಳಹೊರಟಿದ್ದಾರೆ, ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದ ಹಾಡೊಂದರ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಅರ್ಜುನ್ ಜನ್ಯ ಅವರ ಸಂಗೀತ ನಿರ್ದೇಶನದ, ನಿಶಾನ್ ರಾಯ್ ರಚನೆಯ, ಚಂದನ್ ಶೆಟ್ಟಿ ದನಿಯಾಗಿರುವ ಮೈ ಮ್ಯಾರೇಜ್ ಇಸ್ ಫಿಕ್ಸ್ಡ್ ಎಂಬ ಸುಂದರ ಗೀತೆ ಸಾಂಸ್ಕೃತಿಕ ನಗರಿ ಮೈಸೂರಿನ ಮಾಲ್ ಆಫ್ ಮೈಸೂರಿನಲ್ಲಿ ಬಿಡುಗಡೆಯಾಯಿತು. ನಾಯಕ ಗಣೇಶ್ ಮಾತನಾಡಿ, ಶ್ರೀನಿವಾಸರಾಜು ಕಾಲ್‌ಮಾಡಿ ನಿಮಗೆ ಕಥೆ ಹೇಳಬೇಕೆಂದಾಗ ನನಗೆ ಆಶ್ಚರ್ಯವಾಯಿತು. ಅವರು ಥ್ರಿಲ್ಲರ್ ಚಿತ್ರ ಮಾಡಿರುವ ನಿರ್ದೇಶಕರು. ನಾನು ನೋಡಿದರೆ ಪ್ರೇಮಕಥೆಗಳ ನಾಯಕ. ನನಗಿವರು ಯಾವ ಥರದ ಕಥೆ ಮಾಡಿರಬಹುದು ಅಂದುಕೊಂಡು ಕಥೆ ಕೇಳಿದೆ. ಅವರು ಕಥೆ ಶುರು ಮಾಡುತ್ತಲೇ ನೀವು ಮದುವೆ ಗಂಡಿನ ಥರ ಬರುತ್ತೀರಾ. ಎಂಟು ಜನ ನಾಯಕಿಯರು ಮದುವೆ ಹೆಣ್ಣಿನ ರೀತಿ ರೆಡಿಯಾಗಿರುತ್ತಾರೆ ಎಂದರು. ಆಗ ಇದು ನನ್ನ ಜಾನರ್ ಚಿತ್ರ ಅಂದುಕೊಂಡೆ. ಆದರೆ ಚಿತ್ರದಲ್ಲಿ ಬರೀ ಇದಷ್ಟೇ ಇಲ್ಲ. ಕಥೆಯಲ್ಲಿ ಒಳ್ಳೆಯ ಟ್ವಿಸ್ಟ್ ಇಟ್ಟಿದ್ದಾರೆ. ಈಗ ಬಿಡುಗಡೆಯಾಗಿರುವ ಹಾಡಿನ ಜೊತೆಗೆ ಸಿನಿಮಾ ಕೂಡ ಚೆನ್ನಾಗಿದೆ ಎಂದರು.

ಇದು ಗಣೇಶ್ ಅವರಿಗಾಗಿಯೇ ಮಾಡಿರುವ ಕಥೆ. ಫ್ಯಾಮಿಲಿ ಎಂಟರ್‌ಟೈನರ್. ಎಲ್ಲಾ ಜನರೇಶನ್ ಅವರಿಗೂ ಹಿಡಿಸುವ ಕಥೆಯೂ ಹೌದು. ಅರ್ಜುನ್ ಜನ್ಯ ಸಂಗೀತ ನೀಡಿರುವ ಈ ಚಿತ್ರದ ಹಾಡುಗಳು ಸುಮಧುರವಾಗಿವೆ. ಆ ಪೈಕಿ ಮೊದಲ ಹಾಡು ಈಗ ಬಿಡುಗಡೆಯಾಗಿದೆ. ಚಿತ್ರದಲ್ಲಿ ಕನ್ನಡ ಚಿತ್ರರಂಗದ ಹಿರಿಯ ಹಾಗೂ ಕಿರಿಯ ಕಲಾವಿದರು ಸೇರಿದಂತೆ 64 ಜನ ಕಲಾವಿದರು ಅಭಿನಯಿಸಿದ್ದಾರೆ. ಆನಂದ್ ಆಡಿಯೋ ಮೂಲಕ ಬಿಡುಗಡೆಯಾಗಿರುವ ಚೊಚ್ಚಲ ಹಾಡಿಗೆ ಎಲ್ಲಾ ಕಡೆ ಮೆಚ್ಚುಗೆ ವ್ಯಕ್ತವಾಗುತ್ತಿದೆ ಎಂದು ನಿರ್ದೇಶಕ ಶ್ರೀನಿವಾಸ್ ರಾಜು ತಿಳಿಸಿದರು.

ನಿರ್ಮಾಪಕ ಪ್ರಶಾಂತ್ ಜಿ.ರುದ್ರಪ್ಪ ಮಾತನಾಡಿ, ಇದೊಂದು ಪರಿಶುದ್ಧ ಕೌಟುಂಬಿಕ ಕಥಾಹಂದರ ಹೊಂದಿರುವ ಚಿತ್ರ. ಸದ್ಯದಲ್ಲೇ ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದೇವೆ ಎಂದರು. ಗಾಯಕ ಚಂದನ್ ಶೆಟ್ಟಿ ಹಾಡಿನಲ್ಲಿ ಅಭಿನಯಿಸಿರುವ ವಿನುತ, ಚಂದನ, ಸುಶ್ಮಿತ ಹಾಗೂ ಚಂದನಗೌಡ ಎಲ್ಲರೂ ಹಾಡಿನ ಬಗ್ಗೆ ಮಾತನಾಡಿದರು. ಗಣೇಶ್ ಜೊತೆ ನಾಯಕಿಯಾಗಿ ಮಾಳವಿಕ ನಾಯರ್ ನಟಿಸಿದ್ದಾರೆ. ಶರಣ್ಯ ಶೆಟ್ಟಿ, ಶ್ರೀನಿವಾಸಮೂರ್ತಿ, ಸಾಧುಕೋಕಿಲ, ರಂಗಾಯಣ ರಘು, ಶಶಿಕುಮಾರ್, ಶ್ರುತಿ, ಭಾವನ, ಅಶೋಕ್, ರಾಮಕೃಷ್ಣ, ಶಿವಧ್ವಜ್, ರಘುರಾಮ್, ಮಾನಸಿ ಸುಧೀರ್, ಅಂಬುಜ, ಗಿರಿ ಶಿವಣ್ಣ ಉಳಿದ ತಾರಾಬಳಗದಲ್ಲಿದ್ದಾರೆ.

ಅವಕಾಶಗಳ ನಿರೀಕ್ಷೆಯಲ್ಲಿ ಅಮೃತಾ ಉಪ್ಪಾರ್

ಭಾಗ್ಯಲಕ್ಷ್ಮೀ ಮತ್ತು ಗಿಚ್ಚಿ ಗಿಲಿಗಿಲಿ ಸೀಜನ್ -2 ಖ್ಯಾತಿಯ ಅಮೃತಾ ಉಪ್ಪಾರ್ ಸಿನಿಮಾ ಅವಕಾಶಗಳ ನಿರೀಕ್ಷೆಯಲ್ಲಿದ್ದಾರೆ.

ಭಾಗ್ಯಲಕ್ಷ್ಮೀ ಸೀರಿಯಲ್ ಖಳನಾಯಕಿ (ವಿಲನ್) ಕನ್ನಿಕಾ ಮ್ಯಾಡಮ್ ಪಾತ್ರಧಾರಿಯ ಅಮೃತಾ ಉಪ್ಪಾರ್ ತಮ್ಮ ವಿಶಿಷ್ಟ ಅಭಿನಯದಿಂದಾಗಿ ಮನೆ ಮಾತಾಗಿದ್ದಾರೆ. ಇವರಿಗಾಗಿಯೇ ಖಾಸಗಿ ವಾಹಿನಿಯ ಗಿಚ್ಚಿ ಗಿಲಿಗಿಲಿ ಸೀಜನ್ -2ನಲ್ಲಿ ವಿಶೇಷವಾಗಿ "ಅಮೃತಕ್ಕಾಗಿ ಹೋರಾಟ" ಕಾರ್ಯಕ್ರಮವನ್ನು ರೂಪಿಸಿದ್ದುಂಟು.

ಇಂಗ್ಲೀಷ್ ಪತ್ರಿಕೋದ್ಯಮದಲ್ಲಿ ಪದವೀಧರೆಯಾದ ಅಮೃತ ಉಪ್ಪಾರ್ ಆರಂಭದಲ್ಲಿ ನಿರೂಪಕಿಯಾಗಿ ಕೆಲವು ಖಾಸಗಿ ವಾಹಿನಿಗಳಲ್ಲಿ ಕಾರ್ಯ ನಿರ್ವಹಿಸಿ ಕೆಲವು ಕಂಪನಿಗಳಲ್ಲಿ ರೂಪದರ್ಶಿಯಾಗಿ ಮಿಂಚಿದ್ದಾರೆ. "ಗೌರಿಪುರದ ಗಯ್ಯಾಳಿಗಳು" ಧಾರಾವಾಹಿಯ ಮಾಲಿನಿಯಾಗಿ ಮತ್ತು ಬಾಲಾಜಿ ಫೋಟೋ ಸ್ಟುಡಿಯೋ ಚಿತ್ರದಲ್ಲಿ 2ನೇ ನಾಯಕಿಯಾಗಿ ಅಮೃತಾ ಉಪ್ಪಾರ ನಟಿಸಿದ್ದಾರೆ.

ಸ್ಪಷ್ಟ ಕನ್ನಡ, ಸಹಜ ಸೌಂದರ್ಯ ಹಿಂದೂಸ್ತಾನಿ ಸಂಗೀತ, ಗಾಯನ, ಸಾಹಿತ್ಯ, ಮಾಡೆಲ್, ಚಿತ್ರಕಲೆಯಲ್ಲಿ ತೊಡಗಿಸಿಕೊಂಡಿರುವ ಅಮೃತಾ ಉಪ್ಪಾರ್ ಸಿನಿಮಾಗಳ ಅವಕಾಶಕ್ಕಾಗಿ ಬೆಂಗಳೂರಿನಲ್ಲಿಯೇ ನೆಲೆಸಿದ್ದಾರೆ. ನಟ ಪ್ರಥಮ್ ಅವರ ಮುಂದಿನ ಚಿತ್ರದಲ್ಲಿ ನಾಯಕಿ ನಟಿಯಾಗಿ ನಟಿಸುತ್ತಿದ್ದು, ಕನ್ನಡ ಚಲನಚಿತ್ರರಂಗದಲ್ಲಿ ಗ್ಲಾಮರ್ ಪಾತ್ರಗಳಲ್ಲಿ ನಟಿಸಲು ಅಪೇಕ್ಷೆಯನ್ನು ಹೊಂದಿರುತ್ತಾರೆ. ಕನ್ನಡ ಚಿತ್ರರಂಗದ ನಿರ್ದೇಶಕರು ತನ್ನಂತ ಹೊಸ ಪ್ರತಿಭೆಗಳನ್ನು ಖಂಡಿತ ಗುರುತಿಸಿ ನಾಯಕಿ ನಟಿಯಾಗಲು ಅವಕಾಶ ನೀಡುವರೆಂಬ ಕಾತುರತೆ ಹೊಂದಿದ್ದಾರೆ! ಅಮೃತಾ ಉಪ್ಪಾರ್.

ವಿಜಯದಶಮಿಗೆ 'ಮಾರ್ಟಿನ್'

ಧ್ರುವ ಸರ್ಜಾ ಅಭಿನಯದ ಬಹುನಿರೀಕ್ಷಿತ ಚಿತ್ರ ಮಾರ್ಟಿನ್ ಅ.11ರಂದು ಪ್ರಪಂಚದಾದ್ಯಂತ ಬಿಡುಗಡೆಯಾಗಲಿದೆ, ಚಿತ್ರದ ಅಪ್‌ಡೇಟ್ ನೀಡಲೆಂದೇ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಚಿತ್ರತಂಡ ಮಾಹಿತಿ ಹಂಚಿಕೊಂಡಿತು. ನಾಯಕನಟ ಧ್ರುವ ಸರ್ಜಾ, ನಿರ್ದೇಶಕ ಎ.ಪಿ.ಅರ್ಜುನ್, ನಿರ್ಮಾಪಕ ಉದಯ್ ಕೆ.ಮೆಹ್ತಾ, ಸಂಗೀತ ನಿರ್ದೇಶಕ ರವಿ ಬಸ್ರೂರು ಸೇರಿದಂತೆ ಇಡೀ ಟೀಮ್ ಸಿನಿಮಾ ಕುರಿತಂತೆ ಮಾತನಾಡಿದರು.

ಈ ಚಿತ್ರಕ್ಕಾಗಿ ಎರಡೂವರೆ ವರ್ಷ ಜರ್ನಿಯಲ್ಲಿ 240ಕ್ಕೂ ಹೆಚ್ಚು ದಿನಗಳ ಚಿತ್ರೀಕರಣ ಆಗಿದೆ. ಅವರೆಲ್ಲ 100 ಪರ್ಸೆಂಟ್ ತಮ್ಮ ಎಫರ್ಟ್ ಹಾಕಿದ್ರಿಂದಲೇ ಮಾರ್ಟಿನ್ ಅಷ್ಟು ಚೆನ್ನಾಗಿ ಬಂದಿದೆ. ನನ್ನ ಜವಾಬ್ದಾರಿ ಏನಿತ್ತು ಅಂದರೆ ನಿರ್ದೇಶಕರು ಏನು ಹೇಳುವರೋ ಅದನ್ನು ಅಚ್ಚುಕಟ್ಟಾಗಿ ಮಾಡಬೇಕು ಅನ್ನುವುದಾಗಿತ್ತು, ಅದನ್ನು ಬಿಟ್ಟು ನಮ್ಮ ಮಾವ ಮಾಡಿದ ಕಥೆಗೆ ಸಂಪೂರ್ಣವಾಗಿ ನ್ಯಾಯ ಒದಗಿಸಬೇಕು ಎಂದು ತುಂಬಾ ಶ್ರಮ ಹಾಕಿ ಚಿತ್ರವನ್ನು ತಂದಿದ್ದೇವೆ. ಅಕ್ಟೋಬರ್ 11ಕ್ಕೆ ನಮ್ಮ ಮಾರ್ಟಿನ್ ಸಿನಿಮಾ ಪ್ರಪಂಚದಾದ್ಯಂತ ಬಿಡುಗಡೆಯಾಗುತ್ತಿದೆ. ಅಂದು ವಿಜಯದಶಮಿ ಹಬ್ಬ. ದಸರಾ ಕೊಡುಗೆಯಾಗಿ ಚಿತ್ರವು ರಿಲೀಸಾಗುತ್ತಿದೆ. ಈ ವಿಷಯವನ್ನು ಇಲ್ಲೇ ಮೊದಲು ಯಾಕೆ ಹೇಳ್ತಿದ್ದೇನೆ ಅಂದರೆ, ನಾವು ಯಾವತ್ತೂ ನಮ್ಮ ಬೇರುಗಳನ್ನು ಮರೆಯಬಾರದು. ನಮ್ಮ ಮನೆಯಲ್ಲೇ ಮೊದಲು ತಿಳಿಸಬೇಕು ಅಂತ ಇಲ್ಲಿಯೇ ಮೊದಲು ಪ್ರಕಟಿಸುತ್ತಿದ್ದೇವೆ. ಇನ್ನು ನಮ್ಮ ಚಿತ್ರದ ಟೀಸರ್, ಟ್ರೇಲರ್, ಸಾಂಗ್ ಇದ್ರಲ್ಲಿ ಯಾವುದು ಮೊದಲು ಬೇಕು ಅಂತ ನಮ್ಮ ಅಭಿಮಾನಿಗಳೇ ಹೇಳಬೇಕು, ಅದಕ್ಕಾಗಿ ಒಂದು ವೆಬ್‌ಸೈಟ್ ಮಾಡಿದ್ದೇವೆ, ನೀವು ಅದರಲ್ಲಿ ಲಾಗಿನ್ ಆಗಿ ನಿಮಗೆ ಚಿತ್ರದ ಯಾವ ಕಂಟೆಂಟ್ ಮೊದಲು ಬೇಕು ಅಂತ ಹೇಳಬೇಕು, ಅದರಲ್ಲಿ ಯಾವುದಕ್ಕೆ ಹೆಚ್ಚು ಜನ ಬೇಡಿಕೆ ಇಡ್ತಾರೋ ಅದನ್ನು ನಾವು ರಿಲೀಸ್ ಮಾಡ್ತಾ ಹೋಗುತ್ತೇವೆ ಎಂದು ಮಾಹಿತಿ ನೀಡಿದರು. ನಂತರ ನಿರ್ಮಾಪಕ ಉದಯ ಕೆ.ಮೆಹ್ತಾ, ನಿರ್ದೇಶಕ ಎ.ಪಿ.ಅರ್ಜುನ್, ಸಂಗೀತ ನಿರ್ದೇಶಕ ರವಿ ಬಸ್ರೂರು, ಛಾಯಾಗ್ರಾಹಕ ಸತ್ಯ ಹೆಗಡೆ ಹಾಗೂ ಇತರರು ಮಾರ್ಟಿನ್ ಕುರಿತಂತೆ ಮಾತನಾಡಿದರು. ಶೂಟಿಂಗ್ ಜೊತೆ ಜೊತೆಗೆ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಸಹ ಚಿತ್ರತಂಡ ಮುಗಿಸಿಕೊಂಡಿದೆ.



ಈ ಸಿನಿಮಾಗಾಗಿ ಸುಮಾರು 18ರಿಂದ 20 ದುಬಾರಿ ವೆಚ್ಚದ ಸೆಟ್‌ಗಳನ್ನು ಹಾಕಲಾಗಿದೆ. ಎ.ಪಿ.ಅರ್ಜುನ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ವೈಭವಿ ಶಾಂಡಿಲ್ಯ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ಅನ್ವೇಶಿ ಜೈನ್ ಹಾಗೂ ಸುಕೃತಾ ವಾಗ್ಲೆ ಇತರೆ ಪಾತ್ರಗಳಲ್ಲಿ ಬಣ್ಣಹಚ್ಚಿದ್ದಾರೆ.



'ಸಂಭವಾಮಿ ಯುಗೇ ಯುಗೇ' ಡೋಲು ತಮಟೆ ಹಾಡು

ಸಂಭವಾಮಿ ಯುಗೇ ಯುಗೇ ಕುರುಕ್ಷೇತ್ರ ಮಹಾಸಂಗ್ರಾಮದ ಸಂದರ್ಭದಲ್ಲಿ ಭಗವಾನ್ ಶ್ರೀಕೃಷ್ಣ ಅರ್ಜುನನ ಬಳಿ ಹೇಳುವ ಮಾತಿದು. ಅಧರ್ಮ ಹೆಚ್ಚಾದಾಗ ನಾನು ಪುನಃ ಪುನಃ ಹುಟ್ಟಿ ಬರುತ್ತಿರುತ್ತೇನೆ ಎನ್ನುವುದೇ ಈ ಮಾತಿನ ಅರ್ಥ. ಈ ಮಾತನ್ನೇ ಶೀರ್ಷಿಕೆಯಾಗಿಸಿ, ಹಿರಿಯ ನಿರ್ದೇಶಕ ಸಿದ್ದಲಿಂಗಯ್ಯ ಅವರು ಪುತ್ರನಿಗಾಗಿ ಚಿತ್ರವೊಂದನ್ನು ನಿರ್ದೇಶಿಸಿದ್ದರು. ಈಗ ಚೇತನ್ ಚಂದ್ರಶೇಖರ್ ಶೆಟ್ಟಿ ಅವರು ಗ್ರಾಮೀಣ ಹಿನ್ನೆಲೆಯಲ್ಲಿ ನಡೆಯುವ ಕಥೆ ಇಟ್ಟುಕೊಂಡು ಸಂಭವಾಮಿ ಯುಗೇ ಯುಗೇ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದ ಡೋಲು, ತಮಟೆ ವಾದ್ಯ ಎಂಬ ಜಾನಪದ ಶೈಲಿಯ ಹಾಡನ್ನು ನಟಿ ಶ್ರುತಿ ಹರಿಹರನ್ ಅವರು ಬಿಡುಗಡೆ ಮಾಡಿದರು.

ಶ್ರೀಮತಿ ಪ್ರತಿಭಾ ಅವರ ನಿರ್ಮಾಣದ ಈ ಚಿತ್ರದಲ್ಲಿ ಜಯ್ ಶೆಟ್ಟಿ, ನಿಶಾ ರಜಪೂತ್ ನಾಯಕ-ನಾಯಕಿಯಾಗಿ ನಟಿಸಿದ್ದು, ತಾಯಿಯಾಗಿ ಹಿರಿಯನಟಿ ಸುಧಾರಾಣಿ ಅಭಿನಯಿಸಿದ್ದಾರೆ. ಥ್ರಿಲ್ಲರ್, ಆಕ್ಷನ್, ಲವ್, ಸೆಂಟಿಮೆಂಟ್ ಸೇರಿದಂತೆ ಎಲ್ಲಾ ರೀತಿಯ ಮನರಂಜನಾತ್ಮಕ ಅಂಶಗಳನ್ನೂ ಹೊಂದಿರುವ ಪಕ್ಕಾ ಕಮರ್ಷಿಯಲ್ ಚಿತ್ರ ಇದಾಗಿದ್ದು, ಮಂಡ್ಯ, ರಾಮನಗರ ಅಲ್ಲದೆ ಚನ್ನಪಟ್ಟಣದ ಹೆಚ್ಚಿನ ಭಾಗದ ಚಿತ್ರೀಕರಣ ನಡೆಸಲಾಗಿದೆ. ಸೆನ್ಸಾರ್ ಹಂತದಲ್ಲಿರುವ ಈ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಸಿನಿಮಾ ಕುರಿತಂತೆ ಮಾತನಾಡಿದ ನಿರ್ದೇಶಕ ಚೇತನ್ ಚಂದ್ರಶೇಖರ್ ಶೆಟ್ಟಿ, ಈಗ ವಿದ್ಯಾವಂತರೆಲ್ಲ ಕೆಲಸಕ್ಕಾಗಿ ಹಳ್ಳಿ ಬಿಟ್ಟು ಪಟ್ಟಣ ಸೇರುತ್ತಿದ್ದಾರೆ. ರೈತರ ಸಂಖ್ಯೆಯೂ ಕಮ್ಮಿಯಾಗುತ್ತಿದೆ. ಅದೇ ರೀತಿ ವಿದ್ಯಾವಂತನಾದ ನಾಯಕ, ತನ್ನ ತಾಯಿಯ ಮಾತಿನಂತೆ ಸಿಟಿಗೆ ಹೋಗದೆ ಹಳ್ಳಿಯಲ್ಲೇ ಉಳಿದುಕೊಂಡು ತನ್ನ ಗ್ರಾಮವನ್ನು ಹೇಗೆ ಉದ್ಧಾರ ಮಾಡುತ್ತಾನೆ. ಆ ಸಂದರ್ಭದಲ್ಲಿ ಆತನಿಗೆ ಏನೆಲ್ಲ ಸಂಕಷ್ಟಗಳು ಎದುರಾದವು, ಯಾರೆಲ್ಲ ಈತನಿಗೆ ಅಡ್ಡ ನಿಂತರು, ನಾಯಕ ಅರ್ಜುನನಿಗೆ ಶ್ರೀಕೃಷ್ಣನ ರೂಪದಲ್ಲಿ ಬಂದು ಸಹಾಯ ಮಾಡಿದವರ್‍ಯಾರು ಎಂಬುದನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇವೆ. ಮುಂದಿನ ತಿಂಗಳು ಬಿಡುಗಡೆ ಮಾಡುವುದಾಗಿ ಹೇಳಿದರು. ಪುರಾನ್ ಶೆಟ್ಟಿಗಾರ್ ಅವರ ಸಂಗೀತ ಸಂಯೋಜನೆಯ ನಾಲ್ಕು ಹಾಡುಗಳು ಈ ಚಿತ್ರದಲ್ಲಿದ್ದು, ವಿಜಯಪ್ರಕಾಶ್, ಸಾಯಿವಿಘ್ನೇಶ್ (ವರಾಹರೂಪಂ) ದನಿಯಾಗಿದ್ದಾರೆ. ಪ್ರಾಂಕ್ಲಿನ್ ರಾಖಿ ಅವರ ಹಿನ್ನೆಲೆ ಸಂಗೀತ, ರಾಜು ಹೆಮ್ಮಿಗೆಪುರ ಅವರ ಛಾಯಾಗ್ರಹಣ, ರವೀಶ್ ಆತ್ಮಾರಾವ್ ಅವರ ಸಂಕಲನ ಈ ಚಿತ್ರಕ್ಕಿದೆ. ಪ್ರಮೋದ್‌ಶೆಟ್ಟಿ, ಅಶೋಕ್ ಕುಮಾರ್, ಮಧುರಗೌಡ, ಅಭಯ್ ಪುನೀತ್, ಬಲ ರಾಜವಾಡಿ, ಅಶ್ವಿನ್ ಹಾಸನ್ ಚಿತ್ರದ ಇತರೆ ತಾರಾಬಳಗದಲ್ಲಿದ್ದಾರೆ.

ಸಿನಿಪದಬಂಧ-528

1			2		■	3	■	4		
	■	■		■	■		■		■	■
	■	5								
6		■		■	■		■		■	■
	■	7			■	■	■		■	8
9		■		■	10	■	11		12	
■	■	■	■	■		■	■	■		■
■	13					■	14	■		■
■		■	■	■	■	■		■		■
■		■	15		16					
17				■		■		■	■	■

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ಗಣೇಶ್ - ಪೂಜಾಗಾಂಧಿ ಸುರಿಸಿದ ವರ್ಷಧಾರೆ ! 5
4.ಮನಸಾಗಿದೆ ಚಿತ್ರದ ನಾಯಕಿ ಮೋಡವನ್ನು ಧರಿಸಿದ್ದಾಳೆ 3
5.ಮದಗದ ಕೆರೆ ಎಂದೊಡನೆ ನೆನಪಾಗುವ ಹಳ್ಳಿಯ ಹಾಡು 9
6."ಹೃದಯದಲಿ ಇದೇನಿದು _ _ ಯೊಂದು ಓಡಿದೆ.... ", 2
7.ಚಂಡ _ _ _ 3
9.ಮೋಡದ ಘರ್ಷಣೆಯ ಬೆಳಕು ಇಲ್ಲಿ ತಿರುಗಿದೆ 2
11. ಸುನಾದ್ ರಾಜ್ ಮೋಡದ ಸರ ಅಲಂಕರಿಸಿದ್ದಾನೆ 4
13. ಮೊದಲ ಮಳೆ ಚಿತ್ರದ ಹಾಡಿನಲ್ಲಿ ಕಾಣಿಸಿಕೊಂಡ ಕಪ್ಪನೆಯ ಮೋಡ 5
15. ಡಾ.ರಾಜ್, ಸರಿತಾ, ಅಂಬಿಕಾ ಅಭಿನಯದಲ್ಲಿ ಮೇಘಗಳ ಹಾದು ಹೋಗುವಿಕೆ 8
17. ಮಾಜಿ ಮುಖ್ಯ ಮಂತ್ರಿಯೊಬ್ಬರ ಕಾದಂಬರಿಯ "ಚಕ್ರ ಮಾರುತ" 4



ವಿಜೇತರು: ಎಸ್.ಚಂದ್ರಹಾಸ, ನಂ.209, ಶ್ರೀ ಮಂಜುನಾಥ ನಿಲಯ, ಶಾಂತಿನಗರ, ಪಾಂಡವಪುರ.



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 527ರ ಉತ್ತರ

■	ಸು	ನಾ	ಮಿ	■	ಮಾ	ನ	ವ	ದಾ	ನ	ವ
ಪ್ರೇ	■	ದ	■	ಗ	■	ಮ್ಮೂ	■	ಹ	■	ನ
ಮ	■	ಮ	■	ಜೇಂ	■	ರ	■	■	■	ದೇ
ಪ್ರ	ಳ	ಯ	ರು	ದ್ರ	■	ಹ	ಸಿಂ	ಯ	ಜ	ವಿ
ಸಂ	■	■	■	■	■	ಮ್ಮೀ	■	■	■	■
ಗ	ಲ್ಲಾ	ಪೆ	ಟ್ಟಿ	ಗೆ	■	ರ	ಕ್ತ	ತಿ	ಲ	ಕ
■	■	■	■	ಲು	■	■	■	■	■	ಲ್ಲು
ನ	ಗು	ವ	ಹೂ	ವು	■	ಕ	ನ	ಕ	ದಾ	ಸ
ಮಾ	■	■	■	ನ	■	ಲ್ಯಾ	■	ನ್ಯಾ	■	ಕ್ಕ
ಗು	■	ಹೀ	■	ನ್ನ	■	ಣಿ	■	ದಾ	■	ರೆ
ಬಿ	ಸ	ರೋ	ಜಾ	ದೇ	ವಿ	■	ನ	ನ	ಸು	■

ಮೇಲಿನಿಂದ ಕೆಳಕ್ಕೆ

1.ರಮೇಶ್ - ಶಿಲ್ಪಾ ಅಭಿನಯದಿ ಮುಗಿಲಿನಲ್ಲಿ ಕಾಣಿಸಿಕೊಂಡ ಬೆಳಕು 6
2.ಪಶ್ಚಿಮ ಘಟ್ಟದ ಕಿಬ್ಬದಿಯ ಪ್ರದೇಶದಿ ಬೀಸಿದ ಗಾಳಿ ಸಂಗೀತಮಯ 6
3. 'ಲಾಲಿ' ಚಿತ್ರದ ಹಾಡಿನಲ್ಲಿ ಸುರಿದ ತಿಂಗಳೊಂದರ ವರ್ಷಧಾರೆ 4
4. ಮಣ್ಣಿನ ದೋಣಿಯ ಹಾಡೊಂದರ ಮೊದಲ ಸಾಲಿನಲ್ಲೇ ರಮೇಶ್ ಅಭಿನಯವಿದೆ 6
8. ತನುಷ್ - ಹರ್ಷಿಕಾ ಪೂಣಚ್ಚ ಪ್ರೀತಿಯಲ್ಲಿ ಎಬ್ಬಿದ 'ತರಂಗ' 2
10. ಗುಡುಗಿನೊಂದಿಗೆ ಆರ್ಭಟಿಸಿದ ಭಾನ ಅನಲ 3
12. ಮುಂಗಾರುವಿನಲ್ಲಿ ಡಾಲಿ ಧನಂಜಯ - ರಚಿತಾರಾಮ್ ಹಾಡಿದ ಹಾಡು 5
13. ವಿಶುಕುಮಾರ್ ನಿರ್ದೇಶನದ ತೀರ ಪ್ರದೇಶ 4
14. ತ್ರಿವೇಣಿ ಕಾದಂಬರಿಗೆ ಪುಟ್ಟಣ್ಣ ಕಣಗಾಲ್ ನಿರ್ದೇಶನವಿದೆ 4
15. "ಅಂಬಿಕಾ _ _ ತಾಳೇನು ಅಂಬಿಕಾ.....", 2
16. ನೀರಿನಲ್ಲಿ ಚಕ್ರಕಾರವಾಗಿ ಸುತ್ತುತಿದೆ 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರು ಮಿತ್ರ

ಕೆ.ವಿವೇಕಾನಂದ ಅವರಿಗೊಂದು ಅವಕಾಶ ಮಾಡಿಕೊಡಿ

ಶಿಕ್ಷಕರಲ್ಲಿ ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಹದಿನಾರು ಸತೀಶ್ ಮನವಿ

ತಿ.ನರಸೀಪುರ, ಮೇ 30– ಶಿಕ್ಷಕರ ಸಮಸ್ಯೆಗಳಿಗೆ ಸದಾ ಸ್ಪಂದಿಸುವ ಜೆಡಿಎಸ್, ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿ ಕೆ.ವಿವೇಕಾನಂದ ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತವನ್ನು ನೀಡಿ ಅವರನ್ನು ಗೆಲ್ಲಿಸುವಂತೆ ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಹದಿನಾರು ಸತೀಶ್ ಶಿಕ್ಷಕರಲ್ಲಿ ಮನವಿ ಮಾಡಿದರು.

ವರುಣ ಕ್ಷೇತ್ರದ ಕೂಡ್ಲೂರು ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ವಿಧಾನ ಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್, ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮತಯಾಚಿಸಿ ಮಾತನಾಡಿದ ಅವರು, ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ನಾಲ್ಕು ಬಾರಿ ಗೆದ್ದು ಶಿಕ್ಷಕರ ಸಮಸ್ಯೆ ಬಗೆಹರಿಸುವಲ್ಲಿ ವಿಫಲರಾಗಿದ್ದಾರೆ. ನಮ್ಮ ಅಭ್ಯರ್ಥಿ ಕೆ.ವಿವೇಕಾನಂದ ಅವರು ಶಿಕ್ಷಕರ ಸಮಸ್ಯೆಗಳನ್ನು ಅರಿತು, ಸಮಸ್ಯೆ ಬಗೆಹರಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಿಕ್ಷಕರ ಕ್ಷೇತ್ರದಲ್ಲಿ ಪ್ರಜ್ಞಾವಂತ ಮತದಾರರಿದ್ದು, ಈ ಬಾರಿ ಮೈತ್ರಿಕೂಟದ ಅಭ್ಯರ್ಥಿ ಕೆ.ವಿವೇಕಾನಂದ ಅವರನ್ನು ಗೆಲ್ಲಿಸುವ ಮೂಲಕ ಅವರಿಗೂ ಒಂದು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.ಶಿಕ್ಷಕರ ಬೇಡಿಕೆಗಳನ್ನು ಈಡೇರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ನೂತನ ಶಿಕ್ಷಣ ನೀತಿ ಕೈ ಬಿಟ್ಟು ಹಳೇ ಪದ್ಧತಿ ಆರಂಭಿಸಿರುವುದು ಸರಿಯಲ್ಲ. ಶಿಕ್ಷಣದಲ್ಲಿ ರಾಜಕೀಯ ಮಾಡುತ್ತಿರುವ ಈ ಸರ್ಕಾರಕ್ಕೆ ಚುನಾವಣೆಯ ಫಲಿತಾಂಶದ ಮೂಲಕ ಉತ್ತರ ಕೊಡಬೇಕೆಂದು ಶಿಕ್ಷಕರಲ್ಲಿ ಮನವಿ ಮಾಡಿದರು.



ಕೆ.ವಿವೇಕಾನಂದ ಪರ ಸತೀಶ್ ಮತಯಾಚಿಸಿದರು.

ಬಿಜೆಪಿ ಹಿರಿಯ ಮುಖಂಡ ಸುರೇಶ್ ಬಾಬು ಮಾತನಾಡಿ, ನಾವು ಕಳೆದ ಬಾರಿ ಬಿಜೆಪಿ ಪಕ್ಷದಿಂದ ಅಭ್ಯರ್ಥಿ ಕಣಕ್ಕಿಳಿಸಿದ್ದೇವು. ಈ ಬಾರಿ ಜೆಡಿಎಸ್, ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಕೆ.ವಿವೇಕಾನಂದ ಅವರನ್ನು ಕಣಕ್ಕಿಳಿಸಿರುವುದರಿಂದ ನಮ್ಮ ಅಭ್ಯರ್ಥಿ ಗೆಲುವು ಸುಲಭವಾಗಿದೆ. ಆದ್ದರಿಂದ ಪ್ರಬುದ್ಧ ಮತದಾರರು ಪ್ರಥಮ ಪ್ರಾಶಸ್ತ್ಯದ ಮತವನ್ನು ನೀಡಿ ವಿವೇಕಾನಂದ ಅವರನ್ನು ಗೆಲ್ಲಿಸಬೇಕು ಎಂದರು.

ಪ್ರಧಾನಿ ಮೋದಿ ಅವರು ತಮ್ಮ 10 ವರ್ಷಗಳ ಅಧಿಕಾರಾವಧಿಯಲ್ಲಿನ ಅಭಿವೃದ್ಧಿ ಕಾರ್ಯಗಳನ್ನು ಗಮನಿಸಿ, ದೇಶದ ಹಿತದೃಷ್ಟಿಯಿಂದ ಮೈತ್ರಿಕೂಟದ ಅಭ್ಯರ್ಥಿಗೆ ಮತ ನೀಡುವಂತೆ ಮನವಿ ಮಾಡಿದರು.

> “ಬಿಜೆಪಿ, ಜೆಡಿಎಸ್ ಒಂದಾಗಿರುವುದರಿಂದ ಕಾಂಗ್ರೆಸ್ ವಲಯದಲ್ಲಿ ನಡುಕ ಹುಟ್ಟಿದೆ. ಬಿಜೆಪಿ–ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಆಗಿರುವಷ್ಟು ಅಭಿವೃದ್ಧಿ ಕಾರ್ಯಗಳು ಹಿಂದೆಂದೂ ಆಗಿಲ್ಲ. ಮಹಿಳಾ ಕಾಲೇಜುಗಳನ್ನು ಆರಂಭಿಸಿದ ಕೀರ್ತಿ ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಬಿ.ಎಸ್.ಯಡಿಯೂರಪ್ಪರವರಿಗೆ ಸಲ್ಲುತ್ತದೆ.
> - ವಾಸುದೇವ್.
> ಟಿಎಪಿಸಿಎಂಎಸ್ ನಿರ್ದೇಶಕ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ನಾವು ಭಾರತೀಯರು ಎಂದು ಹೇಳಲು ಹೆಮ್ಮೆಯಾಗುವಂತೆ ಪ್ರಧಾನಿ ನರೇಂದ್ರ ಮೋದಿ ಕೆಲಸ ಮಾಡಿ ತೋರಿಸಿದ್ದಾರೆ ಎಂದರು.

ಈ ವೇಳೆ ಜಿಲ್ಲಾ ಕಾರ್ಯದರ್ಶಿ ಕೆ.ವಾಸುದೇವ್, ಕಾರ್ಯದರ್ಶಿ ಅಲಗೂಡು ವೆಂಕಟರಮಣಶೆಟ್ಟಿ, ಎಸ್‌ಟಿ ಮೋರ್ಚಾ ಗ್ರಾಮಾಂತರ ಅಧ್ಯಕ್ಷ ಮುದ್ದುಕೃಷ್ಣ, ಡೈರಿ ಅಧ್ಯಕ್ಷ ಡಿ.ಎಲ್.ಮಹದೇವಪ್ಪ ಹಿರಿಯ ಮುಖಂಡ ಪರಶುರಾಮಪ್ಪ, ಚೆನ್ನೇಗೌಡ, ಶಿಕ್ಷಕರಾದ ಸಿರಾಜ್ ಉರ್ ರಹಮಾನ್, ಬಿ.ಎಂ.ದೇವರಾಜು, ಸಿ.ಪ್ರಸನ್ನ, ಎಲ್ಲಪ್ಪ ಬಸಪ್ಪ ಬಂಗಾರಿ, ಸುಜಾತ, ನಾಗಮ್ಮ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಂ ಗಂ ಗಣೇಶ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗ್ಯಾಂಗ್ಸ್ ಆಫ್ ಗೋಧಾವರಿ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮ್ಯಾಟ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಹಿಟ್‌ಲಿಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಗರುಡನ್ (ತ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನೈಟ್ ಕರ್ಫ್ಯೂ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಥಾಲವನ್ (ಮ): ಬೆ.11.15ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.2ಕ್ಕೆ, ಹಿಟ್ ಲಿಸ್ಟ್ (ತ): ಸಂ.4.15ಕ್ಕೆ, ಗ್ಯಾಂಗ್ಸ್ ಆಫ್ ಗೋಧಾವರಿ (ತೆ): ರಾ.7ಕ್ಕೆ, ಗಂ ಗಂ ಗಣೇಶ (ತೆ): ರಾ.9.55ಕ್ಕೆ.
ಸ್ಕ್ರೀನ್ 2	ಗರುಡನ್ (ತ): ಬೆ.11ಕ್ಕೆ, ಮ.1.45ಕ್ಕೆ, ಭಜೆ ವಾಯು ವೇಗಂ (ತೆ): ಸಂ.4.35ಕ್ಕೆ, ಮಂದಾಕಿನಿ (ಮ): ರಾ.7.20ಕ್ಕೆ, ಅರನ್‌ಮನೈ 4 (ಹಿಂ): ರಾ.10ಕ್ಕೆ.
ಸ್ಕ್ರೀನ್ 3	ಛೋಟಾ ಭೀಮ್ ಅಂಡ್ ದಿ ಕರ್ಸ್ (ಹಿಂ): ಬೆ.10.35ಕ್ಕೆ, ಸಂ.4.25ಕ್ಕೆ, ಟರ್ಬೋ (ಮ): ಮ.1.25ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.7.05ಕ್ಕೆ, ಒನ್ಸ್ ಅಪೋನ್ ಎ ಟೈಂ ಇನ್ ಕೊಚ್ಚಿ (ಮ): ರಾ.10ಕ್ಕೆ.
ಸ್ಕ್ರೀನ್ 4	ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಭಾರಿ ಮಳೆ: ತಂಬಾಕು, ಶುಂಠಿ ಬೆಳೆಗೆ ಹಾನಿ



ಬೆಟ್ಟದಪುರ, ಮೇ 30– ಗ್ರಾಮದಲ್ಲಿ ಗುರುವಾರ ಸಂಜೆ ಸುರಿದ ಭಾರಿ ಮಳೆಗೆ ತಂಬಾಕು, ಶುಂಠಿ ಬೆಳೆ ಹಾನಿಯಾಗಿದೆ.

ಈ ಭಾಗದಲ್ಲಿ ಈಗಾಗಲೇ ರೈತರು ತಂಬಾಕು, ಶುಂಠಿ ಬೆಳೆ ನಾಟಿ ಮಾಡಿದ್ದು, ಮೇಲ್ಭಾಗದ ಗೊಬ್ಬರ ಕೊಟ್ಟು ಉಳುಮೆ ಮಾಡಲು ಸಿದ್ಧತೆ ಮಾಡಿಕೊಂಡಿದ್ದರು. ಆದರೆ ಇಂದು ಸಂಜೆ ಭಾರಿ ಮಳೆಯಿಂದ ಬೆಳೆಗಳು ಜಲಾವೃತ್ತವಾಗಿ ರೈತರು ಉಳುಮೆ ಮಾಡಲು ತೊಂದರೆಯಾಗಿದ್ದು, ಇದರಿಂದ ಇನ್ನೂ ನಾಲ್ಕೈದು ದಿನ ಉಳುಮೆ ಮಾಡದಂತಾಗಿದೆ. ಜೂನ್ ತಿಂಗಳಲ್ಲಿ ಮಳೆ ಹೆಚ್ಚಾದರೆ ರೈತರು ಹೆಚ್ಚಿನ ಆದಾಯ ಗಳಿಸಲು ಕಷ್ಟವಾಗುತ್ತದೆ ಎನ್ನಲಾಗಿದೆ.

ಗೋಳೂರು ಹಾಡಿಗೆ ಅಧಿಕಾರಿಗಳ ಭೇಟಿ, ಪರಿಶೀಲನೆ

ಸೋಲಾರ್, ಕುಡಿಯುವ ನೀರಿನ ಸಮಸ್ಯೆ ಇತ್ಯರ್ಥ

ಹೆಚ್.ಡಿ.ಕೋಟೆ, ಮೇ 30– ಇತ್ತೀಚೆಗೆ ಮೂಲ ಸೌಕರ್ಯಕ್ಕೆ ಒತ್ತಾಯಿಸಿ ತಾಲೂಕಿನ ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯ ಗೋಳೂರು ಹಾಡಿ ಆದಿವಾಸಿಗಳು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಅಧಿಕಾರಿಗಳು ಹಾಡಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಮೂಲ ಸೌಕರ್ಯಕ್ಕೆ ಒತ್ತಾಯಿಸಿ ಆದಿವಾಸಿಗಳು ಪ್ರತಿಭಟನೆ ನಡೆಸಿದ ಸುದ್ದಿ ವರದಿಯಾದ ಹಿನ್ನೆಲೆಯಲ್ಲಿ ಗೋಳೂರು ಹಾಡಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಜಿ.ಆರ್.ಮಹೇಶ್, ಸರಗೂರು ಚೆಸ್ಕಾಂ ಎಇಇ ದೀಪಕ್ ಭೇಟಿ ನೀಡಿ ಪ್ರತಿ ಮನೆಗೂ ತೆರಳಿ ಸಮಸ್ಯೆ ಆಲಿಸಿ, ಪರಿಶೀಲನೆ ನಡೆಸಿದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಜಿ.ಆರ್.ಮಹೇಶ್ ಮಾತನಾಡಿ, 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಸುದ್ದಿ ವರದಿಯಾದ ಹಿನ್ನೆಲೆಯಲ್ಲಿ ತಕ್ಷಣ ಗೋಳೂರು ಹಾಡಿಗೆ ಚೆಸ್ಕಾಂ ಅಧಿಕಾರಿಗಳೊಡನೆ ಭೇಟಿ ನೀಡಿ ಪರಿಶೀಲಿಸಿದ್ದೇವೆ. ಈ ವೇಳೆ ಅತೀ ಹೆಚ್ಚು ಮಳೆಯಾಗಿದ್ದರಿಂದ ಸೋಲಾರ್ ಬ್ಯಾಟರಿಗಳು ಚಾರ್ಜ್ ಆಗುತ್ತಿರಲಿಲ್ಲ. ಅದನ್ನು ಸರಿಪಡಿಸಿ ಸೋಲಾರ್ ದೀಪ ಬರುವ ಹಾಗೆ ಮಾಡಿದ್ದೇವೆ. ಇನ್ನು 11 ಮನೆಗಳಲ್ಲಿ ಸಂಪೂರ್ಣ ಬ್ಯಾಟರಿ, ಇನ್ವರ್ಟರ್ ಸಮಸ್ಯೆಗಳಿದ್ದು, ಈ ಬಗ್ಗೆ ಬಾಂಬೆಯ ನವ್ಯ ಟೆಕ್ನಾಲಜಿ ಅವರಿಗೆ ತಿಳಿಸಿದ್ದು, ಸದ್ಯದಲ್ಲೇ ಸರಿಪಡಿಸಲಾಗುವುದು. ಹಾಡಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಾಗಿದೆ. ಸೋಲಾರ್‌ಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ ಎಂದರು.



ಗೋಳೂರು ಹಾಡಿಗೆ ಅಧಿಕಾರಿಗಳು ಭೇಟಿ ನೀಡಿರುವುದು.

ಆದಿವಾಸಿ ಮಹಿಳೆ ಗೌರಿ ಮಾತನಾಡಿ, ಸೋಲಾರ್ ಸಮಸ್ಯೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವಂತೆ ಪಿಡಿಓ ದೇವರಾಜ್ ಅವರಿಗೆ ಸಾಕಷ್ಟು ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಪತ್ರಿಕೆಯಲ್ಲಿ ಸುದ್ದಿ ವರದಿಯಾದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಪರಿಶಿಷ್ಟ ಕಲ್ಯಾಣ ವರ್ಗಗಳ ಅಧಿಕಾರಿಗಳು, ಚೆಸ್ಕಾಂ ಅಧಿಕಾರಿಗಳು ಭೇಟಿ ನೀಡಿದರೂ ಪಿಡಿಓ ಸ್ಥಳಕ್ಕೆ ಬಾರದಿರುವುದು ನಿಜಕ್ಕೂ ಬೇಸರದ ಸಂಗತಿ. ಹೀಗಾಗಿ ಪಿಡಿಓ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿದರು. ಈ ವೇಳೆ ಸರಗೂರು ಚೆಸ್ಕಾಂ ಎಇಇ ದೀಪಕ್, ಎಇ ವೆಂಕಟೇಶ್, ಪರಿಶಿಷ್ಟ ಕಲ್ಯಾಣ ವರ್ಗಗಳ ಕಚೇರಿ ನಾಗರಾಜ್, ಲೈನ್‌ಮೆನ್ ರಾಜು, ಆದಿವಾಸಿಗಳಾದ ಗಂಗೆ, ಗೌರಮ್ಮ, ಸುಶೀಲ, ದೇವಿ, ಸುಂದ್ರಿ, ಸಣ್ಣಪ್ಪ ಇನ್ನಿತರರಿದ್ದರು.

ಇಂದು ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ

ಹುಣಸೂರು, ಮೇ 30– ನಗರದ ಸರ್ಕಾರಿ ಮಹಿಳಾ ಪದವಿ ಕಾಲೇಜಿನಲ್ಲಿ 2023–24ನೇ ಸಾಲಿನ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭ ಮೇ 31 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಪಾಂಶ್ರಪಾಲ ಪುಟ್ಟಶೆಟ್ಟಿ ತಿಳಿಸಿದ್ದಾರೆ. ಮುಖ್ಯ ಭಾಷಣಕಾರರಾಗಿ ಚಿತ್ರ ನಿರ್ದೇಶಕ, ಬರಹಗಾರ ಭಾರ್ಗವ, ಮುಖ್ಯ ಅತಿಥಿಗಳಾಗಿ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಹೆಚ್.ಎಂ.ವಿಜಯಲಕ್ಷ್ಮಿ ಆಗಮಿಸುತ್ತಿದ್ದು, ಪ್ರಾಂಶುಪಾಲ ಪುಟ್ಟಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮ ದಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮಹೇಶಾರಧ್ಯ, ಹಿರಿಯ ಪ್ರಾಧ್ಯಾಪಕ ರಾಜಶೇಖರನ್, ರೆಡ್‌ಕ್ರಾಸ್ ಸಂಸ್ಥೆ ಸಂಚಾಲಕ ಡಾ.ಬೋಪಯ್ಯ, ನಿವೃತ್ತ ಪ್ರಾಧ್ಯಾಪಕ ಡಾ.ಸತೀಶ್ ಚಂದ್ರ, ಸಾಂಸ್ಕೃತಿಕ ಸಮಿತಿ ಸಂಚಾಲಕ ಡಾ.ವಿಜಯಕುಮಾರ್, ಎನ್‌ಎಸ್‌ಎಸ್ ಘಟಕದ ಸಂಚಾಲಕ ಡಾ.ಪ್ರಸನ್ನ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಡಾ.ಯತೀಂದ್ರ, ವಿಜಯ್‌ಕುಮಾರ್‌ರನ್ನು ಎಂಎಲ್‌ಸಿ ಮಾಡಿ

ತಿ.ನರಸೀಪುರ, ಮೇ 30– ತಂದೆಗಾಗಿ ಕ್ಷೇತ್ರ ಬಿಟ್ಟುಕೊಟ್ಟು ಪಕ್ಷ ಸಂಘಟನೆಯಲ್ಲಿ ತೊಡಗಿರುವ ಮಾಜಿ ಶಾಸಕ ಡಾ. ಯತೀಂದ್ರ ಹಾಗೂ ಕಳೆದ ಹತ್ತಾರು ವರ್ಷಗಳಿಂದ ಪಕ್ಷಕ್ಕಾಗಿ ದುಡಿಯುತ್ತಿರುವ ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಬೇಕು ಎಂದು ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್. ಸಿದ್ದಾರ್ಥ ಒತ್ತಾಯಿಸಿದರು.



ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಡಾ.ಯತೀಂದ್ರ ಅವರು ತಮ್ಮ ತಂದೆ ಸಿದ್ದರಾಮಯ್ಯ ಅವರ ಸ್ಪರ್ಧೆಗಾಗಿ ವರುಣ ಕ್ಷೇತ್ರ ಬಿಟ್ಟು ಕೊಟ್ಟು ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುವ ಮೂಲಕ ಪಕ್ಷದ ಗೆಲುವಿಗೆ ತಮ್ಮದೇ ಆದ ಕೊಡುಗೆ ನೀಡಿ ದ್ದಾರೆ. ಇನ್ನು ಕಳೆದ 10 ವರ್ಷಗಳಿಂದ ಯಾವುದೇ ಪ್ರತಿಫಲಾ ಪೇಕ್ಷೆ ಇಲ್ಲದೇ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿರುವ ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್ ಅವರನ್ನು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆ ಮಾಡಬೇಕು. ಇಬ್ಬರಿಗೂ ಅವಕಾಶ ಮಾಡಿಕೊಟ್ಟಲ್ಲಿ ಕ್ಷೇತ್ರ ಮತ್ತಷ್ಟು ಅಭಿವೃದ್ಧಿ ಹೊಂದಲಿದೆ ಎಂದು ತಿಳಿಸಿದರು.

ಆಕಸ್ಮಿಕ ಬೆಂಕಿ: ಪೈಪ್‌ಗಳು ಭಸ್ಮ, ಲಕ್ಷಾಂತರ ರೂ. ನಷ್ಟ



ನಂಜನಗೂಡು, ಮೇ 30– ಆಕಸ್ಮಿಕ ಬೆಂಕಿ ತಗುಲಿ ಜಲಜೀವನ್ ಮಿಷನ್ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಕೆಲಸಕ್ಕಾಗಿ ಸಂಗ್ರಹಿಸಿಡಲಾಗಿದ್ದ ಪೈಪ್‌ಗಳು ಭಸ್ಮವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿರುವ ಘಟನೆ ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ನಡೆದಿದೆ. ಗ್ರಾಮದ ಜೆಎಸ್‌ಎಸ್ ಕಾಲೇಜಿನ ಹಿಂಭಾಗದಲ್ಲಿರುವ ಟೀಚರ್ ಕಾಲೋನಿಯಲ್ಲಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಪೈಪ್‌ಗಳನ್ನು ಇಡಲಾಗಿತ್ತು. ಆದರೆ ಗುರುವಾರ ಮಧ್ಯಾಹ್ನ ಆಕಸ್ಮಿಕವಾಗಿ ಬೆಂಕಿ ತಗುಲಿದ್ದು, ಪೈಪ್‌ಗಳು ಸಂಪೂರ್ಣ ಸುಟ್ಟುಹೋಗಿವೆ. ಇದರಿಂದ ಸುಮಾರು 10 ಲಕ್ಷಕ್ಕೂ ಹೆಚ್ಚಿನ ನಷ್ಟ ಉಂಟಾಗಿದೆ. ಅಲ್ಲದೇ ಘಟನೆಯಿಂದ ಸ್ಥಳೀಯ ನಿವಾಸಿಗಳಲ್ಲಿ ಆತಂಕ ಎದುರಾಗಿತ್ತು. ದುರದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಸ್ಥಳಕ್ಕೆ ಡಿವೈಎಸ್ಪಿ ರಘು, ಹುಲ್ಲಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ಚೇತನ್‌ಕುಮಾರ್, ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಾಂಗಲ್ಯ ಸರ ಕಸಿದು ಪರಾರಿ

ನಂಜನಗೂಡು, ಮೇ 30– ಕಳ್ಳರು ಮಹಿಳೆಯ ಮಾಂಗಲ್ಯ ಸರ ಕಸಿದು ಪರಾರಿ ಯಾಗಿರುವ ಘಟನೆ ನಗರದ ಟಿಎಪಿಸಿಎಂಎಸ್ ಗೋದಾಮು ಬಳಿ ಬುಧವಾರ ರಾತ್ರಿ ನಡೆದಿದೆ.

ನೀಲಕಂಠನಗರದ ನಿವಾಸಿ ಶ್ರೀನಿವಾಸ್ ಅವರ ಪತ್ನಿ ಗೀತಾ ಮಾಂಗಲ್ಯ ಕಳೆದುಕೊಂಡವರು. ಈಕೆ ನಗರದ ಟಿಎಪಿಸಿಎಂಎಸ್ ಗೋದಾಮಿನ ಬಳಿ ನಡೆದುಕೊಂಡು ಬರುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತರು ಗೀತಾ ಅವರ ಕತ್ತಿನಲ್ಲಿದ್ದ 30 ಗ್ರಾಂ ಮಾಂಗಲ್ಯ ಸರ ಕಸಿದು ಪರಾರಿಯಾಗಿದ್ದಾರೆ. ನಂಜನಗೂಡು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರದಲ್ಲಿ ನಿತ್ಯ ಸರಗಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದ್ದರೂ ಪೊಲೀಸರು ಕಳ್ಳತನ ತಡೆಗಟ್ಟುವಲ್ಲಿ ವಿಫಲರಾಗಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿದ್ಯಾರ್ಥಿಗಳು ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಲು ಸಲಹೆ

ತಿ.ನರಸೀಪುರ, ಮೇ 30– ಪ್ರಸ್ತುತ ಶಿಕ್ಷಣಕ್ಕೆ ಪೂರಕವಾದ ಎಲ್ಲಾ ಅಗತ್ಯ ಸೌಲಭ್ಯಗಳು ಸಿಗುತ್ತಿದ್ದು, ಅವುಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದುವತ್ತ ಹೆಚ್ಚು ಗಮನ ಹರಿಸುವಂತೆ ಕಾಲೇಜು ಶಿಕ್ಷಣ ಇಲಾಖೆ ವಿಶ್ರಾಂತ ನಿರ್ದೇಶಕ ಪ್ರೊ.ಎಸ್.ಬಿ. ಅಪ್ಪಾಜಿಗೌಡ ಕರೆ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2023–24ನೇ ಸಾಲಿನ ಸಾಂಸ್ಕೃತಿಕ, ಕ್ರೀಡೆ, ರಾಸೇಯೋ, ಸ್ಕೌಟ್ಸ್ ಅಂಡ್ ಗೈಡ್ಸ್, ಯೂತ್ ರೆಡ್‌ಕ್ರಾಸ್ ಚಟುವಟಿಕೆಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಕಾಲದಲ್ಲಿ ಶಿಕ್ಷಣ ಪಡೆಯಲು ನಮಗೆ ಆರ್ಥಿಕ ಸಮಸ್ಯೆ ಸೇರಿದಂತೆ ಅಗತ್ಯ ಸೌಲಭ್ಯ ಸಿಗುತ್ತಿರಲಿಲ್ಲ. ಓದುವ ವಾತಾವರಣವನ್ನು ನಾವೇ ಸೃಷ್ಟಿಸಿಕೊಂಡು ಓದುವ ಅನಿವಾರ್ಯತೆ ಇತ್ತು. ಆದರೆ ಇಂದು ಶಿಕ್ಷಣ ಉನ್ನತೀಕರಣಗೊಂಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಮುಂದುವರಿದಿದೆ. ವ್ಯಕ್ತಿತ್ವ ಬೆಳವಣಿಗೆ, ಶಿಕ್ಷಣ, ಅಧ್ಯಯನ ವಾತಾವರಣ ಸೇರಿದಂತೆ ಎಲ್ಲಾ ಶೈಕ್ಷಣಿಕ ಸೌಲಭ್ಯಗಳು ದೊರಕುತ್ತಿವೆ. ಅದರ ಸದ್ಬಳಕೆ ಮಾಡಿಕೊಳ್ಳುವತ್ತ ನಿಮ್ಮ ಗಮನವಿರಲಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.



ಬಿಜಾಪುರ ಅಕ್ಕಮಹಾದೇವಿ ಮಹಿಳಾ ವಿವಿ ವಿಶ್ರಾಂತ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ ಮಾತನಾಡಿದರು. ಇದೇ ವೇಳೆ ಕಳೆದ ಸಾಲಿನಲ್ಲಿ ಗ್ರಂಥಾಲ ಸದ್ಬಳಕೆ ಮಾಡಿಕೊಂಡ ವಿದ್ಯಾರ್ಥಿಗಳನ್ನು ಗ್ರಂಥಪಾಲಕ ಡಾ.ಎಂ.ಬಿ.ಪುಟ್ಟಸ್ವಾಮಿ ಅಭಿನಂದಿಸಿದರು. ವಿವಿಧ ಕ್ರೀಡೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.


ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ವಿ.ಉದಯಕುಮಾರ್, ಸಾಂಸ್ಕೃತಿ ಸಮಿತಿ ಸಂಚಾಲಕ ದೇವರಾಜೇಗೌಡ, ಡಾ.ಕವಿತಾ, ಮಹೇಶ್, ಡಾ.ಎಂ.ಕೆ.ಮಾಧವಿ, ಡಾ.ಸಂಪತ್ ಕುಮಾರ್, ಹೇಮಂತ್ ಕುಮಾರ್ ಇದ್ದರು.

ಚುನಾವಣೆಯಲ್ಲಿ ಮರಿತಿಬ್ಬೇಗೌಡರನ್ನು ಗೆಲ್ಲಿಸಿ

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮನವಿ

ಹುಣಸೂರು, ಮೇ 30– ಶಿಕ್ಷಕ, ಶಿಕ್ಷಣ ಇಲಾಖೆ ಶ್ರೇಯೋಭಿವೃದ್ಧಿಗಾಗಿ 4 ಬಾರಿ ಆಯ್ಕೆಯಾಗಿ ನಿಸ್ವಾರ್ಥ ಸೇವೆ ಸಲ್ಲಿಸಿರುವ ದಕ್ಷಿಣ ಪದವೀಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರನ್ನು ಚುನಾವಣೆಯಲ್ಲಿ ಗೆಲ್ಲಿಸುವಂತೆ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಮನವಿ ಮಾಡಿದರು.

ಗುರುವಾರ ನಗರದ ಎಲ್ಲಾ ಶಾಲಾ ಕಾಲೇಜುಗಳಿಗೆ ಕಾಂಗ್ರೆಸ್ ಮುಖಂಡರೊಂದಿಗೆ ಭೇಟಿ ನೀಡಿ ಮರಿತಿಬ್ಬೇಗೌಡರ ಪರ ಮತಯಾಚಿಸಿ ಮಾತನಾಡಿದ ಅವರು, ಮರಿತಿಬ್ಬೇಗೌಡರು 4 ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಿ ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ನ್ಯೂನ್ಯತೆಗಳ ಬಗ್ಗೆ ಪ್ರಶ್ನಿಸಿ, ತಿದ್ದುಪಡಿ ತರಲು ಅವಿರತ ಶ್ರಮವಹಿಸಿ, ನಿರಂತರ ಹೋರಾಟ ಮಾಡಿದ ಧೀಮಂತ ನಾಯಕ. ಶಿಕ್ಷಕರು ಹಾಗೂ ಶಿಕ್ಷಣ ಕ್ಷೇತ್ರದ ಆಗು ಹೋಗುಗಳನ್ನು ಅರಿತು ಅವುಗಳ ಪರಿಹಾರಕ್ಕೆ ಅತ್ಯಂತ ನುರಿತ ಅನುಭವಿಯಾಗಿರುವ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು.



ಮರಿತಿಬ್ಬೇಗೌಡರ ಪರ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮತಯಾಚಿಸಿದರು.

ಕಾಂಗ್ರೆಸ್ ಅಧ್ಯಕ್ಷ ಟಿ.ವಿ.ನಾರಾಯಣ್, ರಮೇಶ್, ಕಾರ್ಯಾಧ್ಯಕ್ಷ ವಕೀಲ ಪುಟ್ಟರಾಜ್, ಮಾಜಿ ಅಧ್ಯಕ್ಷ ಬಸವರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ರವಿಗೌಡ, ಮಾಜಿ ದರಖಾಸ್ತು ಸಮಿತಿ ಸದಸ್ಯ ಚಿಕ್ಕಸ್ವಾಮಿ, ಮುಖಂಡರಾದ ಪ್ರೇಮ್ ಕುಮಾರ್, ಕುಮಾರ್, ರಾಘು, ರಾಜು, ಶಿವರಾಜೇಗೌಡ, ಕೃಷ್ಣ, ಬಾಬು, ಗೋಪಿ, ಸತೀಶ್, ಚೇತನ್ ಸೇರಿದಂತೆ ಇನ್ನಿತರರಿದ್ದರು.

ಬಿಳಿಕೆರೆಯಲ್ಲೂ ಮತಯಾಚನೆ: ತಾಲೂಕಿನ ಬಿಳಿಕೆರೆ ಪದವಿ ಕಾಲೇಜು, ಪದವಿ ಪೂರ್ವ ಕಾಲೇಜು ಪ್ರೌಢಶಾಲೆ, ವಿದ್ಯಾವಾರಿಧಿ, ಅರಳುಮಲ್ಲಿಗೆ ಶಾಲೆಗೆ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಭೇಟಿ ನೀಡಿ ಮರಿತಿಬ್ಬೇಗೌಡರ ಪರ ಮತಯಾಚನೆ ಮಾಡಿದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಸೋಮಶೇಖರ್,ಪ್ರೇಮ್ ಕುಮಾರ್, ಕುಮಾರ್, ರಾಜು, ಬಾಬು ಸೇರಿದಂತೆ ಇತರರಿದ್ದರು.

ವಿವೇಕಾನಂದ ಪರ ಹರ್ಷವರ್ಧನ್ ಮತಯಾಚನೆ

ನಂಜನಗೂಡು, ಮೇ 30– ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ, ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮಾಜಿ ಶಾಸಕ ಬಿ.ಹರ್ಷವರ್ಧನ್ ತಾಲೂಕಿನ ಹೆಗ್ಗಡಹಳ್ಳಿ, ಹುಲ್ಲಹಳ್ಳಿ, ಕಳಲೆ ಗ್ರಾಮಗಳ ಪ್ರೌಢಶಾಲೆಗಳಲ್ಲಿ ಮತಯಾಚಿಸಿದರು.



ದಕ್ಷಿಣ ಶಿಕ್ಷಕರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮಾಜಿ ಶಾಸಕ ಬಿ.ಹರ್ಷವರ್ಧನ್ ಮತಯಾಚಿಸಿದರು.

ಈ ವೇಳೆ ಮಾತನಾಡಿದ ಅವರು, ಪ್ರಧಾನಿ ಮೋದಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ನನ್ನ ಅಧಿಕಾರವಧಿಯಲ್ಲೂ 15 ಕೋಟಿಗೂ ಹೆಚ್ಚಿನ ಅನುದಾನದಲ್ಲಿ 150ಕ್ಕೂ ಹೆಚ್ಚು ಶಾಲಾ ಕೊಠಡಿ ದುರಸ್ತಿ ನಡೆಸಿದ್ದೇನೆ. ಹುಲ್ಲಹಳ್ಳಿಯಲ್ಲಿ ಪ್ರಥಮ ದರ್ಜೆ ಕಾಲೇಜು ಕಟ್ಟಡ, ನಗರದ ನಾಗಮ್ಮ ಶಾಲೆ ಆವರಣದಲ್ಲಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಕಟ್ಟಡಕ್ಕೆ ಅನುದಾನ ನೀಡಿದ್ದೇನೆ. ಹೆಮ್ಮರಗಾಲದಲ್ಲಿ 2 ಕೋಟಿ ವೆಚ್ಚದಲ್ಲಿ ಪಬ್ಲಿಕ್ ಶಾಲೆ ಕಟ್ಟಡ ನಿರ್ಮಿಸಲಾಗಿದೆ. ಅಲ್ಲದೆ ಶಿಕ್ಷಕರಿಗೆ ಸುಸಜ್ಜಿತ ಗುರುಭವನ ನಿರ್ಮಾಣ ಮಾಡುವ ಸಂಕಲ್ಪದೊಂದಿಗೆ ಮಿನಿ ವಿಧಾನಸೌಧದ ಬಳಿ ಜಾಗ ಮಂಜೂರು ಮಾಡಿಸಿ 25 ಲಕ್ಷ ಅನುದಾನ ನೀಡಿದ್ದೇನೆ. ಜೊತೆಗೆ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ ಎಂದರು.

ಎನ್‌ಡಿಎ ಮೈತ್ರಿಕೂಟ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕೆ.ವಿವೇಕಾನಂದ ಸರಳ ಸಜ್ಜನ ವ್ಯಕ್ತಿಯಾಗಿದ್ದಾರೆ. ಅವರು ಶಿಕ್ಷಕರ ಸಮಸ್ಯೆಗಳಿಗೆ ಧ್ವನಿಯಾಗಿ ಕೆಲಸ ಮಾಡುವ ಮೂಲಕ ನಿಮ್ಮ ಸೇವೆ ಮಾಡಲಿದ್ದಾರೆ. ದಕ್ಷಿಣ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯ 5 ಜಿಲ್ಲೆಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಈ ಬಾರಿ ಕೆ.ವಿವೇಕಾನಂದ ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತಗಳನ್ನು ನೀಡಿ ಅವರನ್ನು ಜಯಶೀಲರನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ತಾಲೂಕು ಉಪಾಧ್ಯಕ್ಷ ಕಣೇನೂರು ಪರಶಿವಮೂರ್ತಿ, ಕಾರ್ಯದರ್ಶಿ ಪುಟ್ಟಸ್ವಾಮಿ, ಸಿದ್ದರಾಜು, ತಾಪಂ ಮಾಜಿ ಸದಸ್ಯರಾದ ಹೆಮ್ಮರಗಾಲ ಶಿವಣ್ಣ, ಹುಲ್ಲಹಳ್ಳಿ ಶಿವಣ್ಣ, ಮುಖಂಡರಾದ ಮಹೇಶ್ ಬಾಬು, ಗೋವಿಂದರಾಜು, ದೊಡ್ಡಂಕಶೆಟ್ಟಿ, ಮಲ್ಲಿಕಾರ್ಜುನ, ಶಂಕರ್, ಸೇರಿದಂತೆ ಹಲವರಿದ್ದರು.



ಹೃದಯಪೂರ್ವಕ ಅಭಿನಂದನೆಗಳು

ಮೈಸೂರಿನ ವನಿತಾ ಸದನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕಿಯಾಗಿ ಸುಮಾರು ಇಪ್ಪತ್ತೆಂಟು ವರ್ಷಗಳ ಕಾಲ ಸೇವೆ ಸಲ್ಲಿಸಿ ತದನಂತರದಲ್ಲಿ ಮೂರು ವರ್ಷಗಳ ಕಾಲ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ಈ ದಿನ ದಿನಾಂಕ **31-05-2024** ರಂದು ತಮ್ಮ ನಿವೃತ್ತಿ ಜೀವನದ ಕಡೆ ಪಾದಾರ್ಪಣೆ ಮಾಡುತ್ತಿರುವ **ಶ್ರೀಮತಿ. ನಾಗರತ್ನ. ಹೆಚ್** ರವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತಿರುವ



ಹೆಚ್. ನಾಗರತ್ನ
ಮುಖ್ಯ ಶಿಕ್ಷಕರು

ಮಕ್ಕಳಾದ ಶ್ರೀಮತಿ ವೀಣಾಶ್ರೀ. ಎಸ್ ಹಾಗೂ ಶ್ರೀಮತಿ ವಾಣಿಶ್ರೀ ಎಸ್. ಅಳಿಯಂದಿರಾದ ಶ್ರೀ.ಎಂ.ಎಸ್. ನರಸಿಂಹಮೂರ್ತಿ (ಪತ್ರ ಬರಹಗಾರರು ಹಾಗೂ ನೋಂದಣಿ ಸಲಹೆಗಾರರು) ಮತ್ತು ಶ್ರೀ.ಕುಮಾರ ಪಿ (ಪೊಲೀಸ್ ಇಲಾಖೆ) ಹಾಗೂ ಮೊಮ್ಮಕ್ಕಳಾದ ಸ್ಕಂದ. ಎನ್ ಭಟ್, ಸನ್ನಿಧಿ.ಎನ್.ಭಟ್, ಬೃತಿಶ್ರೀ. ಕೆ

ಬೇಕಾಗಿದ್ದಾರೆ

ಸುವಿಧಾ ಫುಡ್ ಪ್ರಾಡಕ್ಟ್ಸ್‌ಗೆ ಡ್ರೈವರ್ ಕಮ್ ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ. ಉತ್ತಮ ಸಂಬಳ ಹಾಗೂ ಪ್ರೋತ್ಸಾಹ ಧನವನ್ನು ಕೊಡಲಾಗುವುದು.
ಸ್ಥಳ : ದಟ್ಟಗಳ್ಳಿ, ಮೈಸೂರು,ಸಂಪರ್ಕಿಸಿ
6360380694

ದಿ ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ.,

ಚಾಮರಾಜ ಜೋಡಿ ರಸ್ತೆ, ಮೈಸೂರು.



ಶ್ರೀ ಡಿ.ನಾರಾಯಣಸ್ವಾಮಿ ನಾಯ್ಡುರವರು

ಶ್ರದ್ಧಾಂಜಲಿ

ಸಂಘದಲ್ಲಿ ಗೌರವಾನ್ವಿತ ಅಧ್ಯಕ್ಷರು, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಹಾಲಿ ನಿರ್ದೇಶಕರಾದ ಶ್ರೀ ಡಿ.ನಾರಾಯಣಸ್ವಾಮಿ ನಾಯ್ಡುರವರು ದಿನಾಂಕ: 30-05-2024ರಂದು ದೈವಾಧೀನರಾಗಿದ್ದು, ಇವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇವೆ. ಹಾಗೂ ಭಗವಂತನು ಇವರ ಕುಟುಂಬವರ್ಗದವರಿಗೆ ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುವ.

ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕ ಮಂಡಳ, ಸಿಬ್ಬಂದಿವರ್ಗ ಹಾಗೂ ಸದಸ್ಯರು, ದಿ ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ., ಚಾಮರಾಜ ಜೋಡಿ ರಸ್ತೆ, ಮೈಸೂರು.

PROPERTY FOR SALE

30x40
SITE PLUS BUILD TO SUIT HOMES IN GOKULAM
Brindavan Extention Mysore
PRICE STARTS From 1.65 Cr
for details call:
9663639876

FOR ADVERTISEMENT

STAR OF MYSORE 47
Please Call: 0821-2496522 / 23
Email: ad@starofmysore.com

ಮೈಸೂರು ಮಿತ್ರ 45
Please Call: 0821-2496522 / 23
Email: ad@mysurumithra.com

COMMERCIAL SITE FOR RENT / LEASE

Ring Road Facing,
CORNER SITE
at Hebbal, near
KRS Road - Ring Road
Approx - 7900sq.ft.,
SUITABLE FOR :
Godowns, Two Wheeler Showroom, Used Car Showrooms, Indoor Sports Complex, Sheds, Car Detailing, Restaurants, etc.,
Call : **94492 81232**

MUDA APPROVED SITES FOR SALE

30X40 & 30X50
EAST & WEST FACING AVAILABLE
READY FOR REGISTRATION
Location:
Adjacent J P Nagar, Mysuru
Price @ Rs 65 lakhs onwards
Call: 96200 99122

ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ
ನೀಸ&ಒಚ (ಪಶ್ಚಿಮ) ವಿಭಾಗ, ವಾಸನೀಸ ಆವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ : ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಟಿಎನ್-02/107/2024-25 ದಿನಾಂಕ: 30-05-2024

ಅಲ್ಪಾವಧಿ / ಪೂರ್ಣಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನದಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 5:30 ಗಂಟೆ ನಂತರ ಕೆಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಸಂಜೆ 4:30 ಗಂಟೆ ಒಳಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 4:30 ಗಂಟೆಯ ನಂತರ ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-1, Kw-2	12 ಸಂಖ್ಯೆಗಳು	131.95	01.06.2024	17.06.2024	19.06.2024
2	Kw-4	01 ಸಂಖ್ಯೆ	444.70	31.05.2024	07.06.2024	10.06.2024

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/- **ಕಾರ್ಯಪಾಲಕ ಅಭಿಯಂತರರು**, ನೀಸ&ಒಚ(ಪಶ್ಚಿಮ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

DTCP SITES FOR SALE

DTCP Sites
With RERA
Near Jayapura,
H.D. Kote Road, Mysore.
9590491194,9606783264

WANTED

DRIVERS
with Heavy Vehicle Licence for a reputed CBSE School in Mysore.
Call :
99450 38026
94498 09181


WANTED

LEAD THE WAY, JOIN OUR INNOVATIVE TECHNO SCHOOL
As HEAD MISTRESSES
Contact immediately
Jnana Gangothri Convent English Medium
Rajendra Nagara, Mysore
Mob: 9113980741

23 Gunta Agriculture Land for Sale in MAKANAHUNDI

North West Corner
Tar Road Approach
40 Coconut Trees
11 kms from Mysore City
Call 95385 83377

10ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎಸ್.ನಿಂಗಯ್ಯರವರು

ಉ॥ಪುರಿಭಟ್ಟಿ ಕರಿಯಪ್ಪ ವ್ಯಾಸರಾಜಪುರ (ಕೆಬ್ಬೆ)

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷಗಳು ಕಳೆದರೂ ನಿಮ್ಮ ನೆನಪಿನಲ್ಲಿಯೇ ಇದ್ದೇವೆ ಹಾಗೂ ನೀವು ತೋರಿಸಿಕೊಟ್ಟ ದಾರಿಯಲ್ಲೇ ನಡೆಯುತ್ತಿದ್ದೇವೆ. ನಿಮ್ಮ ದಿವ್ಯಾತ್ಮವು ಭಗವಂತನ ಪಾದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ

ದುಃಖತಪ್ತರು: ಶ್ರೀಮತಿ ನಾಗರತ್ನ ಎಂ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಭಾವ ಮೈದುನರು ಹಾಗೂ ಕುಟುಂಬವರ್ಗದವರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಜಯಮ್ಮ
ಶ್ರೀ ಯ॥ ನಿಂಗಚಾರ್‌ರವರ ಧರ್ಮಪತ್ನಿ


ಇವರು ದಿ. 20-5-2024ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರಕ್ರಿಯಾದಿ ಕಾರ್ಯವನ್ನು ದಿ. 31-5-2024 ಶುಕ್ರವಾರ ಮಧ್ಯಾಹ್ನ 12.30 ರಿಂದ 2.30ರವರೆಗೆ ನಮ್ಮ ಸ್ವಗೃಹ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಅರಸನಕೆರೆ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ, ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀ ಯಜಮಾನ್ ನಿಂಗಾಚಾರ್ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಎ.ಎನ್. ಸಿದ್ಧಪ್ಪಾಜಿ ವಿಶ್ವಕರ್ಮ, ಮೈಸೂರು ಜಿಲ್ಲಾ ವಿಶ್ವಕರ್ಮ ಅಭಿವೃದ್ಧಿ ನಿಗಮದ ನಾಮ ನಿರ್ದೇಶಕರು ಮತ್ತು ವಿಶ್ವಕರ್ಮ ಮಹಾಸಭಾದ ಮುಖಂಡರು ಎ.ಎನ್.ಬಸವರಾಜು ಮತ್ತು ಕುಟುಂಬವರ್ಗದವರು ಹಾಗೂ ಬಂಧುಮಿತ್ರರು.

Ambari DEVELOPERS

Vijayanagar 2nd Stage, Mysuru-17

MUDA APPROVED Site for Sale



SY No. 13/4, Gohalli Village, Ilavala Hobli, Mysuru
Near Suvarna Nagar, Just 3 Kms, From Bogadi Signal

30x40, 30x50 Dimension Sites

Contact : 9901467626

3ನೇ ವರ್ಷದ ಸವಿನೆನಪು



ಮಹಾಲಕ್ಷ್ಮಿ
(ಕುಂಬಾರಕೊಪ್ಪಲು)

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ.

ನಿಮ್ಮ ನೆನಪಿನಲ್ಲಿರುವ:
ಪತಿ : ಜವರೇಗೌಡ,
ಮಗ :ಹರೀಶ್.ಜೆ,
ಸೊಸೆ, ಹೆಣ್ಣು ಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು

ವೈಕುಂಠ ಸಮಾರಾಧನೆ



ಶ್ರೀಮತಿ ಎಂ.ಪಿ.ವಿದ್ಯಾ

ಇವರು ದಿನಾಂಕ 20.05.2024 ಸೋಮವಾರ ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ವೈಕುಂಠ ಸಮಾರಾಧನೆಯನ್ನು ದಿ 01.06.2024 ಶನಿವಾರ ಮಧ್ಯಾಹ್ನ 11 ಗಂಟೆಗೆ ಅವರ ಸ್ವಗೃಹ #16, 2ನೇ ಕ್ರಾಸ್, 2ನೇ ಹಂತ, ವಿವೇಕ ವಿದ್ಯಾ ಸ್ಕೂಲ್ ಹಿಂಭಾಗ, ಶ್ರೀರಾಂಪುರ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ತಾಯಿ ಶ್ರೀಮತಿ ಪುಷ್ಪಲತಾ ಮತ್ತು ಮಕ್ಕಳು ಹಾಗೂ ಕುಟುಂಬವರ್ಗ

SBI general INSURANCE

SURAKSHA AUR BHAROSA DONO

ಕಚೇರಿ ಸ್ಥಳ ಅಗತ್ಯವಿದೆ

ಎಸ್‌ಬಿಐ ಜನರಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ಕಂಪನಿಯ ಮೈಸೂರು, ಕರ್ನಾಟಕ ಶಾಖೆಗಾಗಿ ಈ ಕೆಳಗಿನ ಪ್ರದೇಶಗಳಲ್ಲಿ ಗರಿಷ್ಠ 1 ಕಿಲೋಮೀಟರ್ ವ್ಯಾಪ್ತಿಯಲ್ಲಿ ಮುಖ್ಯ ರಸ್ತೆಯಲ್ಲಿ +10% ಹಾಗೂ -5% ವ್ಯಾಪ್ತಿಯಲ್ಲಿ 139.35 ಚದರ ಮೀಟರ್ (1500 ಚದರಡಿ) ಕಾರ್ಪೆಟ್ ಸ್ಥಳವನ್ನು ಹೊಂದಿರುವ ಮಾಲೀಕರಿಂದ ವಾಣಿಜ್ಯ/ಕಚೇರಿ ಬಳಕೆಗೆ ಸ್ವಾಧೀನಕ್ಕೆ ಸಿದ್ಧವಿರುವ ಸ್ಥಳಕ್ಕೆ ಆನ್‌ಲೈನ್ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿದೆ-

1. ಸರಸ್ವತಿ ಪುರಂ
2. ಕುವೆಂಪು ನಗರ
3. ವಿವಿ ಮೊಹಲ್ಲಾ
4. ಕೃಷ್ಣಮೂರ್ತಿಪುರಂ
5. ಜಯಲಕ್ಷ್ಮೀಪುರಂ

ನಿಯಮ ಮತ್ತು ಷರತ್ತುಗಳನ್ನು ಹೊಂದಿರುವ ವಾಣಿಜ್ಯ ಬಿಡ್ ಜೊತೆಗೆ ಆನ್‌ಲೈನ್ ತಾಂತ್ರಿಕ ಬಿಡ್ ಅನ್ನು ಸಲ್ಲಿಸುವ ಮಾದರಿಯನ್ನು ಕಂಪನಿ ವೆಬ್‌ಸೈಟ್ **www.sbigeneral.in** ನಲ್ಲಿ ಟೆಂಡರ್‌ಗಳು ಮತ್ತು ಸ್ವಾಧೀನ ಶೀರ್ಷಿಕೆ ಅಡಿಯಲ್ಲಿ ನೋಡಬಹುದು.

ಪೂರೈಕೆದಾರರ ನೋಂದಣಿ ನಮೂನೆಯನ್ನು ಸಂಭಾವ್ಯ ಮನೆಮಾಲೀಕರು ಭರ್ತಿ ಮಾಡಬೇಕು. ಯಶಸ್ವಿಯಾಗಿ ನೋಂದಣಿ ಮಾಡಿದ ನಂತರ, ಆನ್‌ಲೈನ್ ಆರ್‌ಪಿಎಫ್/ಟೆಂಡರ್ ಮೂಲಕ ಭಾಗವಹಿಸಬಹುದು.

ಎಲ್ಲ ರೂಪದಲ್ಲೂ ಪರಿಪೂರ್ಣವಾದ ಪ್ರಸ್ತಾವನೆಗಳನ್ನು (13/06/2024) ರಂದು ಮಧ್ಯಾಹ್ನ 3 **ಗಂಟೆಗೆ** ಅಥವಾ ಅದಕ್ಕೂ ಮೊದಲು ಸಲ್ಲಿಸಬೇಕು.

ಪ್ರಸ್ತಾವನೆ ಸಲ್ಲಿಸಿರುವ ಸ್ಥಳಗಳು ಸ್ಪಷ್ಟ ಮಾಲೀಕತ್ವ ಹೊಂದಿರಬೇಕು/ ವಾಣಿಜ್ಯ ಬಳಕೆಗೆ ಅನುಮತಿ ಹೊಂದಿರಬೇಕು, ಟೆಲಿಫೋನ್ / ಡೇಟಾ ಸಂಪರ್ಕಕ್ಕೆ ಅನುಕೂಲ ಮತ್ತು ವಾಸಯೋಗ್ಯ ಪ್ರಮಾಣಪತ್ರವನ್ನು ಹೊಂದಿರಬೇಕು. ಅಪೂರ್ಣ ಪ್ರಸ್ತಾವನೆಗಳನ್ನು ತಿರಸ್ಕರಿಸಲಾಗುತ್ತದೆ. ಯಾವುದೇ ಕಾರಣಗಳನ್ನು ನೀಡದೇ ಯಾವುದೇ ಅಥವಾ ಎಲ್ಲ ಪ್ರಸ್ತಾವನೆಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಂಪನಿ ಕಾಯ್ದಿರಿಸಿದೆ ಮತ್ತು ಈ ನಿಟ್ಟಿನಲ್ಲಿ ಯಾವುದೇ ಸಂವಹನವನ್ನು ನಡೆಸಲಾಗದು. **ಯಾವುದೇ ಬ್ರೋಕರೇಜ್ ಅನ್ನು ಪಾವತಿ ಮಾಡಲಾಗುವುದಿಲ್ಲ.**

Head – Infrastructure Management
SBI General Insurance Company Ltd.

Disclaimer: SBI General Insurance Company Limited. Corporate & Registered address: 9th Floor, A&B Wing, Fulcrum Building, Sahar Road, Andheri East, Mumbai - 400099I IRDA Reg No 144 dated 15/12/2009 I CIN: U66000MH2009PLC190546I SBI Logo displayed belongs to State Bank of India used by SBI General Insurance Company Limited under license

IN THE COURT OF THE ASSISTANT COMMISIONER COURT AT HUNSUR

RA. No. 246/2023
Appellant : Jyothirani.A.N
V/S
Respondents: Thasiladhar & others

PUBLIC NOTICE

That the above appellant have filed an appeal against the impugned order passed in MR 12/2020-11 and MRT No 4/2011-12 and MRH 13/2012-13. The Hon'ble court has issued to respondent No 2 and 3 through summons and RPADS, Now, the court summons has served to the other respondents. But, the 2nd respondent's name A.N. Visweshwara S/o A.B.Nagarajaiah, aged about 55 years, and A.A. Umashankara S/o A.B. Nagarajaiah, aged about 43 years both are residing at Havarthi Village, Haranahalli Hobli, Periyapatna Taluk, Mysore Disrict. The above said 2nd and 3rd respondents are intentioinally avoiding the summons to drag on the proceedings. Hence, the Hon'ble Court has ordered to issue public notice by way of paper publication. Hence, this notice.

The above said case is adjourned for the issue of notice and appearance of the above 2nd and 3rd respondents dated 24-06-24 On 3 PM that day, if you are failed to appear before this Hon'ble Court, the Hon'ble Court has to consider as placed exparte order against the respondent No 2nd and 3rd in your, absence. Hence, this notice as per the order of the above said Hon'ble Court.

By order of the Court
Sd/- Assistant Commissioner
Hunsur Sub-division

Advocate for the Appellant.
Hunsur, Date: 16-05-2024.

केनरा बैंक Canara Bank

भारत सरकार का उपक्रम A Government of India Undertaking
सिंडिकेट Syndicate

GENERAL ADMINISTRATION SECTION, REGIONAL OFFICE

NO.26/A, GUEST HOUSE ROAD, NAZARBAD, MYSURU-570010. PH: 2528245.

Hiring of Premises for ATM at Hebbal, Mysuru

Canara Bank intends to take Commercial Premises, preferably ground floor with a minimum carpet area of 70 Sq feet on lease basis from individuals/Firms for ATM at Hebbal, Mysuru.

Offers are invited under TWO BID SYSTEM from the eligible bidders.

The details are published in the Bank's **Website: http://www.canarabank.com** The necessary application forms may be obtained from the above mentioned Office OR downloaded from the Bank's Website under **Announcement Tenders.** Last date for submission of offers is 21.06.2024 up to 3.00 P.M at our office.

Further, communications, corrigendum, amendments, if any, will be hosted in Bank's website only. "BROKERS EXCUSE"

Place: Mysuru
Date : 24.05.2024

Sd/-
Assistant General Manager

4th YEAR REMEMBRANCE



Dr. N. KANNAN

10-01-1936 - 31-05-2020

Our lives go on without you, But nothing is the same
We have to hide our heartache, When someone speaks your name
Sad are the hearts that love you, Silent are the tears that fall
Living here without you is the hardest part of all

A PERFECT FATHER, AND LOVING HUSBAND, AN OUTSTANDING DOCTOR, A MAGNIFICENT HUMAN BEING , HIS LIFE WAS MARKED BY UTTER SIMPLICITY AND UNCOMPROMISING HONESTY, NEVER STRAYING FROM HIS IDEALS, PRINCIPLES AND ETHICS.

We miss you terribly and you will be in our hearts forever.

Deeply Mourned By

Wife :
Romilla Kannan

Children :
Dr. K.Lakshman & Smt. Hemamalini Lakshman
Dr. Praveen Kumar and Smt. Bhavani Praveen Kumar
Smt. Shankari Janardhan & Sri M.N. Janardhan

Grand children : Amreetha, Namitha , Abhijith, Diviya, Deepthi and Lithin

ಹಸಿರು ನಮ್ಮ ಉಸಿರು